# ಅಖಿಲ ಭಾರತ ಪತ್ರಿಕೆ

## ಸೆಪ್ಟೆಂಬರ್ 2024



# ಜೀವನ —
# ಒಂದು ಯಾನ ಮತ್ತು ಆರೋಹಣ

**ಬೆಲೆ : 15/-**



ಫೋಟೊ: ಇಮೇಜಿಂಗ್ ಸಾವಿತ್ರಿ

ಜೀವ–ಚೈತನ್ಯ ಅಂಕುರಿಸಿಕೊಂಡು ಉತ್ಕ್ರಾಂತಿ–ನಿಯತಿ–ಮೂಲ
ಚಿನ್ಮಯದ ಶಿಶುವು ಗರ್ಭದಲಿ ಬೆಳೆದು ಉದಿಸಲೆನೆ ನಿಗದಿ ಕಾಲ.

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 1 ರೇಣು 5 ಪುಟ 76)**

**ಅಖಿಲ ಭಾರತ ಪತ್ರಿಕೆ**

**ಸೆಪ್ಟೆಂಬರ್ 2024**

ಸಂಪುಟ: 34 ಸಂಚಿಕೆ: 09

# ಪರಿವಿಡಿ

## ಜೀವನ —
## ಒಂದು ಯಾನ ಮತ್ತು ಆರೋಹಣ
### (ಲೌಕಿಕದ ಅಸ್ತಿತ್ವದ ಆಂತರ್ಯ)

ಜಡತ್ವದಲ್ಲಿ ದೈವತ್ವದ ಆವಿಷ್ಕಾರ. – ಶ್ರೀ ಅರವಿಂದರು

**ಶ್ರೀಮಾತೆಯವರ ಅಭಿವ್ಯಕ್ತಿಗಳು**

ವಿಶ್ವದಲ್ಲಿ ಏನು ಘಟಿಸುತ್ತಿದೆ? 5
**ಭೌತಿಕದ ಅಸ್ತಿತ್ವದ ಆಂತರ್ಯ** 8
**ದಿವ್ಯ ಯೋಜನೆಯು ತಂತಾನೆ ಪೂರ್ಣ** 15
ಅನು: ಶ್ರೀಮತಿ ವಿಶಾಲಾಕ್ಷೀ ಸತ್ಯನ್

**ಶ್ರೀ ಅರವಿಂದರ ಅಭಿವ್ಯಕ್ತಿಗಳು**

**ಜೀವನ – ಒಂದು ಯಾನ ಮತ್ತು ಆರೋಹಣ** 18
**ದಿವ್ಯ ಚೈತನ್ಯದ ಏಳು ಸ್ತರಗಳು** 21
**ಈ ಲೋಕ–ಜಾಲಕಿದೋ ಸೂತ್ರ** 23
**ಚಿಂತನಗಳು ಮತ್ತು ಸ್ಫುಲಿಂಗಗಳು** 26
ಅನು: ಡಾ॥ ಮಹಾದೇವ ಸಕ್ರಿ

**ಸ್ವಯಂ ಮೋಕ್ಷ ಸೃಷ್ಟಿಯ ಮೂಲ ಉದ್ದೇಶವಲ್ಲ** 30
**ನಮ್ಮಲ್ಲಿ ಪೂರ್ಣತ್ವದ ಅಸ್ತಿತ್ವವೇ ಪ್ರಕೃತಿಯ ಗಮ್ಯ** 34
ಅನು: ಶ್ರೀ ಕಿಶೋರಕುಮಾರ ಕಾಸಾರ

**ಕಾವ್ಯ:**
**ಪೂರ್ಣ ಯೋಗದ ಆಂತರ್ಯ** 40
**ಆಗರ್ಭ–ಬ್ರಹ್ಮ–ಬ್ರಹ್ಮಾಂಡದುದಯ ಗರ್ಭಿಣಿಯ ಗರ್ಭವಾಗ** 43
**ಮಂತ್ರ–ಮಾಯಕದ ರಹಸ್ಯೋದ್ಘಾಟ ಶ್ರುತಿಬದ್ಧಗೊಂಡು ರೂಪ** 44
ಅನು: ಶ್ರೀ ಪುಟ್ಟು ಕುಲಕರ್ಣಿ

**ಶ್ರೀ ಅರವಿಂದರ 'ಗೀತಾ ಪ್ರಬಂಧಗಳು'** 47
ಅನು: ಜಾನ್ವಿ

**ಶ್ರೀ ಅರವಿಂದರ 'ಪೂರ್ಣಯೋಗ ಪಥ'** 57
ಅನು: ಪ್ರೊ. ಕೆ.ಪಿ. ನಂದೀಶ

**ವಾರ್ತಾಪತ್ರ** 64

**ಸಂಪಾದಕರು:**
ಶ್ರೀ ಪುಟ್ಟು ಕುಲಕರ್ಣಿ
ರಾಘವೇಂದ್ರ ಮಠದ ಹಿಂಭಾಗ,
ಗಿಬ್ ಸರ್ಕಲ್, ಹೆರವಟ್ಟ ರಸ್ತೆ,
ಕುಮಟಾ – 581 332.
ಫೋನ್: 9448774920
mayureshwarkp@gmail.com

**ಪರಿಶೀಲನಾ ಸಮಿತಿ:**
ಡಾ॥ ಆರ್.ಕೆ. ಕುಲಕರ್ಣಿ

**ಪ್ರಕಾಶಕರು:**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು:**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.
ಫೋನ್: 080 – 2244 9882
https://www.sriaurobindo
complex.org/archive.php
http://abp.sirinudi.org

**ಡಿ.ಟಿ.ಪಿ.:**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ:**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

## ಸಂಪಾದಕರ ಟಿಪ್ಪಣಿ

ಈ ಮೃಣ್ಮಯದ ಅಸ್ತಿತ್ವದಲ್ಲಿ ಭೌತಿಕವಾಗಿ ಸ್ವರೂಪವನ್ನು ಪಡೆದುಕೊಂಡು, ಅದರಲ್ಲೂ ಚೇತನಾಪೂರ್ಣ (ಪ್ರಜ್ಞಾಪೂರ್ಣ) ಜೀವ(ನ)ವನ್ನು ಪಡೆದುಕೊಂಡಿರುವ ಮೂಲ ಉದ್ದೇಶ ಏನು ಎನ್ನುವದನ್ನು ಶೋಧಿಸುವದೇ ನಮ್ಮ ಮುಖ್ಯ ಪ್ರಯಾಸ–ವಾಗಬೇಕಿದೆ. ಈ ವಾಸ್ತವಿಕತೆಯ ಮಹತ್ವವಾದರೂ ಏನು? ಈ ಬ್ರಹ್ಮಾಂಡದಲ್ಲಿ ಇರುವ ಈ ಸ್ವರೂಪಗಳ ಆಂತರ್ಯವಾದರೂ ಏನು ಎನ್ನುವದನ್ನು ಮಾನವನು ಒಮ್ಮೆ ಅರಿತನೆಂದರೆ, ಅಲ್ಲಿಂದ ಮುಂದೆ ಅದು ಅವನನ್ನು ಯಾವ ಔನ್ನತ್ಯಕ್ಕೆ ಕರೆದೊಯ್ಯಬಹುದು ಮತ್ತು ಬರಲಿರುವ ಭವಿಷ್ಯದಲ್ಲಿ ದಿವ್ಯತ್ವದ ಸ್ವರೂಪ ಏನು ಎನ್ನುವ ವಿಷಯಗಳ ಕುರಿತು ಶ್ರೀಮಾತಾಅರವಿಂದರ ಅಭಿವ್ಯಕ್ತಿಗಳನ್ನು ಈ ಸಂಚಿಕೆಯಲ್ಲಿ ರೂಪಿಸಲಾಗಿದೆ. (ಎಐಎಮ್)

*

## ಸಂಪಾದಕೀಯ

### ಶ್ರೀ ಅರವಿಂದರು ಮತ್ತು ಪೂರ್ಣಯೋಗದ ಸಮನ್ವಯತೆ; ಒಂದು ಅಧ್ಯಯನ

ಶ್ರೀ ಶಂಕರಾಚಾರ್ಯರು ಶೈವ, ಶಾಕ್ತ, ಗಾಣಾಪತ್ಯ, ಕುಮಾರ, ವಿಷ್ಣು ಮತ್ತು ಸೌರ ಪಂಥಗಳನ್ನು ಸಮನ್ವಯಗೊಳಿಸಿ “ಷಣ್ಮತ ಸ್ಥಾಪನಾಚಾರ್ಯ”ರೆಂದು ಆರಾಧಿಸಲ್ಪಡುತ್ತಿದ್ದಾರೆ. ಇವರ ಕೊಡುಗೆ ಬಹುತೇಕವಾಗಿ ಬೌದ್ಧಿಕ– ಸೈದ್ಧಾಂತಿಕ–ಹಂತದಲ್ಲಿಯೇ ಇದೆ. ಇದರ ಪ್ರಭಾವದಲ್ಲಿಯೇ ಸ್ವರೂಪ ಮತ್ತು ಆಯಾಮಗಳನ್ನು ಕಂಡುಕೊಂಡ ‘ಕಾಶ್ಮೀರ ಶೈವ ಪಂಥ’ವೂ ಸಹಿತ ‘ಶಾಕ್ತ, ಅಘೋರ, ಭೈರವ, ಕಾಪಾಲಿಕ, ಕಾಳಾಮುಖ ಮತ್ತು ವೀರಶೈವ’ ಹಂತದಲ್ಲಿ ಭಾರತೀಯ ದೈನಂದಿನ ಬದುಕಿನ ಆಯಾಮಗಳನ್ನು ಹಾಗು ಅವುಗಳ ಸ್ವರೂಪವನ್ನು ಅನುಷ್ಠಾನಗೊಳ್ಳುತ್ತ ಪರಂಪರೆಯಾಗಿರುವದನ್ನು ರೂಪಿಸಿದೆ. ಇವೆಲ್ಲ ಪಥಗಳ ಮೂಲಕ ರೂಪು ತಾಳಿದ ಜ್ಞಾನದ, ಆರಾಧನೆಯ, ಅನುಷ್ಠಾನದ ಪಥಗಳಲ್ಲಿ ಹಠಯೋಗ, ಜ್ಞಾನಯೋಗ, ಕರ್ಮಯೋಗ, ಭಕ್ತಿಯೋಗ ಮತ್ತು ರಾಜಯೋಗಗಳೂ ಆಯಾಮ ನಿರ್ಮಿಸಿವೆ.

ಶ್ರೀ ಶಂಕರಾಚಾರ್ಯರಿಗೂ ಮತ್ತು ಕಾಶ್ಮೀರ ಶೈವ ಪಂಥಕ್ಕೂ ಕನಿಷ್ಠ 7–8 ಶತಮಾನಗಳ ಅಂತರವಿದೆ. ಕಾಶ್ಮೀರ ಶೈವ ಪಂಥದ ವಿಕಾಸವು 12 ನೇ

ಶತಮಾನದವರೆಗೂ ಮುಂದುವರೆದು 'ವೀರಶೈವ ಹಂತದಲ್ಲಿ' ಪೂರ್ಣಗೊಂಡಿದೆ. ಈ ವೀರಶೈವ ಹಂತವು ದಕ್ಷಿಣ ಭಾರತದ ಅಸ್ಮಿತೆಯೂ ಆಗಿದೆ.

ನಿಯತಿಯ ಪ್ರಕಾರವಾಗಿಯೇ ಮತ್ತೆ 800 ವರ್ಷಗಳ ನಂತರ ಇಂತಹದೇ ಒಂದು ಸಮನ್ವಯತೆಯನ್ನು ವಿಕಾಸವು ಬಯಸಿತ್ತು. ಅದನ್ನು ಈಡೇರಿಸುವ ಸಲುವಾಗಿಯೇ ಶ್ರೀ ಅರವಿಂದರ ಅಭಿವ್ಯಕ್ತಿಗಳಿವೆ. ಅಲ್ಲಿ ಆರು ಹಂತಗಳಲ್ಲಿ ಇದ್ದದ್ದು, ಇಲ್ಲಿ ಕೇವಲ ನಾಲ್ಕು ಹಂತಗಳಲ್ಲಿ ಸಮನ್ವಯಗೊಳಿಸುವ ಪಥವನ್ನು ಶ್ರೀಅರವಿಂದರು ತೋರಿದ್ದಾರೆ. ಇದು ಯೋಗದ ಹಿನ್ನೆಲೆಯಲ್ಲಿ 'ಭಕ್ತಿಯೋಗ, ಕರ್ಮಯೋಗ, ಜ್ಞಾನಯೋಗ ಮತ್ತು ರಾಜಯೋಗ'ದ ಹಂತಗಳಲ್ಲಿ ವಿಕಾಸವಾಗಿರುವ ಅಂಶಗಳನ್ನು ಸಮನ್ವಯಗೊಳಿಸಕೊಂಡು 'ಪೂರ್ಣಯೋಗ'ವಾಗುವದನ್ನು ಸಂಕೇತಿಸುತ್ತಿದ್ದಾರೆ.

ಇವೆಲ್ಲ ಸಂಗತಿಗಳಿಗಿಂತ ಅತ್ಯಂತ ಪ್ರಧಾನ ವಿಷಯದಲ್ಲಿ "ಮಹಾಮಾಯಾ, ಮಹಾಲಕ್ಷ್ಮೀ, ಮಹಾಕಾಳಿ ಮತ್ತು ಮಹಾಸರಸ್ವತಿ" ಎನ್ನುವ ಆಯಾಮದಲ್ಲಿ ಶ್ರೀ ಅರವಿಂದರ ಪಥವಿದೆ. ಈ ಸ್ತ್ರೀ ಪ್ರಾಧಾನ್ಯತೆಯ ವಿಶೇಷತೆ, ಈ ಹಿಂದೆಯೇ ಅಗಸ್ತ್ಯ ಮಹರ್ಷಿಯಿಂದ 'ಸೂತ್ರಗೊಳಿಸಲ್ಪಟ್ಟಿದೆ'. ಅಗಸ್ತ್ಯ ಮಹರ್ಷಿಯ 'ಶ್ರೀ ಲಲಿತಾ ಸಹಸ್ರನಾಮ'ದ ಹಿನ್ನೆಲೆಯಲ್ಲಿ, ಶ್ರೀ ಅರವಿಂದರ 'ಸಾವಿತ್ರಿ'ಯನ್ನು ಗಮನಿಸಬೇಕಿದೆ. ಅದೇ ರೀತಿಯಲ್ಲಿ ಆಧುನಿಕ ವಿಜ್ಞಾನದ ಖಭೌತ ಶಾಸ್ತ್ರ, ಮನೋವಿಜ್ಞಾನದ ಹಿನ್ನೆಲೆಯೂ ಇಲ್ಲಿ ಅತ್ಯಾವಶ್ಯವಾಗಿದೆ.

ಇನ್ನು ಪ್ರಚಲಿತ ಬದುಕಿನ ವ್ಯವಸ್ಥೆಯಲ್ಲಿಯೂ ಹಿಂದೂ, ಕ್ರೈಸ್ತ, ಮುಸ್ಲಿಂ ಮತ್ತು ಬೌದ್ಧ ಪರಂಪರೆಗಳ ಸಮನ್ವಯದ ಬದುಕಿನ ಟಂಕಶಾಲೆಯಾಗಿ ಭಾರತ ರೂಪುಗೊಳ್ಳುತ್ತಿದೆ. ಈ ನಾಲ್ಕನ್ನೂ ಅವುಗಳ ಅಸ್ಮಿತೆಯಲ್ಲಿಯೇ ಸಮನ್ವಯ–ಗೊಳಿಸಬೇಕೇ? ಅಥವಾ 'ಪೂರ್ಣಯೋಗದ' ಹಿನ್ನೆಲೆಯಲ್ಲಿ ಮತ್ತೊಂದು ನವೀನ ವೈಶ್ವಿಕ ಆಯಾಮದ ಸ್ವರೂಪವು ಉದಿತವಾಗುತ್ತಿದೆಯೋ? ಇದಕ್ಕೆ ಪೂರಕವಾಗಿ ವೈಜ್ಞಾನಿಕ ವಲಯದಲ್ಲಿ ನಡೆದಿರುವ ವೇಗೋತ್ಕರ್ಷದ ಪ್ರಗತಿಯು, ಮಾನವ ಕುಲವನ್ನು ಸಂಪೂರ್ಣ ವೈಜ್ಞಾನಿಕ ಆಯಾಮದಲ್ಲಿಯೇ, ಅದರಲ್ಲೂ ಮನೋವೈಜ್ಞಾನಿಕ ಹಂತದ ಚೇತನಾ ವಿಕಾಸದ ಹಂತದಲ್ಲಿ ಇರುವದನ್ನು ಅವರು ಸಂಕೇತಿಸುತ್ತಿದ್ದಾರೆ.

ಇಲ್ಲಿ ಮುಖ್ಯವಾಗಿ, ಶ್ರೀ ಅರವಿಂದರ ಕೊಡುಗೆ ಇವೆಲ್ಲವನ್ನೂ ಆಧರಿಸಿಕೊಂಡೇ ಇರುವದರಿಂದ, ಅದರಲ್ಲೂ ಕಾಶ್ಮೀರ ಶೈವ ಪಂಥದ ಗ್ರಂಥಗಳಾದ 'ಭೈರವ ತಂತ್ರ, ಪ್ರತ್ಯಭಿಜ್ಞಾ ಹೃದಯ, ಹಾಗೂ ಅಭಿನವಗುಪ್ತ'ನ ಎಲ್ಲ ಗ್ರಂಥಗಳ ಬಗೆಗೆ ನಾವು ಅಧ್ಯಯನ ಮಾಡಲೇಬೇಕಾಗುತ್ತದೆ. ಭಾರತದಲ್ಲಿ ಇಲ್ಲಿಯವರೆಗೂ ಅಸ್ತಿತ್ವದಲ್ಲಿರುವ

ಉನ್ನತ ಶಿಕ್ಷಣ ಪದ್ಧತಿಯಲ್ಲಿ ನಡೆದ ವಿಚಲನಾ ಕ್ರಿಯೆಯು, ಈ ಅಧ್ಯಯನದ ಹಂತದಲ್ಲಿ ಒಂದು ಶೂನ್ಯವನ್ನು ಸೃಷ್ಟಿಸಿದೆ. ಇಂದು ಕಾಶ್ಮೀರ ಶೈವ ಪಂಥದ ಗ್ರಂಥಗಳ ಅಧ್ಯಯನಕ್ಕೆ ಮಾರ್ಗದರ್ಶಕರು ಸಿಗುವದು ದುರ್ಲಭವಾಗಿದೆ. ಅದೇ ರೀತಿಯಲ್ಲಿ, ಶಾಕ್ತ ಪಂಥದ ಗ್ರಂಥಗಳನ್ನೂ ಸಹಿತ ವ್ಯವಸ್ಥಿತವಾಗಿಯೇ ಅಧ್ಯಯನದಿಂದ ದೂರವೇ ಇಡಲಾಗಿದೆ.

ಈ ಎಲ್ಲ ಸವಾಲುಗಳ ಸುನಾಮಿಯಲ್ಲಿ ಶ್ರೀ ಅರವಿಂದರ ಅಭಿವ್ಯಕ್ತಿಗಳನ್ನು ಅನುಸಂಧಾನ ಮಾಡಿಕೊಳ್ಳುವ ಧ್ವನಿಗಳು ಅಲ್ಲಲ್ಲಿ ಇದ್ದರೂ ಕ್ಷೀಣವಾಗಿಯೇ ಇವೆ.

ವಿಕಾಸದ ಸೂತ್ರಗಳೆಂದೇ ಕರೆಯಲ್ಪಡುವ ವೇದ ಮತ್ತು ಉಪನಿಷತ್ತುಗಳಿಗೂ ಕೂಡ ನವೀನ ಆಯಾಮದ ಸ್ವರೂಪವನ್ನು ಶ್ರೀ ಅರವಿಂದರು ರೂಪಿಸಿದ್ದಾರೆ. ಅದಕ್ಕೆ ಮುಖ್ಯವಾಗಿ, ಈ ಎಲ್ಲ ವಿಷಯಗಳು ಹೊಂದಿರುವ “ಭಾಷಾ ವ್ಯವಸ್ಥೆಯ” ಕುರಿತು ಮೊದಲು ನಾವು ಅರಿತುಕೊಳ್ಳಲೇಬೇಕಾಗಿದೆ. ಭಾರತೀಯ ಮನೋಚೇತನಕ್ಕೆ ಮತ್ತು ಹೃದಯಕ್ಕೆ ನಾದ ಸ್ವರೂಪದಲ್ಲಿ ಸ್ಪಂದಗೊಳ್ಳುತ್ತಿರುವ ಈ ‘ಶಬ್ದಬ್ರಹ್ಮ’ವು ಪಂಚ ಭೂತಗಳಲ್ಲಿ ಒಂದಾದ ‘ಆಕಾಶ ತತ್ತ್ವ’ ಎನ್ನುವ ಬಗೆಗೆ ಯಾವುದೇ ಸಂಶಯವೇ ಇಲ್ಲ. ಆದರೆ, ಪಾಶ್ಚಾತ್ಯ ಭಾಷಾ ವ್ಯವಸ್ಥೆಯ ಚಿಂತನದಲ್ಲಿ, ಕೇವಲ ನಾಲ್ಕೇ ನಾಲ್ಕು ತತ್ತ್ವಗಳು ಇವೆ. ಅದರಲ್ಲೂ ಇಂಗ್ಲೀಷಿನಲ್ಲಿಯೂ ಸಹಿತ ಈ ರೀತಿಯ ಆಕಾಶ ತತ್ತ್ವವನ್ನು ರೂಪಿಸಿದ ಶ್ರೇಯಸ್ಸು ಶ್ರೀ ಅರವಿಂದರಿಗೇ ಸಲ್ಲುತ್ತದೆ.

ಇದೀಗ ಶ್ರೀ ಅರವಿಂದರ ಜೀವನದ 152 ನೇ ವರ್ಷದ ಅವಧಿಯಲ್ಲಿ, ನಾವೆಲ್ಲ ಈ ದಿಕ್ಕಿನಲ್ಲಿ ಸಾಗಬೇಕೆಂದುಕೊಳ್ಳುತ್ತಿರುವಾಗ ಇರುವ ಪಥದ ಸ್ಥಿತಿ. ಇದು ಯಾರೋ ಓರ್ವ ವ್ಯಕ್ತಿಯಿಂದ ಮಾತ್ರವೇ ಸಾಧ್ಯವೆನ್ನುವದು ಕಲ್ಪನಾತೀತ. ಅಲ್ಲಲ್ಲಿ ಅಲ್ಲಲ್ಲಿ ಕ್ಷೀಣವಾಗಿದ್ದರೂ ಸಹಿತ ಸ್ಪಂದಗೊಳ್ಳುತ್ತಿರುವ ಧ್ವನಿಗಳು ಮೇಳೈಸಿಕೊಳ್ಳುವ ಸಲುವಾಗಿ, ಅವಕಾಶವೂ ನಿರ್ಮಾಣ ಮಾಡಿಕೊಡುತ್ತಿದೆ. ಇನ್ನುಳಿದಿರುವದು, ಆ ಪಥದಲ್ಲಿ ಸಾಗುವ ಅಭೀಪ್ಸೆ ಮಾತ್ರ.

ಇವುಗಳನ್ನು ಆಧರಿಸಿಕೊಂಡ ಚರ್ಚೆ, ಅಧ್ಯಯನ, ಚಿಂತನೆ, ಜಿಜ್ಞಾಸೆ ಪ್ರಾರಂಭಗೊಳ್ಳಲಿ ಎಂದು ಆಶಿಸುತ್ತೇನೆ. ತರ್ಕದ ಪಥದಲ್ಲಿ ಜಿಜ್ಞಾಸೆಯ ಮೂಲಕವೇ ಜ್ಞಾನವು ಗಮಿಸಲೇಬೇಕಾಗುತ್ತದೆ, ಆದರೆ ಇಲ್ಲಿ ತರ್ಕವೇ ಗಮ್ಯವಲ್ಲ ಎನ್ನುವದು ಮುಖ್ಯ ಸಂಗತಿ. ಏಕೆಂದರೆ ಗಮ್ಯವು ಇನ್ನೂ ಅನೂಹ್ಯವಾಗಿಯೇ ಇದೆ. ಹಾಗೆಂದು ಅಜ್ಞಾತವಾಗಿಯೇ ಉಳಿಯುತ್ತದೆ ಎಂತೇನು ಅಲ್ಲ. ಈ ತರ್ಕಸಮ್ಮತ ಪಥದಲ್ಲಿ ನಮ್ಮ ಯಾನ ಮುಂದುವರೆಸೋಣವೇ? (ಪಿಪಿಕೆ)

# ವಿಶ್ವದಲ್ಲಿ ಏನು ಸಂಭವಿಸುತ್ತಿದೆ

**– ಅನು: ಶ್ರೀಮತಿ ವಿಶಾಲಾಕ್ಷೀ ಸತ್ಯನ್, ಬೆಂಗಳೂರು**

(ಓ ಭಗವಂತನೇ)

ನಿನ್ನ ಧವಳ ಕೀರ್ತಿಯ ವೈಭವ ಮತ್ತು ನಿನ್ನ ನಿಯಮಗಳ ವೈವಿಧ್ಯತೆಯನ್ನು ಯಾವ ಪದಗಳು ತಾನೆ ವರ್ಣಿಸಬಲ್ಲವು? ನಿನ್ನ ಪ್ರಜ್ಞೆಯ ಪರಿಪೂರ್ಣತೆ ಮತ್ತು ಪ್ರೇಮದ ಅನಂತ ಮಹದಾನಂದವನ್ನು ಯಾವ ಪದಗಳು ವ್ಯಕ್ತಪಡಿಸಬಲ್ಲವು?

ನಿನ್ನ ಅನಿರ್ವಚನೀಯ ಶಾಂತಿಯನ್ನು ಯಾವ ಪದಗಳು ಗಾಯನ ಮಾಡಲು ಸಾಧ್ಯ? ನಿನ್ನ ಮೌನದ ಮಹಿಮೆಯನ್ನು ಮತ್ತು ನಿನ್ನ ಸರ್ವ ಶಕ್ತ ಸತ್ಯದ ಭವ್ಯತೆಯನ್ನು ಯಾವ ಪದಗಳು ಸಂಭ್ರಮಿಸಬಲ್ಲವು?

ನಿನ್ನ ವೈವಿಧ್ಯತೆಗಳ ಬಗ್ಗೆ ಮಾತನಾಡಲು ಮತ್ತು ನಿನ್ನ ಅದ್ಭುತಗಳನ್ನು ತಿಳಿಸಲು ಇಡೀ ಪ್ರಕಟಿತ ವಿಶ್ವವು ಸಾಕಾಗುವದಿಲ್ಲ. ಕಾಲದ ನಿರಂತರತೆಯಲ್ಲಿ ಇದನ್ನೇ ಅದು ಹೆಚ್ಚು ಹೆಚ್ಚಾಗಿ ಮತ್ತು ಉತ್ತಮೋತ್ತಮವಾಗಿ ಮಾಡಲು ಪ್ರಯತ್ನಿಸುತ್ತಿರುವದು, ಶಾಶ್ವತವಾಗಿ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 1/306**

*ಒಂದು ನಿರ್ದಿಷ್ಟ ಗುರಿಯನ್ನು ಸೃಷ್ಠಿಯು ಹೊಂದಿದೆಯೇ? ಅದರ ಚಲನೆಗೆ ಮುಕ್ತಾಯವೆಂಬುದಿದೆಯೇ?*

ಇಲ್ಲ, ನಿರಂತರವಾಗಿ ತನ್ನಂತೆ ತಾನೇ ಸುರುಳಿಬಿಚ್ಚಿ ತೋರಿಸಿಕೊಳ್ಳುತ್ತಿರುವ ಚಲನೆಯಾಗಿದೆ ಈ ವಿಶ್ವ. ಇದೇ ಅಂತ್ಯ ಮತ್ತು ಇದೇ ಧ್ಯೇಯ ಎಂದು ಯಾವುದನ್ನೂ ಸಹ ದೃಢವಾಗಿ ಹೇಳಲು ಶಕ್ಯವಿಲ್ಲ. ಆದರೆ ಕಾರ್ಯದ ನಿಮಿತ್ತವಾಗಿ ಚಲನೆಯನ್ನು ನಾವು ವಿಭಾಗಿಸಬಹುದು. ಅದೇ ಸ್ವತಃ ಅಂತ್ಯ ರಹಿತ. ಕಾರ್ಯದಲ್ಲಿ ತೊಡಗಿರುವಾಗ ನಮಗೊಂದು ಗುರಿಯ ಅವಶ್ಯಕತೆಯಿರುವದರಿಂದ ಇದೇ ಗುರಿ ಅದೇ ಧ್ಯೇಯವೆಂದು ಹೇಳಬಹುದು. ಒಂದು ಚಿತ್ರದೊಳಗೆ ಬಣ್ಣ ಮತ್ತು ಸಂಯೋಜನೆಯ ಒಂದು ನಿರ್ದಿಷ್ಟ ನಕ್ಷೆಯು ನಿನಗೆ ಅಗತ್ಯ. ನೀನೊಂದು ಪರಿಮಿತಿಯ ಒಳಗೆ ಕೆಲಸ ಮಾಡಬೇಕು; ಸಮಸ್ತವನ್ನೂ ಒಂದು ದೃಢವಾದ ಚೌಕಟ್ಟಿನೊಳಗೆ ವ್ಯವಸ್ಥಿತಗೊಳಿಸಬೇಕು; ಆದರೆ ಪರಿಮಿತಿಯು ಭ್ರಾಂತಿಕಾರಕವಾಗಿದೆ.

ಆಕಾರವು ಔಪಚಾರಿಕ ಮಾತ್ರ. ಯಾವುದೇ ನಿರ್ದಿಷ್ಟ ಆಕಾರದ ಹೊರಗೆ ಚಾಚಿಕೊಳ್ಳುತ್ತಿರುವ ಚಿತ್ರವು ನಿರಂತರವಾಗಿ ಮುಂದುವರಿಯುತ್ತಿದೆ ಮತ್ತು ಪ್ರತಿಯೊಂದು ಮುಂದುವರಿಕೆಯು ಸಮನಾದ ಪರಿಸ್ಥಿತಿಗಳಲ್ಲಿ ಅಂತ್ಯರಹಿತ ಆಕಾರಗಳ ಸರಣಿಯಾಗಿ ಚಿತ್ರಿತವಾಗುತ್ತಿದೆ. ನಾವು ನಮ್ಮ ಗುರಿಯು ಇದು ಅಥವಾ ಅದು ಎಂದು ಹೇಳುತ್ತೇವೆ. ಆದರೆ ಅದು ಅದರಾಚೆಗಿನ ಮತ್ತೊಂದು ಗುರಿಯ ಪ್ರಾರಂಭ ಎಂದು ನಾವು ಅರಿತಿರುವೆವು ಮತ್ತು ಅದು ಪುನಃ ಮತ್ತೊಂದರ ಕಡೆಗೆ ಮಾರ್ಗದರ್ಶನ ಮಾಡುತ್ತದೆ; ಸರಣಿಗಳು ಯಾವಾಗಲೂ ಅಭಿವೃದ್ಧಿಹೊಂದುತ್ತವೆ ಮತ್ತು ಎಂದಿಗೂ ನಿಲ್ಲುವದಿಲ್ಲ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/31–32**

ಪ್ರಪಂಚವು ನಿರಂತರವಾಗಿ ಬದಲಾಗುತ್ತಿದೆ. ಒಂದೇ ಒಂದು ಕ್ಷಣವೂ ಅದು ಬದಲಾಗದಿರುವದಿಲ್ಲ. ಮತ್ತು ಸಾಮಾನ್ಯ ಸಾಮರಸ್ಯವು ಅಧಿಕಾಧಿಕ ಪರಿಪೂರ್ಣವಾಗಿ ವ್ಯಕ್ತವಾಗುತ್ತಿದೆ; ಆದುದರಿಂದ ಬದಲಾಗದಿರುವಂತೆ ಗೋಚರಿಸಿದರೂ ಯಾವುದೂ ಇದ್ದಂತೆಯೇ ಇರುವದಿಲ್ಲ. ಪೂರ್ಣವು ಯಾವಾಗಲೂ ನಿರಂತರವಾಗಿ ಪ್ರಗತಿ ಪಥದಲ್ಲಿ ಇದೆ; ಸಾಮರಸ್ಯ ಮತ್ತಷ್ಟು ಸಮರಸಭರಿತವಾಗುತ್ತಿದೆ. ಅಭಿವ್ಯಕ್ತತೆಯಲ್ಲಿ ಸತ್ಯವು ಹೆಚ್ಚು ಹೆಚ್ಚಾಗುತ್ತಿದೆ; ಆದರೆ ಅದನ್ನು ನೋಡಲು, ಯಾರಾದರೂ ಪೂರ್ಣದ ಕಡೆ ಗಮನ ಹರಿಸಬೇಕು ಅಷ್ಟೇ. ಮತ್ತು ಮಾನವನು ಭಾಗಶಃ ಮಾತ್ರ ನೋಡುವನು .... ಮಾನವ ಕಾರ್ಯಕ್ಷೇತ್ರವನ್ನು ಸಹ ಪೂರ್ಣವಾಗಿ ಗಮನಿಸುವದಿಲ್ಲ ತನ್ನ ವೈಯಕ್ತಿಕ ಕಾರ್ಯಕ್ಷೇತ್ರವನ್ನು ಮಾತ್ರ ನೋಡುವನು. ಅದು ಬಹಳ ಚಿಕ್ಕದು, ಅತ್ಯಲ್ಪ – ಅವನಿಗೆ ಅರ್ಥವೇ ಆಗುವದಿಲ್ಲ.

ಅದು ತನ್ನನ್ನೇ ತಾನು ಪೂರ್ಣಗೊಳಿಸಿಕೊಳ್ಳುತ್ತಿರುವ ಒಂದು ದ್ವಿಮುಖ ವಸ್ತು (ಒಂದರೊಳಗೊಂದು ಮಿಶ್ರಣವಾಗುತ್ತಿರುವ ಅದೇ ಚಹರೆ) ಮತ್ತು ಅದು ಪರಸ್ಪರ ಕ್ರಿಯೆಯನ್ನೂ ಸಹ ಹೊಂದಿದೆ; ಪ್ರಕಟಣೆಯು ತನ್ನ ಪ್ರಜ್ಞೆಯನ್ನು ತಾನೇ ಹೆಚ್ಚು ಹೆಚ್ಚಾಗಿ ಪಡೆಯತೊಡಗಿದಾಗ, ಅದರ ಅಭಿವ್ಯಕ್ತತೆಯು ಸ್ವತಃ ಪರಿಪೂರ್ಣಗೊಳ್ಳುವದು ಮತ್ತು ಹೆಚ್ಚು ಸತ್ಯವೂ ಆಗತೊಡಗುವುದು. ಎರಡು ಚಲನೆಗಳು ಜೊತೆಗೂಡಿ ಸಾಗುವವು. *(26ನೇ ಆಗಸ್ಟ್ 1967)*

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 11/76**

... ಏನೆಲ್ಲಾ ಸಂಭವಿಸುವದೋ ಅದೆಲ್ಲಾ ಸೃಷ್ಟಿಯ ಧ್ಯೇಯವು ಸಂಪೂರ್ಣವಾಗಿ ತೆರೆದುಕೊಳ್ಳಲು ಅವಶ್ಯಕ. ಯಾರಾದರೂ ಹೀಗೆ ಹೇಳಬಹುದು: ಜೀವಿಯು ಸೃಷ್ಟಿಕರ್ತನ ರೀತಿಯಲ್ಲಿ ಪ್ರಜ್ಞಾಭರಿತನಾಗುವದೇ ಸೃಷ್ಟಿಯ ಗುರಿ. ಅಲ್ಲಿದೆ! ಅದೊಂದು ವಾಕ್ಯಾಂಗ, ಆದರೆ ಅದು ಆ ದಿಕ್ಕಿನಲ್ಲಿದೆ. ಅನಂತತೆ, ಸರ್ವಶಕ್ತವಾದ ನಿರಂತರತೆ – ಅನಂತ, ನಿರಂತರ, ಸರ್ವಶಕ್ತ (ನಮ್ಮ ಮತಗಳು ದೇವರೆಂದು ಕರೆಯುವವು: ನಮಗೆ ಜೀವನಕ್ಕೆ ಸಂಬಂಧಿತವಾದ ದೈವತ್ವ) .... ಕಾಲದ ಆಚೆ – ಇವೆಲ್ಲವುಗಳ ಪ್ರಜ್ಞೆಯೇ ಈ ಸೃಷ್ಟಿಯ ಗುರಿಯಾಗಿದೆ. ಪ್ರತಿಯೊಂದು ಪ್ರತ್ಯೇಕ ಅಣುವೂ ಈ ಪ್ರಜ್ಞೆಯನ್ನು ಪಡೆಯಬೇಕಾಗಿದೆ. ಪ್ರತಿಯೊಂದು ಪ್ರತ್ಯೇಕ ಅಣುವೂ ಇದೇ ಪ್ರಜ್ಞೆಯನ್ನು ಹೊಂದಿರಬೇಕಾಗಿದೆ.

ವಿಭಜನೆಯೇ ಪ್ರಪಂಚವನ್ನು ಸೃಷ್ಟಿಸಿರುವದು. ಮತ್ತು ನಿರಂತರತೆಯು ಸ್ವತಃ ಪ್ರಕಟವಾಗುವದು ವಿಭಜನೆಯಲ್ಲಿಯೇ. ನಮ್ಮ ಭಾಷೆಯು .... (ಅಥವಾ ನಮ್ಮ ಪ್ರಜ್ಞೆಯು) ಅಪರಿಪೂರ್ಣ. *(25ನೇ ಡಿಸೆಂಬರ್ 1971)*

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 11/289**

ಇಡೀ ಸೃಷ್ಟಿಯು ದೈವತ್ವವನ್ನು ಮಾತ್ರ ಅಪೇಕ್ಷಿಸಬೇಕು. ದೈವತ್ವವನ್ನು ಮಾತ್ರ ಪ್ರಕಟಪಡಿಸಬೇಕು. ಅದು ಮಾಡುವದೆಲ್ಲವೂ, ಅದರ ಎಲ್ಲಾ ತಪ್ಪುಗಳೂ ಸಹ ಇಡೀ ಸೃಷ್ಟಿಯು ದೈವತ್ವವನ್ನು ಪ್ರಕಟಪಡಿಸಲೇಬೇಕಾದ ಪ್ರಸಂಗವನ್ನು ತಂದೊಡ್ಡುತ್ತಿರುವ ಹಾದಿ ಎಂದು ಹೇಳಬಹುದು – ಎಲ್ಲಾ ನಿರ್ಬಂಧನೆಗಳೊಂದಿಗಿನ ಮಾನವ ಕಲ್ಪನೆಯ "ಇದು ಮತ್ತು ಅದಲ್ಲ" ಎಂಬ ದೈವತ್ವವಿದಲ್ಲ: ಪ್ರಚಂಡ ಶಕ್ತಿ ಮತ್ತು ಪ್ರಕಾಶದ ಒಕ್ಕೂಟ. ಅದು ನಿಜಕ್ಕೂ, ಪ್ರಪಂಚದೊಳಗೆ ಇರುವ ಶಕ್ತಿ, ಪ್ರಪಂಚದೊಳಗೆ ಬಂದಿರುವ ಒಂದು ನವ ಅತ್ಯಮೋಘ ಶಕ್ತಿ. ಅದು ತನ್ನನ್ನು ತಾನು ಪ್ರಕಟಪಡಿಸಿಕೊಳ್ಳಬೇಕು ಮತ್ತು ಈ ಸಮಸ್ತ ದೈವಿಕ ಶಕ್ತಿಯು ಪ್ರಕಟವಾಗುವಂತೆ ಮಾಡಬೇಕಾಗಿದೆ (ಅದನ್ನು ಹಾಗೆ ಹೇಳಬಹುದಾದರೆ).

... ನಾನು ಈ ನಿರ್ಧಾರಕ್ಕೆ ಬಂದಿರುವೆ. ನಾನು ದರ್ಶಿಸಿರುವೆ, ನಾನು ಗಮನಿಸಿರುವೆ ಮತ್ತು ನಾವು ಯಾವುದನ್ನು "ಸುಪ್ರಾಪ್ರಜ್ಞೆ" (ಹೆಚ್ಚು ಉತ್ತಮವಾದ ಪದದ ಅಭಾವದಿಂದ) ಎಂದು ಕರೆಯುವೆವೋ ಅದನ್ನು ದರ್ಶಿಸಿರುವೆ. ಈ ಸುಪ್ರಾಪ್ರಜ್ಞೆ ಸೃಷ್ಟಿಯು ಉನ್ನತ ಶಕ್ತಿಗೆ ತೀವ್ರವಾಗಿ ಪ್ರತಿಕ್ರಿಯಿಸುವಂತೆ ಮಾಡುವದು;

ಅದನ್ನು ನಾವು ದೈವಿಕ ಎಂದು ಕರೆಯುವವು. ಏಕೆಂದರೆ ನಾವು .... ನಾವು ಈಗ ಇರುವ ಸ್ಥಿತಿಗೆ ಅದು ದೈವಿಕ ಆದರೆ .... (ಅವರೋಹಣ ಮತ್ತು ಒತ್ತಡದ ಚಹರೆ) ಅದು ಶಕ್ತಿಗೆ ಭೌತವಸ್ತುವು ತೀವ್ರವಾಗಿ ಪ್ರತಿಕ್ರಿಯಿಸುವಂತೆ ಮತ್ತು ಹೆಚ್ಚು 'ಸಂವೇದನಾಶೀಲ'ವಾಗಿರುವಂತೆ ಮಾಡಬೇಕಾಗಿದೆ. *(6ನೇ ಮೇ 1972)*

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 11/315**

ಸತ್ತೆಯಲ್ಲಿ ಎಲ್ಲವೂ ಮೌನವಾಗಿದೆ, ಆದರೆ ಮೌನದ ಆಂತರ್ಯದಲ್ಲಿ ಒಂದು ದೀಪವು ಬೆಳಗುತ್ತಿದೆ ಅದನ್ನು ಆರಿಸಲಾಗುವದಿಲ್ಲ. ದೈವವನ್ನು ಸಮಗ್ರವಾಗಿ ಅರಿತು ಜೀವಿಸಬೇಕು ಎಂಬ ಉತ್ಕಟ ಅಭೀಪ್ಸೆಯ ಜ್ವಾಲೆಯು ಅದಾಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/474 ಶ್ರೀಮಾತೆ**

ನೀನು ಮಾತ್ರ – ಅಷ್ಟೇ

ಮತ್ತು ಸೃಷ್ಟಿಯು ಅದನ್ನೇ ತನ್ನ ಗುರಿಯಾಗಿ ಹೊಂದಿದೆ ಎಂಬುದು ಸುಸ್ಪಷ್ಟವಾಗಿದೆ, ಆ ಅದ್ಭುತವಾದ ಮಹದಾನಂದ .... ನೀನೇ ಆಗಿರುವಂತಹ ಅನುಭವ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 11/268 ಶ್ರೀಮಾತೆ**

## ಭೌತಿಕದ ಅಸ್ತಿತ್ವದ ಆಂತರ್ಯ

ಆಕೆಯ ಬುಧವಾರದ ತರಗತಿಯಲ್ಲಿ 'ದೈವೀ ಜೀವನ' ಪುಸ್ತಕದ ಕೊನೆಯ ಆರು ಅಧ್ಯಾಯಗಳನ್ನು ಓದಲು ಶ್ರೀಮಾತೆ ಪ್ರಾರಂಭಿಸಿದರು.

*ಒಂದು ಆಧ್ಯಾತ್ಮಿಕ ವಿಕಸನ, ನಿರಂತರವಾಗಿ ಅಭಿವೃದ್ಧಿ ಹೊಂದುತ್ತಿರುವ ಸ್ವ–ರಚನೆಯಲ್ಲಿ ಭೌತವಸ್ತುವಿನ ಪ್ರಜ್ಞೆಯ ವಿಕಸನ. ಆಕಾರವು ತನ್ನ ಆಂತರ್ಯದಲ್ಲಿರುವ ಚೇತನವನ್ನು ಬಹಿರಂಗಗೊಳಿಸುವವರೆಗೂ ಈ ಕ್ರಿಯೆಯು ಮುಂದುವರೆಯುವದು. ಇದೇ ಮುಖ್ಯವಾದ ಅಂಶ, ಪ್ರಾಪಂಚಿಕ ಅಸ್ತಿತ್ವದ ಕೇಂದ್ರೀಕೃತ ಪ್ರಮುಖ ಧ್ಯೇಯವಾಗಿದೆ. ಚೇತನ, ದೈವೀ ನೈಜತೆಯ ಅಂತರ್ನಿವಿಷ್ಟತೆಯ ಮೂಲಕ ಬಾಹ್ಯದಲ್ಲಿ ಈ ಪ್ರಭಾವವು ಗೋಪ್ಯವಾಗಿದೆ,*

*ಗಾಢವಾದ ಭೌತ ಅಧೋ ಚೇತನದಲ್ಲಿ, ಅದರೊಳಗೆ ಕೆಲಸ ಮಾಡುತ್ತಿರುವ ವಿಶ್ವಾತೀತ ಪ್ರಜ್ಞಾ-ಶಕ್ತಿಯನ್ನು ಭೌತದ ಸಂವೇದನಾರಹಿತತೆಯ ಪರದೆ ಅಥವಾ ಅಧೋ ಚೇತನದ ಪರದೆಯು ಕಾಣದಂತೆ ಮಾಡುವದು. ಇದರಿಂದ ಭೌತ ವಿಶ್ವದಲ್ಲಿ ಸೃಷ್ಟಿಯ ಶಕ್ತಿಯು ತನ್ನ ಮೊದಲ ರೂಪ ಅಥವಾ ಚೈತನ್ಯದ ರೂಪವನ್ನು ಪಡೆಯುವದು, ಅದು ಅಧೋ ಚೇತನದಂತೆ ಗೋಚರಿಸುವದು ಆದರೆ ವಿಸ್ತಾರವಾದ ಇಂದ್ರಿಯಾತೀತ ಬೌದ್ಧಿಕತೆಯ ಕೆಲಸಗಳನ್ನು ನೆರವೇರಿಸುವದು.*

**ಶ್ರೀ ಅರವಿಂದೋ, ದೈವೀ ಜೀವನ, SABCL (ಶ್ರೀ ಅರವಿಂದೋ ಜನ್ಮ ಶತಾಬ್ದಿ ಸಂಪುಟ) 19, ಪುಟ 824**

ವಿಶ್ವಾತೀತ ಅಸ್ತಿತ್ವದ ತತ್ತ್ವ ಮತ್ತು raison dêtreಗಳ ನೈಜತೆಯನ್ನು ಸೂಚಿಸುವ ಈ ಒಂದನೇ ವಾಕ್ಯವನ್ನು ನಾವು ಮೊದಲು ಅರ್ಥಮಾಡಿಕೊಳ್ಳಬೇಕಾಗಿದೆ; ನೋಡಿ, ನಾವು ಇಲ್ಲಿ ಪುಸ್ತಕದ ಅಂತ್ಯ ಭಾಗದಿಂದ ಪ್ರಾರಂಭಿಸುತ್ತಿದ್ದೇವೆ. ಇವೇ ಕೊನೆಯ ಆರು ಅಧ್ಯಾಯಗಳು. ವಿಶ್ವದ ಅಸ್ತಿತ್ವ ಮತ್ತು ಅದರ ಹೇಗೆ ಮತ್ತು ಏಕೆಯನ್ನು ವಿವರಿಸುವ ಸಿದ್ಧಾಂತಗಳೆಲ್ಲವನ್ನೂ ಶ್ರೀ ಅರೊವಿಂದೋ ಪುಸ್ತಕದ ಪ್ರಾರಂಭದುದ್ದಕ್ಕೂ ವಿಶದಪಡಿಸಿರುವರು; ಅವುಗಳ ಅರ್ಥವನ್ನು ಸಂಪೂರ್ಣವಾಗಿ ವಿವರಿಸಲು, ಕೊನೆಯವರೆಗೂ ಕೊಂಡೊಯ್ದು, ಅವುಗಳು ಎಷ್ಟು ಅಪೂರ್ಣ ಅಥವಾ ಅಪರಿಪೂರ್ಣ ಎಂಬುದನ್ನು ತೋರಿಸಿ ಸಮರ್ಪಕವಾದ ಪರಿಹಾರವನ್ನು ಸಹ ಕೊಟ್ಟಿರುವರು. ಅವುಗಳೆಲ್ಲವೂ ಇಲ್ಲಿಗೆ ಮುಕ್ತಾಯವಾದಂತಿದೆ. ಅವೆಲ್ಲವೂ ನಮ್ಮ ಅಧ್ಯಯನದ ಹಿಂದುಗಡೆ ಇದೆ. ಅವುಗಳೆಲ್ಲವನ್ನೂ ಓದಿ ಮುಗಿಸಲು ಸುಮಾರು 10 ವರ್ಷಗಳು ಬೇಕಾಗಬಹುದು; ಮತ್ತು ಅವುಗಳನ್ನು ಅರ್ಥಮಾಡಿಕೊಂಡು ಲಾಭ ಪಡೆಯಲು ನಿಮಗೆ ಎಲ್ಲಾ ವಿಧದ ಜ್ಞಾನ ಮತ್ತು ಶ್ರೇಷ್ಠ ಬೌದ್ಧಿಕ ಅಭಿವೃದ್ಧಿಯ ಅವಶ್ಯಕತೆಯೂ ಸಹ ಉಂಟಾಗುವದು. ಆದರೆ ನಮ್ಮ ಪರಿಸ್ಥಿತಿಯಲ್ಲಿ, ಅವರು ಎಲ್ಲಿಂದ ತೋರಿಸಿದ್ದಾರೋ ಅಲ್ಲಿಂದಲೇ ಪ್ರಾರಂಭಿಸುತ್ತಿದ್ದೇವೆ. ಪರಿಶುದ್ಧ ಬೌದ್ಧಿಕ ದೃಷ್ಟಿಕೋನದ ಮೂಲಕ ಅಸ್ತಿತ್ವದ ಗುರಿಯಾದರೂ ಏನು? ಅದನ್ನು ಅವರು ಈ ರೀತಿ ಸೂತ್ರೀಕರಿಸಿದ್ದಾರೆ: "ಪ್ರಾಪಂಚಿಕ ಅಸ್ತಿತ್ವದ ಕೇಂದ್ರೀಕೃತ ಪ್ರಮುಖ ಧ್ಯೇಯ."



**ಅಧೋ ಚೇತನದಿಂದ ಹೊರಹೊಮ್ಮುತ್ತಿರುವ ದೈವೀ ಪ್ರಜ್ಞೆ**
(ಶ್ರೀಮಾತೆಯವರು ಚಿತ್ರವನ್ನು ಬರೆದು ಅದಕ್ಕೆ ನೀಡಿರುವ ನಾಮಧೇಯ)

ಅವರು ಇಡೀ ವಿಶ್ವದ ಬಗ್ಗೆ ಆಸಕ್ತಿಯನ್ನು ಹೊಂದಿಲ್ಲ. ಹೀಗಾಗಿ ಇಡೀ ವಿಶ್ವದ ಗುರಿಯ ಸಾಂಕೇತಿಕ ಮತ್ತು ಕೇಂದ್ರೀಕೃತ ಪ್ರತಿನಿಧಿಯಾಗಿ ಭೂಮಿಯ ಮೇಲಿನ ನಮ್ಮ ಜೀವನವನ್ನು ಅಂದರೆ ಪ್ರಾಪಂಚಿಕ ಜೀವನವನ್ನು ಆರಿಸಿಕೊಂಡಿದ್ದಾರೆ. ನಿಜಕ್ಕೂ, ಅತ್ಯಂತ ಪುರಾತನ ಸಂಪ್ರದಾಯಗಳ ಪ್ರಕಾರ ಆಳವಾದ ಆಧ್ಯಾತ್ಮಿಕ ದೃಷ್ಟಿಕೋನದಲ್ಲಿ ಭೂಮಿಯು ವಿಶ್ವಾತೀತ ಜೀವನದ ಸಾಂದ್ರೀಕೃತ ಸಂಕೇತವಾಗಿ ಸೃಷ್ಟಿಯಾಗಿದೆ. ಏಕೆಂದರೆ ಪರಿಮಿತ, ಕೇಂದ್ರೀಕೃತ 'ಜಾಗದಲ್ಲಿ' ಪರಿವರ್ತನೆಯ ಕಾರ್ಯವು ಹೆಚ್ಚು ಸುಲಭವಾಗಿ ನೆರವೇರುವದು ಎಂದು ಹೇಳಬಹುದು – ಎಲ್ಲಿ

ಸಮಸ್ಯೆಯ ಎಲ್ಲಾ ಅಂಶಗಳು ಜೊತೆಗೂಡಿವೆಯೋ ಅಲ್ಲಿ, ಅಂದರೆ ಕೇಂದ್ರೀಕೃತವಾಗಿರುವಾಗ ಕಾರ್ಯವು ಹೆಚ್ಚು ಸಂಪೂರ್ಣ ಮತ್ತು ಪರಿಣಾಮಕಾರಿ. ಆದುದರಿಂದ ಇಲ್ಲಿ ಅವರು ಪ್ರಾಪಂಚಿಕ ಅಸ್ತಿತ್ವದ ಬಗ್ಗೆ ಮಾತ್ರ ಮಾತನಾಡುತ್ತಾರೆ. ಆದರೆ ಅದು ಸಾಂಕೇತಿಕ ಅಸ್ತಿತ್ವ ಎಂದು ನಾವು ಅರ್ಥಮಾಡಿಕೊಳ್ಳಬಹುದು. ಅಂದರೆ ಅದು ವಿಶ್ವಾತೀತ ಕಾರ್ಯವನ್ನು ಪ್ರತಿನಿಧಿಸುತ್ತದೆ. ಅದೊಂದು ಸಾಂಕೇತಿಕ, ಸಾಂದ್ರೀಕೃತ ಪ್ರತಿನಿಧಿ. ಮತ್ತು ಅವರು ಹೇಳುತ್ತಾರೆ "ಕೇಂದ್ರೀಕೃತ ಧ್ಯೇಯ" ಅಂದರೆ ಭೌತದ ಮಧ್ಯ ಭಾಗದಲ್ಲಿ ಅಡಗಿಸಿರುವ ಚೇತನವನ್ನು ಜಾಗೃತಗೊಳಿಸಿ, ಅಭಿವೃದ್ಧಿಗೊಳಿಸಿ ಸಂಪೂರ್ಣವಾಗಿ ಪ್ರಕಟಗೊಳಿಸುವದೇ ಆಗಿದೆ. ಅಥವಾ ಇದೇ ಪ್ರಾಪಂಚಿಕ ಅಸ್ತಿತ್ವದ ಗುರಿಯಾಗಿದೆ. ಈ ಚೇತನವು ಭೌತವನ್ನು ಆಂತರ್ಯದಿಂದ ಪ್ರಗತಿಪರ ಅಭಿವೃದ್ಧಿಯ ಕಡೆ ಹೊರಹೊಮ್ಮಲು ಪ್ರೇರೇಪಿಸುತ್ತಿದೆ. ಇದರಿಂದ ಆಂತರ್ಯದಿಂದ ಕೆಲಸ ಮಾಡುತ್ತಿರುವ ಚೇತನವು ಹೊರಹೊಮ್ಮುವದು. ಹೀಗಾಗಿ, ನೀವು ನೋಡುತ್ತಿರುವಂತೆ ಬಾಹ್ಯ ಗೋಚರಿಸುವಿಕೆಗಳಲ್ಲಿ, ಮೊದಲಿಗೆ ಶಿಲೆಗಳು, ಭೂಮಿ, ಖನಿಜಗಳನ್ನು ಹೊಂದಿರುವ ಖನಿಜ ಸಾಮ್ರಾಜ್ಯವು ನಿಮಗೆ ಕಾಣುವದು. ಅವುಗಳು ನಮ್ಮ ಬಾಹ್ಯ ಪ್ರಜ್ಞೆಯಲ್ಲಿ ಸಂಪೂರ್ಣವಾಗಿ ಅಪ್ರಜ್ಞಾವಸ್ಥೆಯಲ್ಲಿ ಇರುವವೆಂದು ನಮಗೆ ಅನಿಸುವದು. ಆದರೂ ಈ ಪ್ರಜ್ಞಾರಹಿತ ಸ್ಥಿತಿಯ ಹಿಂದೆ ಚೇತನದ ಜೀವವು ಇದೆ ಅಥವಾ ಚೇತನದ ಪ್ರಜ್ಞೆಯು ಇದೆ, ಅದು ನಿದ್ರೆಯಲ್ಲಿರುವದೋ ಎಂಬಂತೆ ಸಂಪೂರ್ಣವಾಗಿ ಗೋಪ್ಯವಾಗಿದೆ – ಅದು ಒಂದು ಗೋಚರಿಸುವಿಕೆ ಮಾತ್ರ – ಮತ್ತು ಗೋಚರಿಸುವಿಕೆಯಲ್ಲಿ ಪೂರ್ತಿಯಾಗಿ ಜಡವಾಗಿರುವ ಭೌತವನ್ನು ನಿಧಾನವಾಗಿ ಪರಿವರ್ತನೆಗೊಳಿಸಲು ಒಳಗಿನಿಂದ ಅದು ಕೆಲಸ ಮಾಡುತ್ತಿದೆ. ಇದರಿಂದ ಪ್ರಜ್ಞೆಯ ಅಭಿವ್ಯಕ್ತಿಗೆ ಅದರ ವ್ಯವಸ್ಥೆಯು ಹೆಚ್ಚು ಹೆಚ್ಚಾಗಿ ಉಪಯುಕ್ತವಾಗುವದು. ಅವರು ಹೇಳುತ್ತಾರೆ ಪ್ರಾರಂಭದಲ್ಲಿ ಜಡ ಭೌತದ ಈ ಪರದೆಯು ಎಷ್ಟು ಗಾಢವಾಗಿ ಇದೆಯೆಂದರೆ, ಮೇಲ್ಮೈ ನೋಟಕ್ಕೆ ಅದು ಜೀವವನ್ನಾಗಲೀ ಅಥವಾ ಪ್ರಜ್ಞೆಯನ್ನಾಗಲೀ ಹೊಂದಿಲ್ಲ ಎನ್ನಿಸುವದು. ನೀವು ಒಂದು ಕಲ್ಲನ್ನು ಕೈಯಲ್ಲಿ ಹಿಡಿದು ನಿಮ್ಮ ಸಾಮಾನ್ಯ ಕಣ್ಣುಗಳು ಮತ್ತು ಪ್ರಜ್ಞೆಯ ಮೂಲಕ ಅದನ್ನು ಗಮನಿಸಿದರೆ ನೀವು ಅದಕ್ಕೆ "ಜೀವವು ಇಲ್ಲ ಮತ್ತು ಪ್ರಜ್ಞೆಯು ಇಲ್ಲ" ಎಂದೇ ಹೇಳುವಿರಿ. ಆದರೆ ಗೋಚರಿಸುವಿಕೆಗಳ ಹಿಂದೆ ನೋಡಬಲ್ಲವನಿಗೆ, ಭೌತದ ಮಧ್ಯ ಭಾಗದಲ್ಲಿ ಅಡಗಿರುವ – ಈ ಭೌತದ ಪ್ರತಿಯೊಂದು ಕಣದ ಮಧ್ಯ ಭಾಗದಲ್ಲಿ ಇರುವ – ಆಂತರ್ಯದೊಳಗಿಂದ ಕೆಲಸ

ಮಾಡುತ್ತಿರುವ ಪರಮೋತ್ತಮ. ದೈವೀ ಸನ್ನಿಧಿ ಅಲ್ಲಿ ಅಡಗಿರುವದು ಕಾಣಿಸುವದು. ನಿಧಾನವಾಗಿ, ಸಹಸ್ರಾರು ವರ್ಷಗಳಲ್ಲಿ ಆಂತರ್ಯದಲ್ಲಿರುವ ಚೇತನವನ್ನು ವ್ಯಕ್ತಪಡಿಸಬಲ್ಲ ಶಕ್ತಿಯನ್ನು ಈ ಜಡ ಭೌತವು ಪಡೆಯುವಂತೆ ಮಾಡಲು ಪರಮೋತ್ತಮ ದೈವೀ ಅಸ್ತಿತ್ವವು ಕಾರ್ಯ ಗೈಯುತ್ತಿದೆ. ನಂತರದಲ್ಲಿ ಜೀವದ ಚರಿತ್ರೆಯ ಪ್ರಗತಿಯನ್ನು ನೀವು ಕಾಣುವಿರಿ. ಹೀಗೆ, ಪ್ರಾರಂಭಿಕ ಜೀವವು ಇದ್ದಕ್ಕಿದ್ದಂತೆ ಕಲ್ಲಿನೊಳಗಿಂದ ಕಾಣತೊಡಗಿತು ಮತ್ತು ವರ್ಗಗಳ ಸರಣಿಯಿಂದ ಒಂದು ವಿಧವಾದ ವ್ಯವಸ್ಥೆ, ಅಂದರೆ, ಜೀವವನ್ನು ಹೊರಹೊಮ್ಮಿಸಿ ತೋರಿಸಬಲ್ಲ ಒಂದು ಸಾವಯುವ ವಸ್ತು. ಆದರೆ ಖನಿಜ ಮತ್ತು ಸಸ್ಯಗಳ ಸಾಮ್ರಾಜ್ಯದ ನಡುವೆ ಸಂಕ್ರಮಣ ಧಾತುಗಳು ಇವೆ. ಅವು ಖನಿಜಗಳ ಗುಂಪಿಗೆ ಸೇರಿದವೋ ಅಥವಾ ಈಗಾಗಲೇ ಸಸ್ಯ ಜಾತಿಗೆ ಸೇರಿದವೋ ಎಂಬುದು ಯಾರಿಗೂ ಗೊತ್ತಿಲ್ಲ – ಯಾರಾದರೂ ಇದನ್ನು ಆಳವಾಗಿ ಅಧ್ಯಯನ ಮಾಡಿದರೆ, ಆ ವರ್ಗಗಳು ವಿಚಿತ್ರವಾಗಿವೆ ಅವು ಯಾವುದೇ ನಿರ್ದಿಷ್ಟ ಗುಂಪಿಗೆ ಸೇರಿದವಲ್ಲ ಎಂಬ ಸತ್ಯವು ಗೋಚರಿಸುವದು. ನಂತರದಲ್ಲಿ ಸಸ್ಯ ಸಾಮ್ರಾಜ್ಯದ ಅಭಿವೃದ್ಧಿಯಾಯಿತು. ಅಲ್ಲಿ ಸಹಜವಾಗಿ ಜೀವವು ಕಾಣಿಸಿತು, ಏಕೆಂದರೆ ಅಲ್ಲಿ ವೃದ್ಧಿಯನ್ನು ಪರಿವರ್ತನೆಯನ್ನು ಕಾಣುವೆವು – ಒಂದು ಗಿಡವು ಮೊಳಕೆಯೊಡೆಯುವದು, ಅಭಿವೃದ್ಧಿ ಹೊಂದುವದು, ಬೆಳೆಯುವದು – ಮತ್ತು ಜೀವದ ಮೊದಲ ವಿದ್ಯಮಾನದೊಂದಿಗೆ ಕೊಳೆತ ಮತ್ತು ವಿಭಜನೆಗಳೂ ಸಹ ಸಂಭವಿಸುವವು. ಇವು ಕಲ್ಲಿನಲ್ಲಿ ಸಂಭವಿಸುವದಕ್ಕಿಂತ ಹೆಚ್ಚು ವೇಗವಾಗಿ ಉಂಟಾಗುವವು. ಇತರ ಶಕ್ತಿಗಳ ಹೊಡೆತಕ್ಕೆ ಸಿಗದಂತೆ ಕಲ್ಲನ್ನು ಕಾಪಾಡಿದರೆ ಅದು ನಿರಂತರವಾಗಿ ಹಾಗೆ ಇರುವದು. ಆದರೆ ಗಿಡವು ಬೆಳವಣಿಗೆಯ ವಕ್ರರೇಖೆಯನ್ನು ಅನುಸರಿಸುತ್ತದೆ. ಅದೇ ಆರೋಹಣ ಮತ್ತು ಬಾಗುವಿಕೆ ಮತ್ತು ಕೊಳೆಯುವಿಕೆ – ಅತ್ಯಧಿಕ ಹಿಡಿತಕ್ಕೆ ಒಳಪಟ್ಟ ಪ್ರಜ್ಞೆಯೊಂದಿಗೆ ಇದು ಸಂಭವಿಸುವದು. ಸಸ್ಯ ಸಾಮ್ರಾಜ್ಯವನ್ನು ಆಳವಾಗಿ ಅಧ್ಯಯನ ಮಾಡಿರುವವರು ಅದರಲ್ಲಿ ಪ್ರಜ್ಞೆಯು ಸ್ಥಿರವಾಗಿರುವದನ್ನು ಅರಿತಿರುವರು. ಉದಾಹರಣೆಗೆ ಗಿಡಗಳು ಜೀವಿಸಲು ಸೂರ್ಯನ ಬೆಳಕು ಅವಶ್ಯಕ – ಅವುಗಳು ಬೆಳೆಯುವಂತೆ ಮಾಡುವ ಕ್ರಿಯಾಶೀಲ ಚೈತನ್ಯವನ್ನು ಸೂರ್ಯನು ಪ್ರತಿನಿಧಿಸುತ್ತಾನೆ. – ಆದುದರಿಂದ, ಸೂರ್ಯನ ಬೆಳಕು ಇಲ್ಲದೆ ಇರುವ ಜಾಗದಲ್ಲಿ ನೀವು ಒಂದು ಗಿಡವನ್ನು ಹಾಕಿದರೆ ಅದು ಬೆಳೆಯುತ್ತಾ ಸೂರ್ಯನ ಬೆಳಕನ್ನು ತಲುಪುವ ಪ್ರಯತ್ನವನ್ನು ಮಾಡುತ್ತದೆ. ಪರಿಶುದ್ಧವಾದ ಕಾಡಿನಲ್ಲಿ, ಉದಾಹರಣೆಗೆ, ಮಾನವನು ಹಸ್ತಕ್ಷೇಪ ಮಾಡದಿರುವ

ಜಾಗದಲ್ಲಿ ಎಲ್ಲಾ ಗಿಡಗಳು ಸೂರ್ಯನ ಬೆಳಕನ್ನು ತಲುಪಲು ನೇರವಾಗಿ ಬೆಳೆಯಲು ಪ್ರಯತ್ನಿಸುತ್ತಿರುವವು. ಹೀಗಾಗಿ ಅವುಗಳ ನಡುವೆ ಒಂದು ವಿಧದ ಸಂಘರ್ಷವು ಏರ್ಪಡುವದು. ಅದು ಬಹಳ ಕುತೂಹಲಕಾರಿಯಾಗಿ ಇರುವದು. ಆದರೆ ಗೋಡೆಗಳಿಂದ ಸುತ್ತುವರಿಯಲಾಗಿರುವ ಸಣ್ಣ ಅಂಗಳದಲ್ಲಿ ಒಂದು ಹೂ ಕುಂಡವನ್ನು ಇಟ್ಟರೂ ಅಲ್ಲಿ ಸೂರ್ಯನ ಬೆಳಕು ಇಲ್ಲದಿದ್ದರೆ, ಸಾಮಾನ್ಯವಾಗಿ ಇಷ್ಟು ಎತ್ತರವಿರುವ ಗಿಡವು (ಚಹರೆ) ಅಷ್ಟು ದೊಡ್ಡದಾಗಿ ಬೆಳೆಯುವದು; ಅದು ಮೇಲುಗಡೆಗೆ ಹಿಗ್ಗಿ ಬೆಳಕನ್ನು ಪಡೆಯುವ ಪ್ರಯತ್ನವನ್ನು ಮಾಡುವದು. ಆದುದರಿಂದ ಒಂದು ಪ್ರಜ್ಞೆ, ಜೀವಿಸಬೇಕೆಂಬ ಒಂದು ಸಂಕಲ್ಪವು ಇದೆ. ಅದು ಈಗಾಗಲೇ ಪ್ರಕಟವಾಗುತ್ತಿದೆ. ಅಲ್ಪ ಸ್ವಲ್ಪವಾಗಿ ಹೆಚ್ಚು ಅಭಿವೃದ್ಧಿ ಹೊಂದಿದ ವರ್ಗಗಳೊಂದಿಗೆ ನೀವು ಮತ್ತೊಂದು ಸಂಕ್ರಮಣದ ಸ್ಥಿತ್ಯಂತರವನ್ನು ತಲುಪುವಿರಿ. ಅದೇ ಸಂಪೂರ್ಣವಾಗಿ ನಸ್ಯವೂ ಅಲ್ಲದೆ ಆದರೆ ಇನ್ನೂ ಪ್ರಾಣಿಯ ಅವಸ್ಥೆಯನ್ನು ತಲುಪಿರದ ವರ್ಗ; ಇಂತಹ ಹಲವಾರು ವರ್ಗಗಳು ಇವೆ; ಅವು ಬಹಳ ಕುತೂಹಲಕಾರಿಯಾಗಿವೆ. ತೆರೆದ ಬಾಯಿಯಂತಿರುವ ಗಿಡಗಳು, ಅಂದರೆ ಮಾಂಸಾಹಾರಿಯಾದ ಗಿಡಗಳು. ನೀವೊಂದು ಕೀಟವನ್ನು ಅದರೊಳಗೆ ಎಸೆದರೆ, ಟಪ್! ಅವು ಅದನ್ನು ನುಂಗಿಬಿಡುವವು. ಅದು ಈಗ ಗಿಡವಾಗಿ ಉಳಿದಿಲ್ಲ, ಆದರೆ ಅದಿನ್ನೂ ಪ್ರಾಣಿಯಾಗಿಲ್ಲ. ಇಂತಹ ಗುಂಪಿಗೆ ಸೇರಿದ ಅನೇಕ ಗಿಡಗಳಿವೆ.

ನಂತರ ನೀವು ಪ್ರಾಣಿಯ ಕಡೆ ದೃಷ್ಟಿ ಹರಿಸಿ. ಮೊದಲಿನ ಪ್ರಾಣಿಗಳು, ಹೌದು, ಇವುಗಳನ್ನು ಗಿಡಗಳಿಂದ ಪ್ರತ್ಯೇಕಿಸಿ ನೋಡುವದು ಬಹಳ ಕಷ್ಟ. ಬಹುಪಾಲು ಪ್ರಜ್ಞಾರಹಿತವಾದವು. ಆದರೆ ಎಲ್ಲಾ ಪ್ರಾಣಿ ವರ್ಗಗಳನ್ನು ಗಮನಿಸಿ; ನಿಮಗೆ ಅವು ಗೊತ್ತು, ಅಲ್ಲವೇ? ಉನ್ನತ ಹಂತದ ಪ್ರಾಣಿಗಳವರೆಗೂ ನಿಮಗೆ ಗೊತ್ತು. ಅವು ನಿಜಕ್ಕೂ ಅತ್ಯಧಿಕ ಪ್ರಜ್ಞೆಯನ್ನು ಹೊಂದಿರುವವು. ಅವುಗಳು ತಮ್ಮದೇ ಆದ ಸಂಪೂರ್ಣವಾಗಿ ಸ್ವತಂತ್ರವಾದ ಸಂಕಲ್ಪವನ್ನು ಹೊಂದಿರುವವು. ಅವುಗಳು ಅತ್ಯಧಿಕ ಪ್ರಜ್ಞಾಭರಿತವಾದವು ಮತ್ತು ಅಸಾಧಾರಣವಾದ ಬುದ್ಧಿಶಕ್ತಿಯನ್ನು ಹೊಂದಿವೆ; ಉದಾ: ಆನೆಯ ತರಹ. ನಿಮಗೆ ಆನೆಯನ್ನು ಉದ್ದೇಶಿಸಿದ ಎಲ್ಲಾ ಕಥೆಗಳು ಗೊತ್ತಿವೆ. ಮತ್ತು ಅವುಗಳ ಅದ್ಭುತವಾದ ಮೇಧಾವಿತನವು ಸಹ ತಿಳಿದಿದೆ. ಆದುದರಿಂದ, ಅದು ಈಗಾಗಲೇ ಗ್ರಹಿಸಲು ಸಾಧ್ಯವಾಗುವ ಮನಸ್ಸಿನ ಆಗಮನ. ಮತ್ತು ಈ ಪ್ರಗತಿಪರ ಅಭಿವೃದ್ಧಿಯ ಮೂಲಕ, ನಾವು ಈಗಾಗಲೇ ಕಾಣದಾಗಿ ಹೋಗಿರುವ ವರ್ಗವನ್ನು ಅಕಸ್ಮಾತ್ತಾಗಿ ಪ್ರವೇಶಿಸುವೆವು – ಅವುಗಳ ಗುರುತುಗಳು

ಕಾಣಿಸಿವೆ. ಮಂಗನಂತಹ ನಡುವಣ ಪ್ರಾಣಿ ಅಥವಾ ಮಂಗನಂತಹುದೇ – ಸುಮಾರು ಅದೇ ರೀತಿಯಲ್ಲಿರುವದು, ನಮಗೆ ತಿಳಿದಿರುವ ಮಂಗನಲ್ಲದಿರ–ಬಹುದು – ಆದರೆ ಈಗಾಗಲೇ ಎರಡು ಕಾಲುಗಳಲ್ಲಿ ನಡೆಯುವ ಪ್ರಾಣಿ. ಅಲ್ಲಿಂದ ನಾವು ಮನುಷ್ಯನಿಗೆ ಬರುತ್ತೇವೆ. ಮಾನವನ ವಿಕಸನದ ಇಡೀ ಪ್ರಾರಂಭವು ಇಲ್ಲಿಂದಲೇ. ಆತನು ಅತ್ಯಂತ ಬುದ್ಧಿಶಾಲಿ ಎಂದು ನಾವು ಹೇಳಲಿಕ್ಕೆ ಸಾಧ್ಯವೇ? ಆದರೆ ಈಗಾಗಲೇ ಮನಸ್ಸಿನ ಕ್ರಿಯೆಯು ಪ್ರಾರಂಭವಾಗಿದೆ; ಸ್ವಾತಂತ್ರ್ಯದ ಆರಂಭ. ಪ್ರಕೃತಿಯ ಶಕ್ತಿಗಳು ಮತ್ತು ಪರಿಸರದ ಕಡೆಗೆ ಒಂದು ಸ್ವತಂತ್ರವಾದ ಪ್ರತಿಕ್ರಿಯೆ. ಆದುದರಿಂದ, ಮಾನವನಲ್ಲಿ ಒಂದು ಇಡೀ ಶ್ರೇಣಿಯೇ ಇದೆ; ಇದು ಆಧ್ಯಾತ್ಮಿಕ ಜೀವನವನ್ನು ಸಾಗಿಸಬಲ್ಲ ಉನ್ನತ ಸತ್ತೆಯವರೆಗೂ ಸಾಗಿ ಹೋಗುವದು.

ಈ ಪುಟದಲ್ಲಿ ಶ್ರೀ ಅರೊವಿಂದೋರವರು ನಮಗೆ ಇದನ್ನೇ ಹೇಳಿರುವದು. ... ಆತನ ಅತ್ಯುನ್ನತ ಶ್ರೇಣಿಯಲ್ಲಿ, ಮಾನವನು ಪ್ರಕೃತಿಯಿಂದ ಸಂಪೂರ್ಣವಾಗಿ ಸ್ವತಂತ್ರನಾಗಬಲ್ಲನು. 'ಸಂಪೂರ್ಣವಾಗಿ' ಎಂಬುದು ಉತ್ಪ್ರೇಕ್ಷೆ; ಸ್ವತಃ ತನ್ನಲ್ಲಿ ಆಧ್ಯಾತ್ಮಿಕ ಪ್ರಜ್ಞೆಯನ್ನು ಅರಿತ ಮಾನವನು, ದೈವೀ ಮೂಲದೊಂದಿಗೆ ನೇರ ಸಂಪರ್ಕವನ್ನು ಹೊಂದಿರುವವನು. ನಿಜಕ್ಕೂ ಅಕ್ಷರಶಃ ಪ್ರಕೃತಿಯಿಂದ ಮತ್ತು ಪ್ರಕೃತಿಯ ಶಕ್ತಿಯಿಂದ ಸ್ವತಂತ್ರನು.

*(ಮಳೆ ಬರಲು ಪ್ರಾರಂಭವಾಗುವದು.)* ಆ! ಅದು ನಮ್ಮ ಮನಸ್ಸುಗಳನ್ನು ಶಾಂತಪಡಿಸಲಿಕ್ಕಾಗಿ!

*(ಎಲ್ಲರೂ ನಗುವರು)*

ಅದನ್ನೇ ಅವರು ಹೀಗೆ ಕರೆಯುವರು "ತನ್ನನ್ನೇ ಮೀರಿ ಮುನ್ನಡೆಯುವದು", ಅಂದರೆ, ಸತ್ತೆಯು, ಆಂತರಿಕ ದೈವೀ ಪ್ರಜ್ಞೆ, ಪರಮೋತ್ತಮ ಆಧ್ಯಾತ್ಮಿಕ ಅಸ್ತಿತ್ವವು ಅಭಿವೃದ್ಧಿಪಡಿಸುವ ಅದರ ಪ್ರಯತ್ನದಲ್ಲಿ... (ಮಳೆ ಜೋರಾಗುವುದು) ಓ, ಓ! ನಾವು ಮಾತನಾಡುವದನ್ನು ನಿಲ್ಲಿಸಬೇಕು... ತನ್ನನ್ನು ತಾನು ಸ್ವತಃ ಪ್ರಕಟಪಡಿಸಿಕೊಳ್ಳಲು ಒಂದು ಪ್ರಜ್ಞಾಭರಿತ ಉಪಕರಣವನ್ನು ಅಭಿವೃದ್ಧಿಪಡಿಸುವ ಪ್ರಯತ್ನದಲ್ಲಿ ಅದು ತನ್ನೊಂದಿಗೆ ನೇರ ಸಂಪರ್ಕವನ್ನು ಹೊಂದಿರುವ ಒಂದು ಸತ್ತೆಯನ್ನು ನಿರ್ಮಿಸಿದೆ. ಆ ಸತ್ತೆಯು ಪ್ರಕೃತಿಯ ಇಡೀ ಪ್ರಕ್ರಿಯೆಯ ಮೂಲಕ ಸಾಗಬೇಕಾಗಿಲ್ಲ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 9/209–13 – ಶ್ರೀಮಾತೆ**

*ಮಾನವರಿಗೆ ಈ ಸತ್ಯವನ್ನು ಬೋಧಿಸಲು ಶ್ರೀ ಅರೊವಿಂದೋರವರು ಭೂಮಿಗೆ ಬಂದರು. ಮಾನಸಿಕ ಪ್ರಜ್ಞೆಯಲ್ಲಿ ಜೀವಿಸುತ್ತಿರುವ ಒಂದು ಸಂಕ್ರಮಣ ಕಾಲದ ಸತ್ತೆ ಮಾತ್ರವಾಗಿರುವನು ಮಾನವ ಎಂದು ಆತನು ಅವರಿಗೆ ಹೇಳಿದನು. ಆದರೆ ಒಂದು ನವ ಪ್ರಜ್ಞೆಯನ್ನು ಪಡೆಯಬಹುದಾದ ಸಾಧ್ಯತೆಯನ್ನು ಹೊಂದಿರುವನು; ಅದೇ ಸತ್ಯ–ಪ್ರಜ್ಞೆ, ಸಂಪೂರ್ಣವಾಗಿ ಪ್ರಜ್ಞಾಭರಿತ, ಸಂತಸಭರಿತ, ಸುಂದರ, ಉತ್ತಮ ಮತ್ತು ಸಾಮರಸ್ಯಭರಿತ ಪರಿಪೂರ್ಣ ಜೀವನವನ್ನು ಜೀವಿಸುವ ಶಕ್ತಿಯನ್ನು ಹೊಂದಿರುವನು. ಭೂಮಿಯ ಮೇಲಿನ ತಮ್ಮ ಇಡೀ ಜೀವಮಾನದಲ್ಲಿ, ಶ್ರೀ ಅರೊವಿಂದೋ ಸುಪ್ರಮಾನಸ ಎಂದು ತಾವು ಕರೆದ ಈ ಪ್ರಜ್ಞೆಯನ್ನು ತಮಲ್ಲಿ ಸ್ಥಿರಪಡಿಸಿಕೊಳ್ಳಲು ತಮ್ಮ ಸಮಯವನ್ನು ಸಂಪೂರ್ಣವಾಗಿ ವ್ಯಯಿಸಿದರು. ಅದನ್ನು ತಮ್ಮ ಸುತ್ತಲೂ ನೆರೆದವರು ಅರಿಯಲು ನೆರವಾದರು.*

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 12/116 – ಶ್ರೀಮಾತೆ**

## ದಿವ್ಯ ಯೋಜನೆಯು ತಂತಾನೆ ಪೂರ್ಣ

ಯಾರಾದರೂ ತನ್ನ ಆತ್ಮವನ್ನು ಅನ್ವೇಷಿಸಿ, ಅದರ ಜೊತೆಗೂಡಿ, ತನ್ನ ಜೀವನದಲ್ಲಿ ಅದು ಆಡಳಿತವನ್ನು ನಡೆಸಲು ಅನುವು ಮಾಡಿಕೊಡಲು ಆಂತರಿಕ ಪ್ರಯತ್ನವನ್ನು ಮಾಡಿದರೆ ಸಾಮಾನ್ಯವಾಗಿ ಈ ಅನ್ವೇಷಣೆಯಿಂದ ಅತ್ಯದ್ಭುತ ಆನಂದವು ಉಂಟಾಗುವದು. ತಕ್ಷಣವೇ ಆ ವ್ಯಕ್ತಿಯು ತನಗೆ ತಾನೇ ಹೀಗೆ ಹೇಳಿಕೊಳ್ಳುವನು: "ನನಗೇನು ಅವಶ್ಯಕವೋ ಅದು ನನಗೆ ಈಗ ದೊರಕಿದೆ, ನಾನು ಅನಂತ ಮಹದಾನಂದವನ್ನು ಪಡೆದಿರುವೆ." ನಾನು ಇನ್ನು ಯಾವುದರ ಬಗ್ಗೆಯೂ ಚಿಂತಿಸಬೇಕಾಗಿಲ್ಲ. ನನಗಿನ್ನು ಯಾವುದರ ಗೊಡವೆಯೂ ಇಲ್ಲ.

ಈ ಅನ್ವೇಷಣೆಯನ್ನು ಮಾಡಿರುವ ಬಹುಪಾಲು ಜನರು ಇದೇ ಅನುಭವವನ್ನು ಪಡೆದಿರುವರು. ಕೆಲವರಂತೂ ಸಾಕ್ಷಾತ್ಕಾರದ ತತ್ತ್ವವೇ ಈ ಅನುಭವ ಎಂದು ಹೇಳಿರುವರು. "ನೀನು ಅದನ್ನು ಮಾಡಿದೆಯೆಂದರೆ, ಎಲ್ಲವನ್ನೂ ಮಾಡಿದಂತೆ ಆಯಿತು. ಮುಂದೆ ಇನ್ನೇನು ಮಾಡಲಿಕ್ಕೆ ಇಲ್ಲ. ನೀನು ಗುರಿಯನ್ನು ತಲುಪಿರುವೆ ಅಂದರೆ ಅದೇ ದಾರಿಯ ಕೊನೆ ಎಂಬುದು ಸಹ ಅನೇಕರ ಅಭಿಪ್ರಾಯ."

ನಿಜಕ್ಕೂ, ಇನ್ನೂ ಮುಂದೆ ಹೋಗಲು ಅತ್ಯಧಿಕವಾದ ಧೈರ್ಯವು ಅವಶ್ಯಕ; ತನ್ನ ಆಂತರಿಕ ಸಂತಸದಿಂದ ತೃಪ್ತಿ ಹೊಂದಿ ವಿರಮಿಸದಿರುವ ಈ ಆತ್ಮವು ಕೆಚ್ಚೆದೆಯ ವೀರನ ಆತ್ಮವೇ ಆಗಿರಬೇಕು. ಆದರೆ ಮುಂದೆ ಯಾವಾಗಲಾದರೂ ಎಲ್ಲರೂ ಈ ಅವಸ್ಥೆಯನ್ನು ನಿಸ್ಸಂಶಯವಾಗಿ ತಲುಪುವರು ಎಂಬುದಾಗಿ ಇತರರ ಅಸಂತೋಷದ ಬಗ್ಗೆ ತನ್ನನ್ನು ತಾನು ಸಮಾಧಾನಪಡಿಸಿಕೊಳ್ಳಲೂಬಹುದು. ಅಥವಾ ಇತರರೂ ಸಹ ತನ್ನ ರೀತಿಯಲ್ಲೇ ಪ್ರಯತ್ನಪಡಲಿ ಎಂದೂ ಆಶಿಸಬಹುದು. ಹೆಚ್ಚೆಂದರೆ, ತನ್ನ ಆಂತರಿಕ ಜ್ಞಾನದಿಂದ ಅತ್ಯಧಿಕ ಕನಿಕರದಿಂದ ಅದನ್ನು ತಲುಪಲು ನೆರವಾಗಬಹುದು. ಎಲ್ಲರೂ ಅದನ್ನು ತಲುಪಿದಾಗ ಪ್ರಪಂಚದ ಅಂತ್ಯವಾಗುವದು. ದುಃಖವನ್ನು ಸಹಿಸಲಾಗದಿದ್ದವರಿಗೆ ಅದು ನಿಜಕ್ಕೂ ಒಳ್ಳೆಯದೇ ಎಂದೂ ಚಿಂತಿಸಬಹುದು.

ಆದರೆ... ಒಂದು 'ಆದರೆ' ಇದೆ. ಭಗವಂತನು ಪ್ರಕಟಗೊಳಿಸಿದಾಗ ಇದು ಆತನ ಗುರಿ ಮತ್ತು ಸಂಕಲ್ಪವಾಗಿದ್ದಿತೇ? *(ಮೌನ)*

ಇಡೀ ಸೃಷ್ಟಿ, ಇಷ್ಟೇ ಈ ಸೃಷ್ಟಿಯ ಅರ್ಥ ಎಂದಾಗ, ಸಮಸ್ತ ವಿಶ್ವದ ಅಭಿವ್ಯಕ್ತಿಯು ಒಂದು ದುಷ್ಟ ಹಾಸ್ಯ ಎಂದೆನಿಸದಿರದು. ಹೊರಗೆ ಹೋಗುವದೇ ಗುರಿಯಾಗಿರುವಾಗ ಪ್ರಾರಂಭಿಸುವದಾದರೂ ಏಕೆ!

ಇಷ್ಟೊಂದು ಕಷ್ಟಪಟ್ಟು ಶ್ರಮಿಸಿದ್ದರಿಂದ ಏನು ಉಪಯೋಗವಿಲ್ಲವೇ? ಅನುಭವಿಸಿದ ದುಃಖಕ್ಕೆ ಬೆಲೆಯೇ ಇಲ್ಲವೇ? ಅದರ ಬಾಹ್ಯ ಗೋಚರಿಸುವಿಕೆಗಳಲ್ಲಿ ಇಷ್ಟೊಂದು ದುರಂತ ಮತ್ತು ನಾಟಕೀಯವೆನಿಸಿದ್ದನ್ನು ಸೃಷ್ಟಿಸಿದ್ದು ಅದರಿಂದ ಹೊರಗೆ ಹೋಗುವದು ಹೇಗೆ ಎಂಬ ಬೋಧನೆಯನ್ನು ಪಡೆಯಲೇ? – ಹಾಗಿದ್ದರೆ ಅದನ್ನು ಪ್ರಾರಂಭಿಸದೆ ಇದ್ದಿದ್ದರೇನೇ ಉತ್ತಮವಾಗಿತ್ತು.

ಆದರೆ ಯಾರಾದರೂ ಈ ವಿಷಯದ ಆಳಗಳಿಗೆ ಹೋದಾಗ ಮೊಟ್ಟಮೊದಲಿಗೆ ಎಲ್ಲಾ ಅಹಂಕಾರವನ್ನೂ ತ್ಯಜಿಸಬೇಕು. ಅಷ್ಟೇ ಅಲ್ಲ ನಿರಾಸಕ್ತರಾಗಿ, ಪೂರ್ತಿಯಾಗಿ, ಯಾವುದೇ ನಿರ್ಬಂಧವಿಲ್ಲದೆ ನನ್ನನ್ನು ನಾನು ನೀಡುತ್ತಿರುವೆ ಎಂಬ ಅಹಂಕಾರವನ್ನೂ ಸಹ ತ್ಯಜಿಸಬೇಕು. ಆಗ ಭಗವಂತನ ಯೋಜನೆಯನ್ನು ಅರಿಯಲು ಶಕ್ತನಾಗುವೆ. ಅದು ಒಂದು ದುಷ್ಟ ಹಾಸ್ಯವಲ್ಲ, ಒಂದು ಸ್ವಲ್ಪ ವಿರೂಪ ಹೊಂದಿ ಪ್ರಾರಂಭಿಕ ಅಂಶಕ್ಕೆ ಹಿಂದಿರುಗುವ ಕುಟಿಲ ಹಾದಿಯೂ ಅಲ್ಲ ಎಂಬುದನ್ನು ನಾವು ಅರಿಯುವೆವು. ಅದಕ್ಕೆ ಬದಲಾಗಿ, ಅದು ಸತ್ತೆಯ ಆನಂದವನ್ನು, ಸತ್ತೆಯ ಸೌಂದರ್ಯವನ್ನು, ಸತ್ತೆಯ ಶ್ರೇಷ್ಠತೆಯನ್ನೂ ಇಡೀ ಸೃಷ್ಟಿಗೆ ಬೋಧಿಸುವದು. ಜೊತೆಗೆ ಅದು ಆ ಆನಂದದ ಭವ್ಯ ಜೀವನ ಗಾಂಭೀರ್ಯ, ನಿರಂತರವಾದ ವೃದ್ಧಿ, ನಿರಂತರವಾದ ಪ್ರಗತಿ ಆ

ಸೌಂದರ್ಯ, ಆ ಶ್ರೇಷ್ಠತೆಯನ್ನು ಸಹ ಬೋಧಿಸುವದು. ನಂತರ ಎಲ್ಲದಕ್ಕೂ ಒಂದು ಅರ್ಥವಿರುವದು. ಆಗ ಶ್ರಮವಹಿಸಿದ್ದಕ್ಕಾಗಲೀ, ದುಃಖಿಸಿದ್ದಕ್ಕಾಗಲೀ ಯಾರೂ ಪಶ್ಚಾತ್ತಾಪ ಪಡಬೇಕಾಗಿರುವದಿಲ್ಲ. ದೈವಿಕ ಗುರಿಯನ್ನು ತಲುಪುವ ಉತ್ಸಾಹವನ್ನು ಮಾತ್ರ ಹೊಂದಿರುವೆವು. ಗುರಿ ಮತ್ತು ವಿಜಯದ ದೃಢ ನಂಬಿಕೆಯೊಂದಿಗೆ ಸಾಕ್ಷಾತ್ಕಾರದ ಅರಿವಿನಲ್ಲಿ ಸಂಪೂರ್ಣವಾಗಿ ಧುಮುಕಿಬಿಡುವೆವು.

ಆದರೆ ಅದನ್ನು ಅರಿಯಲು, ಯಾರಾದರೂ ಅಹಂಕಾರಿಗಳಾಗಿರುವದನ್ನು ನಿಲ್ಲಿಸಬೇಕು; ತನ್ನ ಬಗ್ಗೆಯೇ ಚಿಂತಿಸುತ್ತಾ. ಪರಮೋತ್ತಮ ಮೂಲದಿಂದ ಬೇರೆಯಾದ ತಾನೊಬ್ಬ ವಿಭಿನ್ನ ವ್ಯಕ್ತಿ ಎಂದು ಭಾವಿಸಬಾರದು. ಅದನ್ನೇ ಮಾಡಬೇಕಾಗಿರುವದು: ತನ್ನ ಅಹಂಕಾರವನ್ನು ದೂರ ತಳ್ಳಬೇಕು. ಆಗ ನಾವು ನಮ್ಮ ನೈಜ ಗುರಿಯನ್ನು ಅರಿಯುವೆವು. ಮತ್ತು ಇದೊಂದೇ ಸರಿಯಾದ ಹಾದಿ.


ನಮ್ಮ ಅಹಂಕಾರವನ್ನು ದೂರ ತಳ್ಳಲು, ಉಪಯೋಗರಹಿತ ಬಟ್ಟೆಯೇನೋ ಎಂಬಂತೆ ಎತ್ತಿ ಬಿಸಾಡಿಬಿಡಿ.

ಮಾಡಿದ ಪ್ರಯತ್ನಗಳಿಗೆ ಸಮರ್ಪಕವಾದ ಪ್ರತಿಫಲವು ಸಿಗುವದು. ನಂತರ ನಾವು ನಮ್ಮ ಹಾದಿಯಲ್ಲಿ ಏಕಾಂಗಿಗಳಾಗಿರುವದಿಲ್ಲ. ಯಾರಿಗಾದರೂ ಶ್ರದ್ಧೆಯಿದ್ದರೆ ಆತನಿಗೆ ನೆರವು ಸಿಗುವದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 9/426–28 – ಶ್ರೀಮಾತೆ**

ದೈವತ್ವಕ್ಕೆ ಪರಕೀಯವಾದ ಯಾವುದರಿಂದಲೋ ನಿರ್ಮಿತವಾದುದಲ್ಲ ಈ ಸೃಷ್ಟಿ. ಸರಳವಾಗಿ ಹೇಳಬೇಕೆಂದರೆ ದೈವತ್ವವು ಸ್ವತಃ ತನ್ನಂತೆ ತಾನೇ ಉದ್ಭವಿಸಿದೆ, ಭಗವಂತನು ತನ್ನ ಕಡೆಗೆ ತಾನೇ ನೋಡುತ್ತಿರುವನೇನೋ ಎಂಬಂತೆ ತಾನು ಏನಾಗಿರುವನೋ ಅದನ್ನೆಲ್ಲಾ ಅರಿಯಲು ಸ್ವತಃ ತನ್ನನ್ನೇ ಅತನು ವಸ್ತುವನ್ನಾಗಿಸಿಕೊಂಡಿರುವನು. ಎಲ್ಲವೂ ಅಪ್ರಕಟಿತವಾಗಿರುವ ಕೇಂದ್ರೀಕೃತ ಆಂತರಿಕ ಸ್ಥಿರ ಅವಸ್ಥೆಯಲ್ಲಿ ಆತನು ಇಲ್ಲ. ತನ್ನ ಆಂತರ್ಯದಲ್ಲಿ ಏನೇನು ಇದೆ ಎಂಬುದನ್ನು ನೋಡಲು ಬಯಸುತ್ತಿರುವನೋ ಎಂಬಂತೆ ಆತನು ಅದನ್ನು ಹೊರಗಡೆ ಹೂಡುವನು ಅಂದರೆ ಎಲ್ಲಾ ಅನಂತ ಸಾಧ್ಯತೆಗಳನ್ನು ಆತನು ಬಾಹ್ಯದಲ್ಲಿ ಹೂಡುವನು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 5/374–75 – ಶ್ರೀಮಾತೆ**



ಆಗಮಿಸಬೇಕಾಗಿರುವ ವಸ್ತುಗಳಿಗೆ ಆತನು ಶ್ರೇಷ್ಠ ಸ್ವಪ್ನಗಳನ್ನು ಒಂದು ಅಚ್ಚಾಗಿ ಮಾಡುವನು ಮತ್ತು ಸಂವತ್ಸರಗಳ ಮುಂದೆ ತನ್ನ ಕೃತಿಗಳನ್ನು ಕಂಚಿನಂತೆ ತೋರ್ಪಡಿಸುವನು.

**Savitri, p. (ಸಾವಿತ್ರಿ ಪುಟ) 45**

## ಜೀವನ – ಒಂದು ಯಾನ ಮತ್ತು ಆರೋಹಣ

**– ಅನು: ಡಾ॥ ಮಹಾದೇವ ಸಕ್ರಿ, ವಿಜಯಪುರ**

ಸಾಮಾನ್ಯವಾಗಿ ಜೀವಿಸುವಂಥ ಮಾನವ ಪ್ರಾಣಿಯ ಜೀವನವು, ಭಾಗಶಃ ಕ್ರಿಯಾಶೀಲ ಹಾಗೂ ಸ್ವಯಂ–ಬೆಳವಣಿಗೆಯಾಗುತ್ತಿರುವ, ಆದರೆ ಎಲ್ಲವೂ ಒಂದು ಅಹಂಕಾರದ ಸುತ್ತ ಕೇಂದ್ರಿಕೃತವಾದ, ಹೆಚ್ಚಾಗಿ ರೂಢಿಗತ ಮತ್ತು ಸ್ವಯಂ–ಪುನರಾವರ್ತನೆ–ಯಾಗುತ್ತಿರುವ, ಅಪೂರ್ಣವಾಗಿ ನಿಯಂತ್ರಿಸಲ್ಪಟ್ಟ ಯೋಚನೆಗಳ, ಗ್ರಹಿಕೆಗಳ, ಸಂವೇದನೆಗಳ, ಭಾವನೆಗಳ, ಆಸೆಗಳ, ಆನಂದಗಳ, ಕ್ರಿಯೆಗಳ ಅರ್ಧ–ಸ್ಥಿರ (ಗಟ್ಟಿಯಾದ), ಅರ್ಧ–ದ್ರವದ ದ್ರವ್ಯರಾಶಿಯಿಂದ ಸಂಯೋಜನೆಗೊಂಡಿದೆ. ಈ ಎಲ್ಲ

ಚಟುವಟಿಕೆಗಳ ಚಲನವಲನದ ಮೊತ್ತವು ಈ ಜೀವನದಲ್ಲಿ ಭಾಗಶಃ ಗೋಚರಿಸುವಂಥ ಹಾಗೂ ಕಾರ್ಯನಿರ್ವಹಿಸುವಂಥ ಆಂತರಿಕ ಬೆಳವಣಿಗೆಗೆ ಕಾರಣವಾಗುತ್ತದೆ, ಉಳಿದದ್ದು ಮುಂದಿನ ಜೀವನಗಳಲ್ಲಿ ಪ್ರಗತಿಯ ಬೀಜವಾಗುತ್ತದೆ. ಈ ಚೇತನ ಸತ್ವದ ಬೆಳವಣಿಗೆ, ಅದರ ಹಿಗ್ಗುವಿಕೆ, ಆತನ ಸಂಯುಕ್ತ ಅಂಗಗಳ ಸಮನ್ವಯಗೊಂಡ ಬೆಳವಣಿಗೆ ಎಂಬುದು ಮಾನವ ಅಸ್ತಿತ್ವದ ಸಂಪೂರ್ಣ ಅರ್ಥವಾಗಿದೆ ಹಾಗೂ ಸಾರಾಂಶವೂ ಆಗಿದೆ. ಚೇತನವನ್ನು ಚಿಂತನೆ, ಇಚ್ಛೆ, ಭಾವನೆ, ಆಸೆ, ಕ್ರಿಯೆ ಮತ್ತು ಅನುಭವದಿಂದ ಸಾರ್ಥಕವಾಗಿ ಬೆಳೆಸುವುದಕ್ಕಾಗಿ, ಕೊನೆಯಲ್ಲಿ ಪರಮಾತ್ಮನ ಸ್ವಯಂ–ಆವಿಷ್ಕಾರಕ್ಕೆ ಕಾರಣೀಭೂತವಾಗುವುದಕ್ಕಾಗಿ, ಮಾನವ, ಮಾನಸಿಕ ಜೀವಿ ಭೌತಿಕ ದೇಹವನ್ನು ಸೇರಿದ್ದಾನೆ. ಉಳಿದೆಲ್ಲವೂ ಸಹಾಯಕವಾಗಿಯೋ ಅಥವಾ ಉಪಯೋಗ–ವಿಲ್ಲದ್ದಾಗಿಯೋ ಇರುತ್ತದೆ; ಆತನ ಸ್ವಭಾವದ ವಿಕಸನಕ್ಕೆ ಅಥವಾ ಆತನ ಆತ್ಮದ ಪ್ರಗತಿಪರ ಅನಾವರಣ ಹಾಗೂ ಶೋಧನೆಗೆ ಸಹಾಯಕವಾಗಿರುವುದು ಮಾತ್ರ ಮುಖ್ಯವಾಗಿರುತ್ತದೆ. ...

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 23/89–90**

ಆರೋಹಣದ ಮೂರು ಹಂತಗಳಿವೆ, – ಅವಶ್ಯಕತೆಯ ಮತ್ತು ಅಭಿಲಾಷೆಯ ಒತ್ತಡಕ್ಕೆ ಗುಲಾಮವಾಗಿರುವ ಭೌತಿಕ ಜೀವನವು ಕೆಳಗಿನ ಹಂತವಾಗಿದೆ. ಹೆಚ್ಚಿನ ಆಸಕ್ತಿಗಳನ್ನು, ಆಕಾಂಕ್ಷೆಗಳನ್ನು, ಅನುಭವಗಳನ್ನು ಅನ್ವೇಷಿಸುವ ಮಾನಸಿಕ, ಭಾವನಾತ್ಮಕ ಮತ್ತು ಅತೀಂದ್ರಿಯ ವಿಧಿಯು (ಪದ್ಧತಿಯು) ಮಧ್ಯದ ಹಂತವಾಗಿದೆ. ಮೂರನೆಯ ಹಾಗೂ ಶೃಂಗದ ಹಂತದಲ್ಲಿ, ಮೊದಲು ಆಳವಾದ ಅತೀಂದ್ರಿಯ ಮತ್ತು ಆಧ್ಯಾತ್ಮಿಕ ಸ್ಥಿತಿ, ಆ ನಂತರ ನಮ್ಮ ಎಲ್ಲ ಆಸಕ್ತಿಗಳು ಮತ್ತು ಅನ್ವೇಷಣೆಗಳು ತಮ್ಮ ನೈಜ ಅರ್ಥವನ್ನು ಕಂಡುಕೊಳ್ಳುವ ಅತಿಮಾನಸ ಅನಂತ ಪ್ರಜ್ಞೆ. ಭೌತಿಕ ಜೀವನದಲ್ಲಿ ಮೊದಲು ಅಭಿಲಾಷೆ ಮತ್ತು ಅವಶ್ಯಕತೆ, ನಂತರ ವ್ಯಕ್ತಿ ಮತ್ತು ಸಮಾಜದ ಪ್ರಾಯೋಗಿಕ ಉಪಯುಕ್ತತೆಯೇ ಪ್ರಬಲವಾದ ಶಕ್ತಿಯಾಗಿರುತ್ತದೆ. ಬೌದ್ಧಿಕ ಜೀವನದಲ್ಲಿ, ಸತ್ಯದ ವೇಷದಲ್ಲಿ ಅರ್ಧಚಂದ್ರಿಕೆಗಳಾಗಿ ಉಳಿದ ವಿಚಾರಗಳು ಮತ್ತು ಬೆಳೆಯುತ್ತಿರುವ ಆದರೆ ಇನ್ನೂ ಪರಿಪೂರ್ಣವಲ್ಲದ ಒಳ ಅರಿವಿನ ಮತ್ತು ಅನುಭವದ ಪರಿಣಾಮವಾಗಿ ಮನಸ್ಸಿನಲ್ಲಿ ರೂಪುಗೊಂಡ ಆದರ್ಶಗಳು ಆಡಳಿತ ಮಾಡುತ್ತವೆ. ಬೌದ್ಧಿಕ ಜೀವನವು ಪ್ರಬಲವಾಗಿದ್ದಾಗ, ಮತ್ತು ದೈಹಿಕ ಜೀವನವು ಅದರ ಮೃಗೀಯ ಒತ್ತಡವನ್ನು ಕಡಿಮೆ ಮಾಡಿದಾಗ, ಬೌದ್ಧಿಕ ವ್ಯಕ್ತಿಯು ತನ್ನ ಆಶಯ ಅಥವಾ ಆದರ್ಶದ ಸಂವೇದನೆಯಲ್ಲಿ

ವ್ಯಕ್ತಿಯ ಜೀವನವನ್ನು ಆಕಾರ ಕೊಡಲು ಸಿದ್ಧನಾಗುತ್ತಾನೆ. ಕೊನೆಗೆ, ಸಮಾಜದ ಹೆಚ್ಚು ಜಟಿಲವಾದ ಜೀವನವೂ ಸಹ ಇದೇ ಸೂಕ್ಷ್ಮ ಪ್ರಕ್ರಿಯೆಗೆ ಒಳಗಾಗಬೇಕಾಗುತ್ತದೆ. ಆಧ್ಯಾತ್ಮಿಕ ಜೀವನದಲ್ಲಿ ಅಥವಾ ಮನಸ್ಸಿಗಿಂತ ಹೆಚ್ಚಿನ ಶಕ್ತಿ ಪ್ರಕಟವಾಗಿ ಸ್ವಭಾವವನ್ನು ವಶಪಡಿಸಿಕೊಂಡಾಗ, ಈ ಸೀಮಿತ ಪ್ರೇರಣಾ ಶಕ್ತಿಗಳು ಹಿಂದಕ್ಕೆ ಸರಿಯುತ್ತವೆ, ಕುಗ್ಗುತ್ತವೆ, ಅವು ಕಣ್ಮರೆಯಾಗಿ ಹೋಗುವಂತೆ ತೋರುತ್ತವೆ. ಆಧ್ಯಾತ್ಮಿಕ ಅಥವಾ ಅತಿಮಾನಸ ಸತ್ವ, ದೈವಿಕ ಸತ್ತ್ವ, ಪರಮ ಮತ್ತು ಅಂತರಂಗ ವಾಸ್ತವ ನಮ್ಮೊಳಗಿನ ಏಕೈಕ ಪ್ರಭುವಾಗಿರಬೇಕು, ಮತ್ತು ನಮ್ಮ ಅಂತಿಮ ಬೆಳವಣಿಗೆಯನ್ನು ನಮ್ಮ ಸ್ವಭಾವದ ಅತ್ಯುನ್ನತ, ವಿಶಾಲತಮ, ಸಮಗ್ರ ಪ್ರಕಟಣೆಗೆ ಅನುಗುಣವಾಗಿ ಸ್ವತಂತ್ರವಾಗಿ ರೂಪಿಸಬೇಕು. ಅಂತ್ಯದಲ್ಲಿ ಆ ಪ್ರಕೃತಿಯು ಪರಿಪೂರ್ಣ ಸತ್ಯದಲ್ಲಿ ಮತ್ತು ಅದರ ಸ್ವಯಂ–ಸ್ವತಂತ್ರ ಸ್ವಾತಂತ್ರ್ಯದಲ್ಲಿ ಕಾರ್ಯಗತವಾಗುತ್ತದೆ; ಏಕೆಂದರೆ ಅದು ಅನಂತದ ಬೆಳಗುವ ಶಕ್ತಿಯನ್ನು ಮಾತ್ರ ಅನುಸರಿಸುತ್ತದೆ. ವ್ಯಕ್ತಿಯು ಇನ್ನು ಹೆಚ್ಚಿಗೆ ಗಳಿಸಲು ಏನೂ ಇಲ್ಲ, ಪೂರೈಸಿಕೊಳ್ಳಬೇಕಾದ ಬಯಕೆಯೂ ಇಲ್ಲ; ಅವನು ಅಮೂರ್ತದ ಅಥವಾ ಅನಂತದ ವಿಶ್ವಾತ್ಮಕ ವ್ಯಕ್ತಿತ್ವದ ಒಂದು ಅಂಶವಾಗಿಬಿಟ್ಟಿದ್ದಾನೆ. ಜೀವನದಲ್ಲಿ ದಿವ್ಯಾತ್ಮನ ಅನಾವರಣ ಹಾಗೂ ಲೀಲೆಯ ಮತ್ತು ವಿಶ್ವದ ದೈವೀ ಗುರಿಯತ್ತ ಸಾಗುವ ಪ್ರಯಾಣದಲ್ಲಿ ಅದನ್ನು ನಿರ್ವಹಿಸುವ ಉದ್ದೇಶಕ್ಕಿಂತ ಬೇರೆ ಯಾವುದೇ ಅವನನ್ನು ಕ್ರಿಯೆಗೆ ಪ್ರೇರೇಪಿಸಲಾರದು. ಮಾನಸಿಕ ವಿಚಾರಗಳು, ಅಭಿಪ್ರಾಯಗಳು, ರಚನೆಗಳು ಅವನವುಗಳಲ್ಲ; ಏಕೆಂದರೆ ಅವನ ಮನಸ್ಸು ಮೌನಕ್ಕೆ ಬಿದ್ದಿದೆ, ಅದು ದೈವೀಕ ಜ್ಞಾನದ ಜ್ಯೋತಿ ಮತ್ತು ಸತ್ಯದ ವಾಹಿನಿ ಮಾತ್ರವಾಗಿದೆ. ಆದರ್ಶಗಳು ಆತನ ಆತ್ಮದ ವಿಶಾಲತೆಗೆ ಹೋಲಿಸಿದರೆ, ಅವು ಸಾಕಷ್ಟು ಸಣ್ಣವು; ಅವನಲ್ಲಿ ಅನಂತತೆಯ ಸಾಗರವೇ ಹರಿಯುತ್ತದೆ ಮತ್ತು ಅವನನ್ನು ಸದಾ ಪ್ರೇರೇಪಿಸುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 23/208–09** – ಶ್ರೀ ಅರವಿಂದರು

---

***ಅಹಂಕಾರ ಮತ್ತು ಮನಸ್ಸಿನಿಂದ ನಿರ್ವಾಣಗೊಂಡಾಗ ಅದು (ಉನ್ನತ) ಧ್ವನಿಯನ್ನು ಕೇಳುತ್ತದೆ;***
***ಅದು ಬೆಳಕಿನ ಮೂಲಕ ಸದಾ ಉನ್ನತ ಬೆಳಕಿನೆಡೆಗೆ ನೋಡುತ್ತದೆ***
***ಮತ್ತು ಜೀವನವನ್ನು ವ್ಯಾಪಿಸಿರುವಂಥ ಅನಂತವನ್ನು ಕಾಣುತ್ತದೆ.***

**Savitri, p. (ಸಾವಿತ್ರಿ ಪುಟ) 272** – ಶ್ರೀ ಅರವಿಂದರು

# ಶುದ್ಧ ಸ್ವರೂಪದಿಂದ ಭೌತಿಕ ಸ್ವರೂಪಕ್ಕೆ ಅವರೋಹಣಗೊಳ್ಳುವ ದಿವ್ಯ ಚೈತನ್ಯದ ಏಳು ಸ್ತರಗಳು

*(ಶ್ರೀ ಅರವಿಂದರ ಈಷೋಪನಿಷತ್ತಿನ ವಿಶ್ಲೇಷಣೆಯ ಆಯ್ದ ಭಾಗ)*

ಅನಂತ ಬ್ರಹ್ಮನ ಸಾಕ್ಷಾತ್ಕಾರವೇ ಗುರಿ: ಏಕೆಂದರೆ ಅದು ಎಲ್ಲ ಕ್ರಿಯೆಯ ಆರಂಭ ಮತ್ತು ಅಂತ್ಯ, ಕಾರಣ ಮತ್ತು ಫಲವೂ ಆಗಿದೆ.

ಆದರೆ ಪ್ರಕೃತಿಯ ಕ್ರಿಯೆಯಲ್ಲಿ ಅಂತಿಮ ಗುರಿಯ ಕಲ್ಪನೆಯೇ ಭ್ರಮೆಯಾಗಿದೆ. ಏಕೆಂದರೆ ಬ್ರಹ್ಮವು ಪರಿಪೂರ್ಣವಾಗಿದೆ ಮತ್ತು ಅನಂತವಾಗಿದೆ. ದೇವತೆಗಳು[1] ಅವನನ್ನು ತಲುಪಲು ಶ್ರಮಿಸುತ್ತಾರೆ, ಅವರು ಪ್ರತಿ ಗುರಿಯನ್ನು (ಸಾಕ್ಷಾತ್ಕಾರವನ್ನು) ಸಾಧಿಸಿದಾಗಲೂ ಬ್ರಹ್ಮವು ಇನ್ನೂ ಮುಂದಕ್ಕೆ ಸಾಗುತ್ತಿರುವುದನ್ನು ಕಂಡುಕೊಳ್ಳುತ್ತಾರೆ, – ಇನ್ನೊಂದು ಸಾಧನೆಯ (ಸಾಕ್ಷಾತ್ಕಾರದ) ಕಡೆಗೆ. ಬ್ರಹ್ಮಾಂಡದ ಗೋಚರತೆಗಳಲ್ಲಿ ಯಾವುದೂ ಸಂಪೂರ್ಣವಾಗಿ ಸಾಪೇಕ್ಷ ಪ್ರಜ್ಞೆಯಂತಿರಲು ಸಾಧ್ಯವಿಲ್ಲ; ಎಲ್ಲವೂ ಅಜ್ಞಾತರ ಸಾಂಕೇತಿಕ ಪ್ರಾತಿನಿಧ್ಯ ಮಾತ್ರ.

ಬ್ರಹ್ಮದಲ್ಲಿ ಎಲ್ಲವೂ ಈಗಾಗಲೇ ಸಾಕಾರಗೊಂಡಿದೆ. ಇತರರು[2] ಪ್ರಕೃತಿಯ ಹರವಿನಲ್ಲಿ ಸಮಯ ಮತ್ತು ಸ್ಥಳದಲ್ಲಿ ಕಾರಣಾತ್ಮಕವಾಗಿ ಬ್ರಹ್ಮನು ಈಗಾಗಲೇ ಹೊಂದಿರುವಂಥ ಏನೋ ಒಂದು ವಿಷಯದ ಕಾರ್ಯ ನಿರ್ವಹಣೆಯಾಗಿದೆ.

ಸರ್ವವ್ಯಾಪಿ ಅಸ್ತಿತ್ವದಲ್ಲೂ 'ಬ್ರಹ್ಮ'ವು ಕ್ರಿಯೆಯನ್ನು (ಬದಲಾವಣೆಯನ್ನು) ಮೀರಿಸುತ್ತದೆ. ಕಾಲವನ್ನು ಮೀರುತ್ತ, ಅದು ಭೂತ, ವರ್ತಮಾನ ಮತ್ತು ಭವಿಷ್ಯವನ್ನು ಏಕ ಕಾಲದಲ್ಲಿ ತನ್ನಲ್ಲಿ ಹೊಂದಿರುತ್ತದೆ, ಮತ್ತು ಕಲ್ಪನೆಯ ಕಾಲದ ಅಂತ್ಯದವರೆಗೆ ಓಡಬೇಕಾಗಿಲ್ಲ. ಆಕಾಶವನ್ನು ಮೀರುತ್ತ, ಕಾಕತಾಳಿವೆಂಬಂತೆ ಅದು ತನ್ನಂತರಾಳದಲ್ಲಿ ಎಲ್ಲ ರಚನೆಗಳನ್ನು ಒಳಗೊಂಡಿರುತ್ತದೆ, ಮತ್ತು ಕಲ್ಪನೆಯ ಅನಂತ ಆಕಾಶದ

---

1. ದೇವರುಗಳೆಂದರೆ, ಬ್ರಹ್ಮವು ತನ್ನನ್ನು ತಾನು ಪ್ರತಿನಿಧಿಸುವ ಬ್ರಹ್ಮಾಂಡದ ವ್ಯಕ್ತಿತ್ವಗಳಲ್ಲಿ ಅಭಿವ್ಯಕ್ತಿಯಾಗಿರುವ, ತಮ್ಮ ನಿರಾಕಾರ ಕ್ರಿಯೆಯಲ್ಲಿ ಪ್ರಕೃತಿಯ ತತ್ತ್ವಗಳ ವಿವಿಧ ಪಾತ್ರವಾಗಿ ಕಾಣಿಸಿಕೊಳ್ಳುವಂಥ ಏಕ ದೇವತ್ವದ ಸ್ವರೂಪವಾಗಿದ್ದಾರೆ.

2. ಇತರರು ಎಂದರೆ, ನಂತರದ ಶ್ಲೋಕದ ಸರ್ವಾಣಿ ಭೂತಾಣಿ, ಬಹುತ್ವದ ಪ್ರತ್ಯೇಕ ಚೇತನದಲ್ಲಿ ತನ್ನನ್ನು ತಾನು ಪ್ರತಿನಿಧಿಸುವ ಮತ್ತು ಎಲ್ಲವೂ ಆಗುವ ಬ್ರಹ್ಮ.

ಅಂತ್ಯದವರೆಗೆ ಓಡಬೇಕಾಗಿಲ್ಲ. ಕಾರ್ಯಕಾರಣವನ್ನು ಮೀರಿ, ಇದು ಬ್ರಹ್ಮಾಂಡದಲ್ಲಿ ಸಂಪರ್ಕ ಹೊಂದಿದ ಕಾರ್ಯಕಾರಣದ ಸ್ಪಷ್ಟ ಸರಪಳಿಯಿಂದ ಬಂಧಿಸಲ್ಪಡದೆ ಎಲ್ಲಾ ಸಂಭವನೀಯತೆಗಳನ್ನು ಮತ್ತು ಎಲ್ಲಾ ಸಂಭಾವ್ಯತೆಗಳನ್ನು ತನ್ನೊಳಗೆ ಮುಕ್ತವಾಗಿ ಒಳಗೊಂಡಿರುತ್ತದೆ. ಕ್ರಿಯೆಯಲ್ಲಿ ಪ್ರತ್ಯೇಕಿಸಲ್ಪಟ್ಟ ವ್ಯಕ್ತಿತ್ವಗಳಿಂದ ಅದನ್ನು ಈಡೇರಿಸುವ ಮುಂಚೆಯೇ ಎಲ್ಲವೂ ಈಗಾಗಲೆ ಅದು ದೇವರೆಂದು ಅರಿಯಲ್ಪಟ್ಟಿದೆ. ...

ಹಾಗಾದರೆ, ಈ ಕ್ರಿಯೆಯಲ್ಲಿ ಅದರ ಉದ್ದೇಶ ಏನು?

ವಿಶ್ವ ಕ್ರಿಯೆಯು ಒಂದು ಲಯವಾಗಿದೆ, ಒಂದು ಸಮನ್ವಯವಾಗಿದೆ, ಅದು ವಿಶ್ವ ಪ್ರಾಣವಾಗಿ, ಪ್ರಜ್ಞಾ ಪುರುಷನ ನಿಬಂಧನೆಗಳಲ್ಲಿ, ತನ್ನದೇ ಆದ ಪ್ರತಿರೂಪಗಳಿಂದ ಕಾರ್ಯನಿರ್ವಹಿಸುತ್ತದೆ. ಇದು ಅಜ್ಞಾತವನ್ನು ಸಾಂಕೇತಿಕವಾಗಿ ವ್ಯಕ್ತಪಡಿಸುವ ಸೂತ್ರವಾಗಿದೆ. ಈ ಸೂತ್ರವನ್ನು ಹೇಗೆ ಕ್ರಮಗೊಳಿಸಲಾಗಿದೆ ಎಂದರೆ, ಪ್ರಜ್ಞೆಯ ಪ್ರತಿಯೊಂದು ಹಂತವೂ, ತನ್ನಾಚೆಗಿರುವ ಏನೋ ಒಂದನ್ನು, ಆಳದ ಆಳವನ್ನು, ವೈರಾಗ್ಯದ ವೈರಾಗ್ಯವನ್ನು ನಿಜವಾಗಿಯೂ ಪ್ರತಿನಿಧಿಸುತ್ತದೆ. ತನ್ನ ಸ್ವಯಂ ತೃಪ್ತಿಗಾಗಿ ಮತ್ತು ಅದಕ್ಕೆ ಏನನ್ನೂ ಸೇರಿಸದೆ ಇರುವ (ಏಕೆಂದರೆ ಅದು ಈಗಾಗಲೆ ಪೂರ್ಣಗೊಂಡಿದೆ) ದೈವೀ ಪ್ರಜ್ಞೆಯ[3] ಲೀಲೆ ಇದಾಗಿದೆ. ಇದು, ತನ್ನದೇ ಆದ ಅಸ್ತಿತ್ವದಿಂದ ಸಮರ್ಥಿಸಲ್ಪಟ್ಟ, ತನ್ನದೇ ಆದ ಯಾವುದೇ ಉದ್ದೇಶವಿಲ್ಲದ, ಪ್ರಜ್ಞಾ ಪುರುಷನ ಅಸ್ತಿತ್ವದ ವಾಸ್ತವತೆಯಾಗಿದೆ. ಉದ್ದೇಶದ, ಗುರಿಯ ಕಲ್ಪನೆಯು ತನ್ನದೇ ಆದ ನೈಜ ಸ್ವರೂಪದ ಜಗತ್ತಿನಿಂದ ಅದರ ರೂಪಗಳಲ್ಲಿ ವಾಸಿಸುವ ವೈಯಕ್ತಿಕ ಆತ್ಮಗಳಿಗೆ ಪ್ರಗತಿಶೀಲ ಸ್ವಯಂ–ಪ್ರಕಟವಾಗುವುದರಿಂದ ಜನಿಸುತ್ತದೆ; ಏಕೆಂದರೆ, ಆತ್ಮವು ತನ್ನದೇ ಆಗಿರುವ ಬೆಳವಣಿಗೆಗಳಲ್ಲಿ ಕ್ರಮೇಣವಾಗಿ ಸ್ವಯಂ–ಪ್ರಕಟಗೊಳ್ಳುತ್ತದೆ, ಅನೇಕತ್ವದಿಂದ ನಿಜವಾದ ಏಕತೆ ಉದ್ಭವವಾಗುತ್ತದೆ ಮತ್ತು ನಮ್ಮ ಪ್ರಜ್ಞೆಗೆ ಅದರ ಮೌಲ್ಯಗಳನ್ನು ಸಂಪೂರ್ಣವಾಗಿ ಬದಲಾಯಿಸುತ್ತದೆ.

ಈ ಸ್ವಯಂ ವಿಕಾಸವು ಬ್ರಹ್ಮಾಂಡ ಕ್ರಿಯೆಯಲ್ಲಿ ಚೇತನದ ಸಂಕೀರ್ಣತೆಯಿಂದ ನಿರ್ಧಾರಿಸಲ್ಪಟ್ಟ ಪರಿಸ್ಥಿತಿಗಳಿಂದ ನಿಯಂತ್ರಿಸಲ್ಪಡುತ್ತದೆ.

---

3. ಇದು, ಸಾಮಾನ್ಯವಾಗಿ ವಿಶ್ವದಲ್ಲಿನ ವ್ಯಕ್ತಿ ದೇವತೆಯ ಆಟಕ್ಕೆ ಅನ್ವಯಿಸಲಾದ, ಆದರೆ ನಿರ್ಗುಣ ಬ್ರಹ್ಮನಿಗೂ ಸಮಾನವಾಗಿ ಅನ್ವಯವಾಗುವ ಲೀಲೆಯ ವೈಷ್ಣವ ಚಿತ್ರಣವಾಗಿದೆ.

ಚೇತನವು ಸರಳ ಅಥವಾ ಏಕರೂಪವಾಗದೇ ಇರುವುದರಿಂದ, ಅದು ಸಪ್ತಕವಾಗಿದೆ. ಅಂದರೆ, ಶುದ್ಧ ಪುರುಷನಿಂದ ಭೌತಿಕ ಪುರುಷನೆಡೆಗೆ ಅವರೋಹಣವಾಗುವ ಏಳು ಸ್ವರೂಪಗಳಲ್ಲಿ ಅಥವಾ ಶ್ರೇಣಿಗಳಲ್ಲಿ ಅದು ತನ್ನನ್ನು ತಾನು ನಿಯೋಜಿಸಿಕೊಳ್ಳುತ್ತದೆ. ಅವರ ಪರಸ್ಪರ ಕ್ರಿಯೆಗಳು ಲೋಕಗಳನ್ನು ಸೃಷ್ಟಿಸುತ್ತವೆ, ಎಲ್ಲ ಚಟುವಟಿಕೆಗಳನ್ನು ನಿರ್ಧರಿಸುತ್ತವೆ, ಎಲ್ಲ ಆಗುವಿಕೆಗಳನ್ನು ರಚಿಸುತ್ತವೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 17/26–27 – ಶ್ರೀ ಅರವಿಂದರು**

## ಈ ಲೋಕ–ಜಾಲಕಿದೋ ಸೂತ್ರ

*(ಸಂಕಲನಕಾರರು, ತಮ್ಮ ವಿಚಾರಗಳಿಗೆ ಪ್ರಾಮುಖ್ಯತೆಯನ್ನು ನೀಡಲು, ಮೂಲ ಲೇಖನಗಳನ್ನು ಪ್ರತ್ಯೇಕಿಸಿದ್ದಾರೆ. ಕೆಲವು ಸ್ಥಳಗಳಲ್ಲಿ ದಪ್ಪ ಅಕ್ಷರ ಶೈಲಿಯನ್ನು ಬಳಸುವ ಮುಖಾಂತರ ಪ್ರಾಮುಖ್ಯತೆಯನ್ನು ನೀಡಿದ್ದಾರೆ. ಶೀರ್ಷಿಕೆ ಮತ್ತು ಉಪಶೀರ್ಷಿಕೆಗಳು ಸಂಕಲನಕಾರರಿಂದ ನೀಡಲಾಗಿದೆ.)*

**ಸೃಷ್ಟಿ ಎಂದರೇನು?**

ಸಾಮರ್ಥ್ಯದ ಪ್ರಕಾರ ಮತ್ತು ಅದರ ಪ್ರಜ್ಞೆಯ ಶುದ್ಧ ಆನಂದದಿಂದ ಕಾರ್ಯನಿರ್ವಹಿಸುವ ಮತ್ತು ರಚಿಸುವ ಅಸ್ತಿತ್ವದ ಸತ್ಯವು ನಾವಾಗಿದ್ದೇವೆ, ನಮ್ಮ ಎಲ್ಲಾ ವಿಧಾನಗಳ ಮತ್ತು ಮನಸ್ಥಿತಿಗಳ ಚೇತನ ನಾವಾಗಿದ್ದೇವೆ, ನಮ್ಮ ಎಲ್ಲ ಕಾರ್ಯ ನಿರ್ವಹಣೆಯ, ನಮ್ಮ ಆಗುವಿಕೆಯ ಮತ್ತು ರಚಿಸುವಿಕೆಯ ಕಾರಣ, ಉದ್ದೇಶ ಮತ್ತು ಗುರಿಯಾಗಿದ್ದೇವೆ.

ಕವಿ, ಕಲಾವಿದ ಅಥವಾ ಸಂಗೀತಗಾರನು ಸೃಷ್ಟಿ ಮಾಡುವಾಗ ನಿಜವಾಗಿಯೂ ಏನನ್ನೂ ಮಾಡುವುದಿಲ್ಲ, ಆದರೆ ತನ್ನ ಅವ್ಯಕ್ತ ಆತ್ಮದಲ್ಲಿನ ಕೊಂಚ ಸಾಮರ್ಥ್ಯವನ್ನು ಅಭಿವ್ಯಕ್ತಿಯ ರೂಪದಲ್ಲಿ ಪರಿವರ್ತಿಸುತ್ತಾನೆ. ಹಾಗೆಯೇ ಚಿಂತಕ, ರಾಜನೀತಿಜ್ಞ ಅಥವಾ ಯಂತ್ರಜ್ಞ ತಮ್ಮಲ್ಲಿ ಅಡಗಿರುವಂಥ ಸಾಮರ್ಥ್ಯಗಳನ್ನು ಮಾತ್ರ ಒಂದು ರೂಪಕ್ಕೆ ತರುತ್ತಾನೆ. ಇದೆಲ್ಲವೂ ಅವರೇ ಅಗಿದ್ದಾರೆ, ಒಂದು ರೂಪಕ್ಕೆ ಎರಕ ಹೊಯ್ದಾಗಲೂ ಅವರೇ ಅಗಿದ್ದಾರೆ, ಅಂತೆಯೇ ಇದು ಜಗತ್ತಿನ ಹಾಗೂ ಅನಂತದ ಜೊತೆಯೂ ಆಗುತ್ತದೆ.

ಎಲ್ಲಾ ಸೃಷ್ಟಿ ಅಥವಾ ಆಗುವಿಕೆಯು ಈ ಸ್ವಯಂ ಅಭಿವ್ಯಕ್ತಿಯೇ ಹೊರತು ಮತ್ತೇನೂ ಅಲ್ಲ. ಬೀಜದಿಂದ ಹೊರಹೊಮ್ಮುವಂಥದ್ದು ಈಗಾಗಲೇ ಅದರಲ್ಲಿ ಅಡಕವಾಗಿದೆ, ಜೀವದ ರೂಪದಲ್ಲಿ ಮೊದಲೇ ಅಲ್ಲಿದೆ, ತಾನು ಏನಾಗಿ ಹೊರಹೊಮ್ಮಬೇಕೆನ್ನುವ ಇಚ್ಛೆ ಪೂರ್ವ ನಿರ್ಧರಿತವಾಗಿದೆ, ಹಾಗೆ ಹೊರಹೊಮ್ಮುವ ಆನಂದದಲ್ಲಿ ಪೂರ್ವನಿಯೋಜಿತವಾಗಿದೆ.

ಮೂಲ ಪ್ಲಾಸ್ಮದಲ್ಲಿ (ಜೀವ ದ್ರವ್ಯದಲ್ಲಿ) ತನ್ನ ಅಸ್ತಿತ್ವದ ಶಕ್ತಿಯಲ್ಲಿ ಪರಿಣಾಮವಾಗಿ ಉದ್ಭವಿಸುವ ಜೀವಿಯೇ ಇತ್ತು. ಅದು ಯಾವಾಗಲೂ ತನ್ನ ಸ್ವರೂಪವನ್ನು ಪ್ರಕಟಿಸುವ ಅನಿವಾರ್ಯ ಪ್ರೇರಣೆಯ ಅಡಿಯಲ್ಲಿ ತನ್ನ ಸ್ವಯಂ ಪ್ರಜ್ಞೆಯ ಭಾರವನ್ನು ಹೊತ್ತಿರುವ ರಹಸ್ಯ ಶಕ್ತಿಯಾಗಿದೆ.

ತನ್ನಿಂದ ತಾನೇ ರಚಿಸುವಂಥ ಅಥವಾ ಅಭಿವೃದ್ಧಿಪಡಿಸುವಂಥ ಒಬ್ಬ ವ್ಯಕ್ತಿಯು, ತನ್ನಲ್ಲಿ ಕೆಲಸ ಮಾಡುವ ಶಕ್ತಿ ಮತ್ತು ಅವನು ಕೆಲಸ ಮಾಡುವ ವಸ್ತುವಿನ ನಡುವೆ ವ್ಯತ್ಯಾಸವನ್ನು ಮಾಡುತ್ತಾನೆ. ವಾಸ್ತವದಲ್ಲಿ ಆ ಶಕ್ತಿಯು ಅವನೇ ಆಗಿದ್ದಾನೆ, ಅದು ಸಾಧನೀಕರಿಸುವ ವ್ಯಕ್ತಿಗತ ಪ್ರಜ್ಞೆಯು ಅವನೇ ಆಗಿದ್ದಾನೆ, ಅದು ಬಳಸುವ ವಸ್ತು ಅವನೇ ಆಗಿದ್ದಾನೆ, ಫಲಿತಾಂಶದ ರೂಪವು ಅವನೇ ಆಗಿದ್ದಾನೆ.

ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಇದು ವಿವಿಧ ಘಳಿಗೆಗಳಲ್ಲಿ ಕೇಂದ್ರೀಕೃತವಾಗುವಂಥ, "ಇದು ನಾನೇ" ಎಂದು ಹೇಳುವಂಥ ಮತ್ತು ಸ್ವ–ಶಕ್ತಿಯ ವಿವಿಧ ಲೀಲೆಯಿಂದ ವಿವಿಧ ಸ್ವರೂಪಗಳ ಸೃಷ್ಟಿಗೆ ಪ್ರಯತ್ನಿಸುವಂಥ ಪುರುಷನ ಒಂದೇ ಅಸ್ತಿತ್ವ, ಒಂದೇ ಶಕ್ತಿ, ಒಂದೇ ಆನಂದವಾಗಿದೆ.

**ಅದು ಏನನ್ನು ಬೇಡುತ್ತದೆ:**

ಅದು ಸೃಷ್ಟಿಸುವುದು (ತನ್ನನ್ನು ತಾನು) ಸ್ವಯಂ ಮಾತ್ರವೇ ಆಗಿದೆ; ಅದು ಬೇರೆ ಏನೂ ಆಗಿರಲಾರದು. ಅದು ಒಂದು ನಾಟಕ, ಒಂದು ಲಯ, ತನ್ನ ಅಸ್ತಿತ್ವದ ಒಂದು ವಿಕಾಸ, ಚೈತನ್ಯದ ಶಕ್ತಿ ಮತ್ತು ಆನಂದದ ಆನಂದವಾಗಿದೆ.

ಆದ್ದರಿಂದ, ಈ ಜಗತ್ತಿಗೆ ಯಾವುದೇ ಬರಲಿ, ಅದು ಇದರ ಹೊರತು ಬೇರೆ ಏನನ್ನೂ ಬೇಡುವುದಿಲ್ಲ. ಅದೇನೆಂದರೆ, ತಾನು ಉದ್ದೇಶಿತ ರೂಪವನ್ನು ಪಡೆದು–ಕೊಳ್ಳುವುದು, ಆ ರೂಪದಲ್ಲಿ ತನ್ನ ಇರುವಿಕೆಯನ್ನು ವಿಸ್ತಾರಗೊಳಿಸಿಕೊಳ್ಳುವುದು,

ಅದರಲ್ಲಿರುವಂಥ ಅನಂತ ಪ್ರಜ್ಞೆಯನ್ನು ಮತ್ತು ಶಕ್ತಿಯನ್ನು ಅನಂತವಾಗಿ ಬೆಳೆಸುವುದು, ಅಭಿವ್ಯಕ್ತಗೊಳಿಸುವುದು, ಹೆಚ್ಚಿಸುವುದು, ಅರಿತುಕೊಳ್ಳುವುದು. ಅಭಿವ್ಯಕ್ತಗೊಂಡಿರುವುದಕ್ಕೆ, ಆಶಿಸಿದ ರೂಪವನ್ನು ಹೊಂದಿದ್ದಕ್ಕೆ ಅತ್ಯಾನಂದವನ್ನು ಹೊಂದುವುದು. ಪ್ರಜ್ಞೆಯ ಲಯದ, ಶಕ್ತಿಯ ಲೀಲೆಯ ಅತ್ಯಾನಂದವನ್ನು ಹೊಂದುವುದು ಮತ್ತು ಆ ಅತ್ಯಾನಂದವನ್ನು ಸಾಧ್ಯವಾದ ಯಾವುದೇ ಸಾಧನದಿಂದ ಅತಿಶಯಗೊಳಿಸುವುದು ಮತ್ತು ಪರಿಪೂರ್ಣಗೊಳಿಸುವುದು. ಇರುವಿಕೆಯಿಂದ, ಪ್ರಜ್ಞಾಶಕ್ತಿಯಿಂದ ಅದರ ಅಂತರಾಳದಲ್ಲಿರುವ ಕ್ರಿಯಾತ್ಮಕ ಆನಂದವನ್ನು ಅದಕ್ಕೆ ತನ್ನ ಯಾವುದೇ ಕಲ್ಪನೆಯ ಮುಖಾಂತರ ಸಲಹೆಯನ್ನು ನೀಡುವುದು.

**ಗುರಿಯು ಏನಾಗಿದೆ:**

ಒಂದು ವೇಳೆ ಯಾವುದೇ ಗುರಿ ಇದ್ದರೆ, ಯಾವುದೇ ಪೂರ್ಣತ್ವದೆಡೆಗೆ ಸಂಗತಿಗಳು ಒಲವು ತೋರಿದ್ದರೆ, ಆಗ ಮಾತ್ರ ಅದು ಪೂರ್ಣತ್ವವಾಗಬಹುದು. ಯಾವುದರಲ್ಲಿ? – ವ್ಯಕ್ತಿಯಲ್ಲಿ ಮತ್ತು ವ್ಯಕ್ತಿಗಳನ್ನು ಒಳಗೊಂಡ ಸಮಷ್ಟಿಯಲ್ಲಿ. ಯಾವುದರ? – ಅದರ ಸ್ವ–ಅಸ್ತಿತ್ವದ, ಅದರ ಸಾಮರ್ಥ್ಯ ಹಾಗೂ ಪ್ರಜ್ಞೆಯ ಮತ್ತು ಅದರ ಇರುವಿಕೆಯ ಅತ್ಯಾನಂದದ.

ಆದರೆ, ಇಂತಹ ಪೂರ್ಣತೆಯು, ವ್ಯಕ್ತಿಗತ ರಚನೆಯ ಮಿತಿಗಳೊಳಗೆ ಕೇಂದ್ರೀಕೃತವಾದ ವ್ಯಕ್ತಿಗತ ಪ್ರಜ್ಞೆಯಲ್ಲಿ ಸಾಧ್ಯವಿಲ್ಲ; ಸಂಪೂರ್ಣ ಪೂರ್ಣತೆಯು ಸೀಮಿತದಲ್ಲಿ ಸಂಭವನೀಯವಿಲ್ಲ. ಏಕೆಂದರೆ, ಅದು ಸೀಮಿತದ ಸ್ವ–ಕಲ್ಪನೆಗೆ ಪರಕೀಯವಾಗಿದೆ.

ಆದ್ದರಿಂದ, ವ್ಯಕ್ತಿಯಲ್ಲಿ, ಅನಂತ ಪ್ರಜ್ಞೆಯ ಉದಯವೇ ಸಾಧ್ಯವಾದ ಏಕೈಕ ಅಂತಿಮ ಗುರಿಯಾಗಿದೆ; ಅದು ಸ್ವ–ಜ್ಞಾನದಿಂದ ಮತ್ತು ಸ್ವ–ಸಾಕ್ಷಾತ್ಕಾರದಿಂದ ತನ್ನ ಸ್ವಯಂ ಸತ್ಯವನ್ನು ಪುನರ್ವಶ ಮಾಡಿಕೊಳ್ಳುವುದಾಗಿದೆ. ಪ್ರಕೃತಿಯಲ್ಲಿರುವ ಅನಂತ ಸತ್ಯವನ್ನು, ಪ್ರಜ್ಞೆಯಲ್ಲಿನ ಅನಂತದ, ಆನಂದದಲ್ಲಿನ ಅನಂತದ ಮರು ಪಡೆಯುವಿಕೆಯಾಗಿದೆ. ಇದು, ಅವನ ಸ್ವಯಂ–ಚೇತನ ಮತ್ತು ಸೀಮಿತ ಮುಖವಾಡ ಮಾತ್ರವಾದಂಥ ಸತ್ಯವನ್ನು ಹಾಗೂ ವಿಭಿನ್ನ ಅಭಿವ್ಯಕ್ತಿಗೆ ಸಾಧನವನ್ನು ಪುನಃ ಪಡೆದುಕೊಳ್ಳುವುದಾಗಿದೆ.

**ಲೋಕ–ಜಾಲಕಿದೋ ಸೂತ್ರ**

ಈ ವಿಶ್ವ ಕ್ರೀಡೆಯ ಸ್ವರೂಪವೇ ಸಚ್ಚಿದಾನಂದನ ಅಸ್ತಿತ್ವದ ವಿಸ್ತಾರದಲ್ಲಿ ಸ್ಥಾನ ಮತ್ತು ಕಾಲದ ರೂಪದಲ್ಲಿ ಅನುಭವಿಸಿದ ಪ್ರಕಾರ, ನಾವು ಮೊದಲು ಜಾಗೃತ ಸತ್ವದ ಸಾಂದ್ರತೆಯಲ್ಲಿ ಹೊರಬರುವ ಮತ್ತು ಅನಂತ ವಿಭಾಗತೆಯ ವಸ್ತುವಿನಲ್ಲಿ ಸ್ವಯಂ ಅವಲಂಬಿಸುವಿಕೆಯನ್ನು ಗ್ರಹಿಸಿಕೊಳ್ಳಬೇಕು, ಇಲ್ಲದೆ ಹೋದರೆ ಸೀಮಿತ ವೈವಿಧ್ಯತೆ ಇರಲಾರದು. ನಂತರ, ಸ್ವಯಂ ಬಂಧಿತ ಶಕ್ತಿಯು ಸಾರಭೂತ ಅಸ್ತಿತ್ವವಾಗಿ, ಜೀವಿಸುವ ಅಸ್ತಿತ್ವವಾಗಿ, ಚಿಂತನೆ ಮಾಡುವ ಅಸ್ತಿತ್ವವಾಗಿ ಉದಯಿಸುತ್ತದೆ; ಕೊನೆಯದಾಗಿ, ರೂಪುಗೊಂಡ ಚಿಂತನೆಯ ಅಸ್ತಿತ್ವವು ಚೇತನವನ್ನು ಹಾಗೂ ಅನಂತವನ್ನು ಜಗತ್ತಿನಲ್ಲಿ ವಿನೋದಿಸುವುದರ ಸ್ವಾತಂತ್ರ್ಯದಲ್ಲಿ ಸಂಪೂರ್ಣವಾಗಿ ಬಿಡುಗಡೆಯಾಗುವುದು, ಮತ್ತು ಆ ಬಿಡುಗಡೆಯಿಂದ ಅಸೀಮ ಸತ್–ಚಿತ್–ಆನಂದವನ್ನು ತಿರುಗಿ ಪಡೆದುಕೊಳ್ಳುವುದು, ಇದು ಸದಾ ಗುಪ್ತವಾಗಿ, ನಿಜವಾಗಿ ಹಾಗೂ ಶಾಶ್ವತವಾಗಿಯೂ ಇರುವುದು. ಈ ತ್ರಿವಿಧ ಚಲನೆಯೇ ವಿಶ್ವದ ರಹಸ್ಯದ ಮುಖ್ಯ ಕೀಲಿಕೈ ಆಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 21/121–23 – ಶ್ರೀ ಅರವಿಂದರು**

*ವಿಶ್ವವು ಕೇವಲ ಭೌತಿಕ ಸತ್ಯವಲ್ಲ, ಆಧ್ಯಾತ್ಮಿಕ ಸತ್ಯವೂ ಕೂಡ. ಜೀವನವು ಕೇವಲ ಶಕ್ತಿಗಳ ಆಟ ಅಥವಾ ಮಾನಸಿಕ ಅನುಭವವಾಗಿರದೆ, ಅಡಗಿರುವ ಆತ್ಮದ ವಿಕಾಸಕ್ಕೆ ಕ್ಷೇತ್ರವೂ ಕೂಡ ಆಗಿದೆ. ಮಾನವ ಜೀವನವು ಈ ಸತ್ಯವನ್ನು ಗ್ರಹಿಸಿ, ಅದನ್ನು ನಮ್ಮ ಅಸ್ತಿತ್ವದ ಪ್ರೇರಣಾ ಶಕ್ತಿಯನ್ನಾಗಿ ಮಾಡಿ, ಅದರ ಪರಿಣಾಮಕಾರಿ ಸಾಧನೆಯನ್ನು ಕಂಡುಹಿಡಿದಾಗ ಮಾತ್ರ ಪೂರ್ಣತೆಯನ್ನು ಪಡೆದು ಅದು ಸ್ವಯಂ ಅತಿಕ್ರಮಿಸುವುದು.*

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/374 – ಶ್ರೀ ಅರವಿಂದರು**

## ಚಿಂತನಗಳು ಮತ್ತು ಸ್ಫುಲಿಂಗಗಳು

**ಲಕ್ಷ್ಯ:**

ನಾವು ತಿಳಿವನ್ನು ಮೀರಿ ಹೋದಾಗ, ನಾವು ಜ್ಞಾನವನ್ನು ಹೊಂದುತ್ತೇವೆ. ಉದ್ದೇಶ ಸಹಾಯಕವಾಗಿತ್ತು; ಉದ್ದೇಶ ಅಡ್ಡಿಯಾಗಿದೆ.

ನಾವು ಇಚ್ಛೆಗಳನ್ನು ಮೀರಿದಾಗ, ನಾವು ಸಾಮರ್ಥ್ಯವನ್ನು ಹೊಂದುತ್ತೇವೆ. ಪ್ರಯತ್ನವೇ ಸಹಾಯಕವಾಗಿತ್ತು; ಪ್ರಯತ್ನವೇ ಅಡ್ಡಿಯಾಗಿದೆ.

ಸುಖ ಸಂತೋಷಗಳನ್ನು ಮೀರಿ ಹೋದಾಗ, ನಾವು ಆನಂದವನ್ನು ಪಡೆಯುತ್ತೇವೆ. ಆಸೆಯೇ ಸಹಾಯಕವಾಗಿತ್ತು; ಆಸೆಯೇ ಅಡ್ಡಿಯಾಗಿದೆ.

ನಾವು ವ್ಯಕ್ತಿಗತ ಮಾಡುವುದನ್ನು ಮೀರಿ ಹೋದಾಗ, ಆಗ ನಾವು ನಿಜವಾದ ವ್ಯಕ್ತಿಗಳಾಗುತ್ತೇವೆ. ಅಹಂಕಾರ ಸಹಾಯಕವಾಗಿತ್ತು; ಅಹಂಕಾರ ಅಡ್ಡಿಯಾಗಿದೆ.

ಮಾನವತೆಯನ್ನು ಮೀರಿದ ನಂತರ ನಾವು ಮನುಷ್ಯರಾಗಿರುತ್ತೇವೆ. ಪ್ರಾಣಿಯು ಸಹಾಯಕವಾಗಿತ್ತು; ಪ್ರಾಣಿಯೇ ಅಡ್ಡಿಯಾಗಿದೆ.

ಉದ್ದೇಶವನ್ನು ವ್ಯವಸ್ಥಿತ ಅಂತರ್ಜ್ಞಾನವನ್ನಾಗಿ ಪರಿವರ್ತಿಸು; ನಿನ್ನ ಎಲ್ಲವೂ ಬೆಳಕಾಗಲಿ. ಇದು ನಿನ್ನ ಲಕ್ಷ್ಯ.

ಪ್ರಯತ್ನವನ್ನು ಆತ್ಮಬಲದ ಸರಳ ಹಾಗು ಸ್ವಾಮಿಯುತ ಪ್ರವಾಹವಾಗಿ ರೂಪಾಂತರಿಸು; ನಿನ್ನ ಎಲ್ಲವೂ ಜಾಗೃತ ಶಕ್ತಿಯಾಗಲಿ. ಇದು ನಿನ್ನ ಗುರಿ.

ಆನಂದವನ್ನು ಸಮವಾದ ಮತ್ತು ವಸ್ತುರಹಿತವಾದ ಪರಮಾನಂದವನ್ನಾಗಿ ಪರಿವರ್ತಿಸು; ನಿನ್ನ ಎಲ್ಲವೂ ಅತ್ಯಾನಂದವಾಗಲಿ. ಇದು ನಿನ್ನ ಗುರಿ.

ವಿಭಜಿತ ವ್ಯಕ್ತಿಯನ್ನು ವಿಶ್ವವ್ಯಕ್ತಿಯನ್ನಾಗಿ ಪರಿವರ್ತಿಸು; ನಿನ್ನ ಎಲ್ಲವೂ ದೈವಿಕವಾಗಲಿ. ಇದು ನಿನ್ನ ಗುರಿ.

ನಿನ್ನಲ್ಲಿರುವ ಪ್ರಾಣಿಯನ್ನು, ಚಾಲಕನನ್ನಾಗಿ ರೂಪಾಂತರಿಸು; ನಿನ್ನ ಎಲ್ಲವೂ ಕೃಷ್ಣಮಯವಾಗಲಿ. ಇದು ನಿನ್ನ ಗುರಿ.

* * *

ಚಿಂತನೆಯು ಅಸ್ತಿತ್ವಕ್ಕೆ ಅಥವಾ ಅಸ್ತಿತ್ವದ ಕಾರಣಕ್ಕೆ ಅಗತ್ಯವಿಲ್ಲ, ಆದರೆ ನಾನು ನನ್ನಲ್ಲಿ ಏನನ್ನು ಸ್ವಯಂ ಕಂಡುಕೊಂಡಿದ್ದೇನೆಯೋ ಅದಾಗುವುದಕ್ಕೆ ಇದು ಒಂದು ಸಾಧನವಾಗಿದೆ; ಎಲ್ಲಾ ಆಲೋಚನೆಗಳು ನನಗೆ ಸೂಚಿಸುವುದನ್ನು ನಾನು ಮಾಡಬಹುದು; ಎಲ್ಲ ಆಲೋಚನೆಗಳು ನನ್ನಲ್ಲಿ ಏನನ್ನು ಬಹಿರಂಗಪಡಿಸುತ್ತವೆಯೋ, ನಾನು ಅದಾಗಬಹುದು. ಇದು ಮನುಷ್ಯನಲ್ಲಿರುವ ಅಚಲವಾದ ನಂಬಿಕೆಯಾಗಿರಬೇಕು, ಏಕೆಂದರೆ ದೇವರು ಅವನಲ್ಲಿ ನೆಲೆಸಿದ್ದಾನೆ.

ಮನುಷ್ಯನು ಈಗಾಗಲೇ ಮಾಡಿದ ಕೆಲಸಗಳನ್ನು ಶಾಶ್ವತವಾಗಿ ಪುನರಾವರ್ತಿಸುತ್ತ ಹೋಗುವುದಲ್ಲ, ಬದಲಾಗಿ ಹೊಸ ಅರಿವುಗಳನ್ನು ಸಾಧಿಸುವುದು ಹಾಗೂ ಕನಸಿಗೆ ಕಾಣದ ಪ್ರಭುತ್ವಗಳನ್ನು ಸಾಧಿಸುವುದು ನಮ್ಮ ಕೆಲಸವಾಗಿದೆ. ಜೀವಾತ್ಮ, ಜಗತ್ತು ಮತ್ತು ಸಮಯ, ನಮಗೆ ನಮ್ಮ ಕ್ಷೇತ್ರಕ್ಕಾಗಿ ಕೊಡಮಾಡಲ್ಪಟ್ಟಿವೆ. ದೂರದೃಷ್ಟಿ, ಭರವಸೆ ಮತ್ತು ಸೃಜನಶೀಲ ಕಲ್ಪನೆಯು ನಮ್ಮ ಪ್ರೇರಣೆಗಾಗಿ ನಿಲ್ಲುತ್ತವೆ. ಇಚ್ಛೆ, ಚಿಂತನೆ, ಶ್ರಮಗಳು ನಮ್ಮ ಎಲ್ಲಾ ಪರಿಣಾಮಕಾರಿ ಸಾಧನಗಳಾಗಿವೆ.

ನಾವು ಹೊಸದಾಗಿ ಸಾಧಿಸಬೇಕಾಗಿರುವುದು ಇನ್ನೂ ಏನಾದರು ಇದೆಯೇ? ಹೊಸದಾಗಿ ಸಾಧಿಸಬೇಕಾಗಿರುವುದು ಪ್ರೀತಿ. ಏಕೆಂದರೆ ನಾವು ಇಲ್ಲಿಯವರೆಗೆ ಸಾಧಿಸಿದ್ದು ಬರೀ ಹಗೆತನವನ್ನು ಮತ್ತು ಸ್ವಯಂ ಸಂತುಷ್ಟಿಯನ್ನು ಮಾತ್ರ; ಜ್ಞಾನವನ್ನು ಪಡೆದುಕೊಳ್ಳಬೇಕಾಗಿದೆ, ನಾವು ಇಲ್ಲಿಯವರೆಗೆ ದೋಷ, ಅರಿಕೆ ಮತ್ತು ಗ್ರಹಿಕೆಯನ್ನು ಮಾತ್ರ ಸಾಧಿಸಿದ್ದರಿಂದ ಜ್ಞಾನವನ್ನು ಸಾಧಿಸಬೇಕಾಗಿದೆ; ಈವರೆಗೆ ನಾವು ಕೇವಲ ಸುಖ, ವೇದನೆ ಮತ್ತು ನಿರ್ಲಿಪ್ತತೆಯನ್ನು ಸಾಧಿಸಿದ್ದರಿಂದ ಅತ್ಯಾನಂದವನ್ನು ಸಾಧಿಸಬೇಕಾಗಿದೆ; ಈವರೆಗೆ ನಾವು ಕೇವಲ ದುರ್ಬಲತೆ, ಪ್ರಯತ್ನ ಮತ್ತು ಸೋಲಿಸಲ್ಪಟ್ಟ ವಿಜಯವನ್ನು ಸಾಧಿಸಿದ್ದರಿಂದ ಸಾಮರ್ಥ್ಯವನ್ನು ಗಳಿಸಬೇಕಾಗಿದೆ; ಇನ್ನೂ ನಾವು ಜನನ, ಬೆಳವಣಿಗೆ ಮತ್ತು ಸಾವನ್ನು ಮಾತ್ರ ಸಾಧಿಸಿದ್ದರಿಂದ ಜೀವನವನ್ನು ಸಾಧಿಸಬೇಕಾಗಿದೆ; ಈವರೆಗೆ ನಾವು ಯುದ್ಧವನ್ನು ಮತ್ತು ಸಹಯೋಗವನ್ನು ಮಾತ್ರ ಸಾಧಿಸಿದ್ದರಿಂದ ಏಕತೆಯನ್ನು ಸಾಧಿಸಬೇಕಾಗಿದೆ.

ಒಂದೇ ಮಾತಿನಲ್ಲಿ ಹೇಳಬೇಕೆಂದರೆ, ದೈವೀ ಪ್ರತಿಬಿಂಬದಲ್ಲಿ ನಮ್ಮನ್ನು ಪುನಃ ನಿರ್ಮಿಸಿಕೊಳ್ಳಲು ದೇವತ್ವವನ್ನು ಸಾಧಿಸಬೇಕಾಗಿದೆ.

* * *

**ಅಂತ್ಯ:**

ಮಾನವ ಮತ್ತು ದೇವರ ಸಂಧಿಸುವಿಕೆ ಎಂದರೆ, ಯಾವಾಗಲೂ ಮಾನವನಲ್ಲಿ ದೈವೀ ಪ್ರವೇಶ ಮತ್ತು ದಿವ್ಯತ್ವದಲ್ಲಿ ಮಾನವನ ಸ್ವಯಂ ತಲ್ಲೀನತೆಯಾಗಿದೆ.

ಆದರೆ ಆ ಮುಳುಗುವಿಕೆ ವಿನಾಶದ ಸ್ವರೂಪದಲ್ಲಿಲ್ಲ. ಅಳಿವು ಈ ಎಲ್ಲಾ ಹುಡುಕಾಟದ, ಉತ್ಸಾಹದ, ಸಂಕಟದ ಮತ್ತು ಸಂಭ್ರಮದ ನೆರವೇರಿಕೆ ಅಲ್ಲ. ಒಂದು ವೇಳೆ ಅದು ಆಟದ ಕೊನೆಯಾಗಿದ್ದರೆ, ಆಟವು ಎಂದಿಗೂ ಆರಂಭಗೊಳ್ಳುತ್ತಿರಲಿಲ್ಲ.

ಪರಮಾನಂದವೇ ರಹಸ್ಯ. ಪವಿತ್ರ ಪರಮಾನಂದದ ಬಗ್ಗೆ ತಿಳಿದುಕೊಳ್ಳಿ, ಆಗ ನೀವು ದೇವರನ್ನು ತಿಳಿದುಕೊಳ್ಳುವಿರಿ.

ಇಡೀ ವಿಷಯದ ಆರಂಭ ಆಗ ಏನಾಗಿತ್ತು? ಅಸ್ತಿತ್ವವು, ತನ್ನನ್ನು ತಾನು ಅಸಂಖ್ಯವಾಗಿ ಕಂಡುಕೊಳ್ಳಲು, ಇರುವಿಕೆಯ ಪರಮಾನಂದಕ್ಕಾಗಿ ತನ್ನಷ್ಟಕ್ಕೆ ತಾನು ಅಪವರ್ತಿಸಿ–ಕೊಂಡಿತು ಮತ್ತು ಅಸಂಖ್ಯ ಶತಕೋಟಿ ರೂಪಗಳಲ್ಲಿ ಧುಮುಕಿತು.

ಮಧ್ಯವು ಏನಾಗಿತ್ತು? ಅನೇಕ ಏಕತೆಯ ಸಾಧನೆಗಾಗಿ ಶ್ರಮಿಸುವ ವಿಭಜನೆಯು, ವಿವಿಧ ಜ್ಯೋತಿ ಪ್ರವಾಹದೆಡೆಗೆ ಶ್ರಮಿಸುವ ಅಜ್ಞಾನವು, ಕಲ್ಪನಾತೀತ ಆನಂದದ ಸ್ಪರ್ಶಕ್ಕಾಗಿ ಶ್ರಮಿಸುವ ವೇದನೆಯು; ಮಧ್ಯವಾಗಿದ್ದವು. ಇವೆಲ್ಲವೂ ಅಂಧಕಾರ ಪ್ರತಿಬಿಂಬಗಳು ಮತ್ತು ವಿಕೃತ ಸ್ಪಂದನೆಗಳಾಗಿವೆ.

ಸಮಸ್ತ ವಿಷಯದ ಅಂತ್ಯವು ಏನಾಗಿದೆ? ಜೇನು (ತುಪ್ಪವು) ಸ್ವಯಂ ರುಚಿಸುವಂತೆ, ಅದರ ಪ್ರತಿಯೊಂದು ಹನಿಗಳು ಒಟ್ಟಾಗಿ ರುಚಿಸುವಂತೆ, ಅದರ ಹನಿಗಳು ಪರಸ್ಪರ ರುಚಿಸುವಂತೆ ಮತ್ತು ಪೂರ್ಣ ಜೇನುಗೂಡು ರುಚಿಸುವಂತೆ, ಅಂತ್ಯವು ದೇವರೊಂದಿಗೆ, ಮನುಷ್ಯನ ಆತ್ಮದೊಂದಿಗೆ ಮತ್ತು ವಿಶ್ವದೊಂದಿಗೆ ಆಗಬೇಕು.

ಪ್ರೀತಿಯು ಮೂಲಸ್ವರ, ಸಂತೋಷವು ಸಂಗೀತ, ಸಾಮರ್ಥ್ಯವು ಧಾಟಿ, ಜ್ಞಾನವು ವಾದಕ, ಅನಂತವಾದ ಎಲ್ಲವೂ ಸಂಯೋಜಕ ಮತ್ತು ಪ್ರೇಕ್ಷಕನಾಗಿದ್ದಾನೆ. ಸಾಮರಸ್ಯವು ಎಷ್ಟು ಪ್ರಧಾನವಾಗಿದೆಯೋ ಅಷ್ಟು ಉಗ್ರವಾದ ಆರಂಭಿಕ ಅಪಶ್ರುತಿಗಳನ್ನು ಮಾತ್ರ ನಾವು ತಿಳಿದಿದ್ದೇವೆ; ಆದರೆ ನಾವು ಖಂಡಿತವಾಗಿ ದೈವೀ ಪರಮಾನಂದಗಳ ನಿರ್ಗಮನವನ್ನು ತಲುಪುವೆವು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 23/203–04 – ಶ್ರೀ ಅರವಿಂದರು**

*ಅಪೇಕ್ಷೆಪಡದ ಆತ್ಮಗಳು ದೇವರ ವೈಫಲ್ಯಗಳು; ಆದರೆ ಪ್ರಕೃತಿಯು ಸಂತಸ–ಗೊಂಡಿದೆ ಅವುಗಳನ್ನು ಅನೇಕವಾಗಿಸಲು ಆನಂದಪಡುತ್ತದೆ, ಏಕೆಂದರೆ ಅವು ಅವಳಿಗೆ ಸ್ಥಿರತೆಯ ಭರವಸೆಯನ್ನೀಯುತ್ತವೆ ಹಾಗು ಅವಳ ಸಾಮ್ರಾಜ್ಯವನ್ನು ವಿಸ್ತರಿಸುತ್ತವೆ.*

*ಬಡವರು, ಅಜ್ಞಾನಿಗಳು, ಅನಾರೋಗ್ಯದಿಂದ ಹುಟ್ಟಿದವರು ಅಥವಾ ಕೆಟ್ಟ ಸಂಸ್ಕಾರದವರು ಸಾಮಾನ್ಯ ಜನತೆಯಲ್ಲ; ಸಾಮಾನ್ಯ ಜನತೆ ಯಾರೆಂದರೆ, ಕ್ಷುಲ್ಲಕತನ ಮತ್ತು ಸಾಮಾನ್ಯ ಮಾನವೀಯತೆಯೊಂದಿಗೆ ತೃಪ್ತರಾಗಿರುವವರು.*

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 13/208 – ಶ್ರೀ ಅರವಿಂದರು**

# ಸ್ವಯಂ ಮೋಕ್ಷ ಸೃಷ್ಟಿಯ ಮೂಲ ಉದ್ದೇಶವಲ್ಲ

**– ಅನು: ಶ್ರೀ ಕಿಶೋರಕುಮಾರ ಕಾಸಾರ, ಕಲಬುರ್ಗಿ**

ಈ ಸೃಷ್ಟಿಯಲ್ಲಿ ನಮಗೆ ನಮ್ಮ ಸ್ವಯಂ ಮೋಕ್ಷದ ಅವಶ್ಯಕತೆಯಿಲ್ಲ. ಏಕೆಂದರೆ, ಆತ್ಮವೆಂಬುದು ನಿತ್ಯಮುಕ್ತವಾಗಿರುತ್ತದೆ. ಈ ಬಂಧನವೆಂಬುದೇ ಒಂದು ಭ್ರಮೆಯಾಗಿದೆ. ನಾವು ಮರ್ತ್ಯದಲ್ಲಿ ಬಂಧಿತರಾದಂತೆ ಕಂಡುಬಂದರೂ, ನಿಜದಲ್ಲಿ ನಾವುಗಳು ಬಂಧಿತರಲ್ಲ ಬದಲಾಗಿ ನಿತ್ಯಮುಕ್ತರಾಗಿದ್ದೇವೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 13/71**

ನಾವು ಈ ವಿಶ್ವವನ್ನು ದೈತ್ಯರ ಸೃಷ್ಟಿಯೆಂದೋ ಅಥವಾ ನಮ್ಮ ಆತ್ಮದ ಭ್ರಮೆಯೆಂದೋ ಪರಿಗಣಿಸುವದಿಲ್ಲ. ಬದಲಾಗಿ ಇದನ್ನೊಂದು ದಿವ್ಯತೆಯ ಅಭಿವ್ಯಕ್ತಿಯಾಗಿ ನೋಡುತ್ತೇವೆ. ಅಲ್ಲದೇ ಈ ವಿಶ್ವವು ಇನ್ನೂ ಪರಿಪೂರ್ಣಾ–ವಸ್ಥೆಯನ್ನು ಮುಟ್ಟಿಲ್ಲ. ಅದಿನ್ನೂ ಪ್ರಗತಿಶೀಲ ಮತ್ತು ವಿಕಸನಶೀಲ ಅಭಿವ್ಯಕ್ತಿಯಾಗಿದೆ. ಹಾಗಾಗಿ ಈ ವಿಶ್ವದ ಅವಿಭಾಜ್ಯ ಅಂಗವಾಗಿರುವ ನಾವು ಕೇವಲ ನಮ್ಮ ಮೋಕ್ಷದ ಬೆನ್ನು ಹತ್ತದೆ, ಇದರ ಸರ್ವಾಂಗೀಣ ಅಭಿವೃದ್ಧಿಯಲ್ಲಿ ತೊಡಗಬೇಕಿದೆ. ಅಲ್ಲದೆ ಈ ವಿಶ್ವವು ನಮ್ಮನ್ನು ಜೀವನದಿಂದ ವಿಮುಕ್ತಿಯನ್ನು ಹೊಂದಲಿಕ್ಕಾಗಿಯೋ ಅಥವಾ ವೈಶ್ವಿಕ ವಸ್ತುಗಳನ್ನು ತಿರಸ್ಕರಿಸಿ ಮೋಕ್ಷವನ್ನೇ ಜೀವನದ ಪರಮ ಗುರಿಯಾಗಿಸಿಕೊಳ್ಳಲಿಕ್ಕಾಗಿಯೋ ಸೃಷ್ಟಿಸಿಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 23/328**

ಒಂದು ಪ್ರಚಲಿತವಾದ ಕಲ್ಪನೆಯ ಪ್ರಕಾರ ಈ ಅಸ್ಥಿರವಾದ ಜಗತ್ತಿನ ಜೀವನದಿಂದ ಮುಕ್ತಿಯನ್ನು ಗಳಿಸಿಕೊಳ್ಳಲು ಪುನರ್ಜನ್ಮವೇ ಏಕೈಕ ಮಾರ್ಗವೆಂದು ನಮಗೆ ಬೋಧಿಸಲಾಗಿದೆ. ಒಮ್ಮೆ ಈ ಸ್ವಾತಂತ್ರ್ಯವು ದೊರಕಿದ್ದೇ ಆದಲ್ಲಿ ನಮ್ಮ ಈ ದೈಹಿಕ ವಸ್ತುಸ್ಥಿತಿಗೆ ಇಲ್ಲಿಯಾಗಲೀ ಅಥವಾ ಬೇರೊಂದು ಆಯಾಮದಲ್ಲಿಯೇ ಆಗಲಿ ಬೇರಾವ ಒತ್ತಡಗಳೂ ಇರುವದಿಲ್ಲವೆಂದು ಹೇಳಲಾಗುತ್ತದೆ. ಆದರೆ ಈ ಚಿರಂತನವಾದ ದೈಹಿಕ ಅಸ್ತಿತ್ವವು ಈ ಪೃಥ್ವಿಯಲ್ಲೇ ಇರಲಿ ಅಥವಾ ಬೇರೊಂದು ಸ್ತರದಲ್ಲಿಯೇ ಆಗಲಿ ಜನ್ಮ ತಳೆದರೂ ಅದು ತನ್ನ ಹಿಂದಿನ ಹಿಂದಿನ ಭವದ ಅತೃಪ್ತ ಕಾಮನೆಗಳನ್ನು ಪೂರೈಸಿಕೊಳ್ಳಲು ಸದಾ ಹಾತೊರೆಯುತ್ತಿರುತ್ತದೆ. ಹಾಗಾಗಿ ಇದು

ಪೂರ್ಣ ಸ್ವಾತಂತ್ರ್ಯದ ಭರವಸೆಯನ್ನು ನೀಡಲು ಅಸಮರ್ಥವಾಗಿದೆ. ಹಾಗಾಗಿ ಈ ವ್ಯತಿರಿಕ್ತತೆಯನ್ನು ತೊಡೆದು ಸಂಪೂರ್ಣ ಸ್ವಾತಂತ್ರ್ಯವನ್ನು ಪಡೆಯಲೋಸುಗ ಈ ದೇಹವನ್ನು ಯೋಗದ ಅಗ್ನಿಯಿಂದ ಮಥಿಸಿ ಆತ್ಮವನ್ನು ಬಿಡುಗಡೆಗೊಳಿಸ–ಬೇಕಾಗುತ್ತದೆ. ಹೀಗೆ ಜನ್ಮ–ಜರಾ–ಮೃತ್ಯುಗಳ ಚಕ್ರ ಸರಪಣಿಯಾದ ಪುನರ್ಜನ್ಮಗಳ ಸಂಕೋಲೆಯಿಂದ ಮುಕ್ತವಾಗಿ ಚಿರಂತನ ಪದವಿಯನ್ನು ಪಡೆಯುವ ವಿಧಾನವನ್ನು ಭಾರತೀಯ ದರ್ಶನಗಳಲ್ಲಿ ಬಹು ಹಿಂದಿನಿಂದಲೂ ಪ್ರಚುರಪಡಿಸುತ್ತಾ ಬರಲಾಗಿದೆ. ಈ ಅಸ್ಥಿರ ಜೀವನದಿಂದ ಬೇರಾಗಿ ಸುಂದರ ಬದುಕನ್ನು ಕಟ್ಟಲು ಆ ಮೂಲಕ ಸ್ವರ್ಗೀಯ ಆನಂದವನ್ನು ತನ್ನದಾಗಿಸಿಕೊಳ್ಳುವ ಬಹು ವಿಧದ ಮಾರ್ಗವನ್ನು ಭಾರತದ ಹಲವಾರು ಧರ್ಮಗಳು ಹೇಳಿವೆ. ಇದು ಒಂದು ರೀತಿಯ ಆಮಿಷದ ಸಂಕೇತವಾಗಿ ತೋರಿಬರುತ್ತದೆ. ಭಾರತೀಯ ಪರಂಪರೆಯ ಆದಿ ಭಾಗದಲ್ಲಿ ವೈದಿಕ ಸ್ತೋತ್ರಗಳ ವ್ಯಾಖ್ಯಾನವನ್ನೇ ಜೀವನ ಪದ್ಧತಿಯನ್ನಾಗಿ ಆಚರಿಸಿಕೊಂಡು ಬರುತ್ತಿದ್ದ ಕಾಲದಲ್ಲಿ ಈ ರೀತಿಯ ಕರೆಯನ್ನೇ ಎತ್ತಿ ಹಿಡಿಯಲಾಗುತ್ತಿತ್ತು. ಆದರೆ ಯಾವಾಗ ಧಾರ್ಮಿಕ ದ್ವಂದ್ವಗಳ ಕಾಲಗತಿಯು ಆರಂಭವಾಯಿತೋ ಆಗ ಪ್ರತಿಯೋರ್ವ ದಾರ್ಶನಿಕರೂ ತಮ್ಮ ತಮ್ಮ ಸಿದ್ಧಾಂತಗಳ ಪರಮೋಚ್ಚ ಆಧ್ಯಾತ್ಮಿಕ ಉದ್ದೇಶದ ಭಾಗವಾಗಿ ಈ ಮೋಕ್ಷ ಪದವನ್ನು ಸಾರುತ್ತ ಬಂದರು. ಅದರ ಪ್ರಕಾರ ಆತ್ಮವೆಂಬುದು ಈ ದೇಹ–ಮನಗಳಿಂದ ಮುಕ್ತವಾಗಿ ಕೇವಲ ದೈಹಿಕ ಸಂತೋಷವನ್ನು ಕೊಡುವ ಸ್ವರ್ಗೀಯ ಆನಂದಕ್ಕಿಂತಲೂ ಮಿಗಿಲಾದ ಶಾಶ್ವತವಾದ ಶಾಂತಿಯ ಧಾಮದೆಡೆಗೆ ಚರಿಸುವ ಸಂದೇಶವನ್ನು ಸಾರಲಾರಂಭಿಸಿದವು. ಇದೂ ಸಹ ಆಮಿಷದ ಇನ್ನೊಂದು ರೂಪಕವೇ ಆಗಿದೆ; ಅಂದಿನಿಂದ ಎಲ್ಲೆಡೆ ಸ್ವಯಂ ಮೋಕ್ಷ ಪದಕ್ಕೆ ಜನಾಂಗವು ಹಾತೊರೆಯಲಾರಂಭಿಸಿತು. ಇದರಿಂದ ಪ್ರತಿಯೋರ್ವರಲ್ಲಿದ್ದ ಜೀವನವನ್ನು ಎದುರಿಸಿ ನಿಲ್ಲಬೇಕಾದ ಸಾಮರ್ಥ್ಯವು ಕುಂಠಿತವಾಗುತ್ತಾ ಸಾಗಿತು. ಈ ಮೋಕ್ಷದ ಅಪೇಕ್ಷೆಯು ಅದೆಷ್ಟೇ ಎತ್ತರದ ಸ್ವರೂಪವೇ ಆಗಿರಲಿ ಅದು ಅಹಮಿಕೆಯ ಫಲಿತಾಂಶವೇ ಆಗಿದೆ. ಇದು ನಮ್ಮ ವ್ಯಕ್ತಿತ್ವದ ಕಲ್ಯಾಣಕ್ಕಾಗಿ ಹಾಗೂ ದುಃಖದ ಸಂಕೋಲೆಯಿಂದ ಬಿಡುಗಡೆಯಾಗುವ ಮಾರ್ಗವಾಗಿದ್ದು ಇದು ವೈಯಕ್ತಿಕ ಅಪೇಕ್ಷೆಯನ್ನು ಅವಲಂಬಿಸಿದೆ. ಎಲ್ಲರಿಗೂ ತಮ್ಮ ಕಷ್ಟ–ಕಾರ್ಪಣ್ಯಗಳಿಂದ ಶಾಶ್ವತವಾದ ಮುಕ್ತಿಯ ಅಪೇಕ್ಷೆ ಇರುವುದು ಸಾಮಾನ್ಯ. ಆದರೆ ಅದು ನಮ್ಮ ಅಹಮಿಕೆಯನ್ನು ಹೆಚ್ಚಿಸುವದರಿಂದ ಅದನ್ನು ಬಿಟ್ಟು ಮೇಲೆರುವುದು ತುಸು ಕಷ್ಟಸಾಧ್ಯ! ಅದಕ್ಕಾಗಿ ನಾವು ಆ ಮೋಕ್ಷದ ಬಯಕೆಯನ್ನೂ ಮೀರಿ ಮೇಲೇರಬೇಕಾಗುತ್ತದೆ. ಇದು ನಾವು ಮಾಡುವ ಬಹು ದೊಡ್ಡ ತ್ಯಾಗದ ರೂಪವಾಗಿದೆ. ನಾವು ಪರಮಾತ್ಮನನ್ನು

ಹುಡುಕಬೇಕಿದೆ. ಅವನೆತ್ತರಕ್ಕೆ ಏರಬೇಕಿದೆ. ಈ ಆತ್ಮವನ್ನು ಪರಮಾತ್ಮನೆಡೆಗೆ ಕೊಂಡೊಯ್ಯಬೇಕೆಂಬ ಅಭೀಪ್ಸೆಯೆ ನಮ್ಮ ಅಸ್ತಿತ್ವದ ಅತ್ಯುನ್ನತ ಕರೆಯಾಗಿದೆ. ದಿವ್ಯತೆಯೊಂದಿಗಿನ ಒಕ್ಕೂಟವೇ ವಿಮೋಚನೆಯ ಅನ್ವೇಷಣೆ, ಆತ್ಮದ ಸ್ವಾತಂತ್ರ್ಯ ಮತ್ತು ನಿಜವಾದ ಆತ್ಮದ ಸಾಕ್ಷಾತ್ಕಾರವಾಗಿದೆ. ಹಾಗಾಗಿ ಈ ದೈವೀ ಸಾಕ್ಷಾತ್ಕಾರವೇ ನಮ್ಮ ಬದುಕಿನ ಪ್ರಮುಖ ಗುರಿಯಾಗಿದೆ...

ಹಾಗೆಂದ ಮಾತ್ರಕ್ಕೆ ಈ ಪುನರ್ಜನ್ಮದ ಚಕ್ರ ಸರಪಣಿಯಿಂದ ವಿಮುಕ್ತನಾಗಿ ಮೋಕ್ಷ ಪದವನ್ನು ಧಾರಣೆ ಗೈಯ್ಯುವದೆಂದರೆ ಅದು ಮರ್ತ್ಯ ಜೀವನವನ್ನು ತಿರಸ್ಕರಿಸಿದ ಹಾಗಲ್ಲ. ಅಥವಾ ಆಧ್ಯಾತ್ಮಿಕ ಮಾರ್ಗದಲ್ಲಿ ನಡೆದು ಬದುಕಿನಿಂದ ವಿಮುಖನಾದಂತೆ ಅಲ್ಲ. ಈ ಮೋಕ್ಷ ಪದವು ನಮ್ಮನ್ನು ಮನುಕುಲದಿಂದ ಅಥವಾ ಸಾಮಾಜಿಕ ಜೀವನದಿಂದ ಸಂಪೂರ್ಣವಾಗಿ ಬೇರೆ ಮಾಡುವ ವಿಧಾನವೂ ಅಲ್ಲ. ಇದು ದಿವ್ಯತೆಯೊಂದಿಗೆ ಆಂತರ್ಯದ ಸಂಪರ್ಕದಲ್ಲಿರುವ ಮಾರ್ಗವಾಗಿದೆ. ಇದರಲ್ಲಿ ಕಳೆದುಹೋದ ಭವದ ಭಾವನೆಗಳಿಲ್ಲ, ಬರಲಿರುವ ಜನ್ಮಗಳ ಜಾಲವಿಲ್ಲ. ಬದಲಿಗೆ ಜನ್ಮ–ಜರಾ–ಮೃತ್ಯುರಹಿತವಾದ ಚಿರಂತನ ಪದವಿಯಾಗಿದೆ. ಹೀಗೆ ಮೋಕ್ಷ ಪದವಿಗೆ ಭಾಜನರಾಗಿ ಅಂತರಂಗದಿಂದ ಮಕ್ತನಾದ ಚೇತನವೊಂದು ಕರ್ಮರಹಿತನಾಗಿಯೂ–ಕರ್ಮಸಹಿತನಾಗಿಯೂ ಇರುತ್ತಾನೆ ಎಂದು ಗೀತೆಯಲ್ಲಿ ಸಾರಲಾಗಿದೆ. ಏಕೆಂದರೆ ಪ್ರಕೃತಿ–ಪುರುಷಗಳೇ ಅವನೊಳಗೆ ಕ್ರಿಯಾ–ಕರ್ಮಗಳನ್ನು ನಡೆಸುತ್ತಿರುತ್ತಾರೆ. ಒಂದು ವೇಳೆ ಈ ಚೇತನವು ಒಂದೇ ಸಮಯಕ್ಕೆ ನೂರು ದೇಹಗಳನ್ನು ಧರಿಸಿ ರಂಗಕ್ಕಿಳಿದರೂ ಅದು ಯಾವುದೇ ಜನ್ಮಗಳ ಚಕ್ರ ಸರಪಣಿಯಿಂದ ಹೊರತಾಗಿಯೇ ಇರುತ್ತದೆ. ಹಾಗೂ ಕ್ರಿಯಾ ಸರಪಣಿಯಿಂದಲೂ ಮುಕ್ತನಾಗಿಯೇ ಇರುತ್ತದೆ. ಏಕೆಂದರೆ ಆ ಚೇತನವು ಜನ್ಮವಿರದ ಮೃತ್ಯುವಿರದ ಅನಂತ ಆತ್ಮದ ಶರೀರ ಬಿಂಬದೊಳಗೆ ನೆಲೆಸಿರುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 23/270**

ನಾವೀಗ ಬದುಕುತ್ತಿರುವ ವಾಸ್ತವಿಕ ಜಗತ್ತಿಗಿಂತಲೂ ಭಿನ್ನವಾದ ಬೇರೊಂದು ಲೋಕದ ಕುರಿತಾದ ದರ್ಶನವನ್ನು ನಮ್ಮ ಆಂತರ್ಯವು ಅರಿತುಕೊಂಡಾಗ ನಾವು ಮೊದಲು ಅದರೆಡೆಗೆ ಆಕರ್ಷಿತವಾಗುತ್ತೇವೆ. ನಂತರ ನಾವು ನಮ್ಮೀ ಬದುಕಿನಿಂದ ಬೇರಾಗಿ ಸಂಪೂರ್ಣವಾಗಿ ಆ ದೂರದಲ್ಲಿರುವ ಉನ್ನತ ವಾಸ್ತವ್ಯದ ಸ್ತರದಲ್ಲಿಯೇ ನೆಲೆಸಬೇಕೆಂಬ ಅಭೀಪ್ಸೆಯನ್ನು ತಾಳುತ್ತೇವೆ. ಯಾವಾಗ ಈ ಆಕರ್ಷಣೆಯು ತೀವ್ರ

ಸ್ವರೂಪವನ್ನು ಪಡೆಯುತ್ತದೆಯೋ ಆಗ ನಾವು ಆ ಅತ್ಯುನ್ನತ ಅಸ್ತಿತ್ವದೆಡೆಗೆ ಹಾಗೂ ಆ ಅನಂತಾನಂದದ ಪರಿಧಿಯೆಡೆಗೆ ಸೆಳೆಯಲ್ಪಡುತ್ತೇವೆ. ಮತ್ತು ಈ ಕೆಳ ಹಂತವನ್ನು ಅಥವಾ ನಾವೀಗ ಬದುಕುತ್ತಿರುವ ಸೀಮಿತ ವಿಸ್ತಾರವನ್ನು ಒಂದು ಭ್ರಮೆಯಂತೆ ಕಂಡು ಅದನ್ನು ಖಂಡಿಸಲು ಆರಂಭಿಸುತ್ತೇವೆ. ಆ ನಿರ್ವಾಣದೆಡೆಗೆ ಮುನ್ನುಗ್ಗಲು ಪ್ರಯತ್ನಿಸುತ್ತೇವೆ. ಇದರಿಂದ ಆತ್ಮದ ಉತ್ಸಾಹವು ಕರಗಲಾರಂಭಿಸುತ್ತದೆ, ಮುಳುಗಲಾರಂಭಿಸುತ್ತದೆ ಕೊನೆಗೊಮ್ಮೆ ಅಳಿವಿನಂಚಿಗೆ ಸಾಗುತ್ತದೆ. ಆದರೆ ನಿಜವಾದ ಮೋಕ್ಷ ಅಥವಾ ನಿರ್ವಾಣವೆಂದರೆ ಕೇವಲ ತಾನೊಬ್ಬನೇ ಅಲ್ಲದೆ ತನ್ನೊಡನೆ ತನ್ನಿಡೀ ಸ್ತರದ ಅಸ್ತಿತ್ವವನ್ನು ಔನ್ನತ್ಯದೆಡೆಗೆ ಕಂಡೊಯ್ಯುವುದೇ ಆಗಿದೆ. ಒಂದು ವೇಳೆ ನಮ್ಮ ಚೇತನವು ಅದನ್ನು ಕಾರ್ಯರೂಪಕ್ಕೆ ತಂದಿದ್ದೇ ಆದಲ್ಲಿ ಅಂದು ನಾವು ತಲುಪಿದ ಉನ್ನತ ವಾಸ್ತವವೇ ಉಳಿದೆಲ್ಲ ಸ್ತರಗಳಿಗೂ ಮೂಲವಾಗಿದೆ ಎಂಬುದನ್ನು ಕಂಡುಕೊಳ್ಳುತ್ತೇವೆ. ಹಾಗೂ ಆ ಸ್ತರವು ತನ್ನಿಂದ ಹೊರಟ ಸರ್ವ ಅಸ್ತಿತ್ವಗಳನ್ನೂ ಮತ್ತೆ ಸ್ವೀಕರಿಸುತ್ತದೆ ಎಂಬುದನ್ನು ಅರಿಯುತ್ತೇವೆ. ಈ ಅನುಭವಗಳೆಲ್ಲವೂ ನಮ್ಮ ಚೇತನವನ್ನು ರೂಪಾಂತರಿಸುತ್ತಾ ಸಾಗುತ್ತದೆ. ನಾವು ಕ್ರಮೇಣ ಉನ್ನತ ವಾಸ್ತವ್ಯದಿಂದ ಅನಂತದೊಡನೆ ಒಂದಾಗುತ್ತಾ ಸಾಗುತ್ತೇವೆ. ಪರಮೋಚ್ಚ ಪರಿಧಿಗೆ ಹತ್ತಿರವಾಗಿತ್ತಾ ನಡೆಯುತ್ತೇವೆ. ಕೊನೆಗೆ ವಿಶ್ವದ ಸಕಲ ದ್ರವ್ಯಗಳ ಅತ್ಯುನ್ನತ ಮೌಲ್ಯಗಳೆಡೆ ನಿಲ್ಲುತ್ತೇವೆ. ಆಗ ನಮ್ಮಲ್ಲಿರುವ ಮೋಕ್ಷದ ಪರಿಕಲ್ಪನೆಯು ತನ್ನ ಉತ್ಸಾಹವನ್ನು ಕಳೆದುಕೊಳ್ಳುತ್ತದೆ. ಮತ್ತು ನಮ್ಮನ್ನು ಅಲ್ಲಿಯವರೆಗೂ ಕರೆದುಕೊಂಡು ಹೋದ ಮುಮುಕ್ಷತ್ವವು ಅಲ್ಲಿ ತಾನೇತಾನಾಗಿರುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 23/507–08 – ಶ್ರೀ ಅರವಿಂದರು**

ಈ ವಿಶ್ವವು ಹಠಾತ್ತನೆ ಸಂಭವಿಸಿದ ದುರಂತವೊಂದರ ಫಲವಲ್ಲ. ಬದಲಾಗಿ ಅದು ತನ್ನನ್ನು ಸೃಷ್ಟಿಸಿದ ಮೂಲದೆಡೆಗೆ ಅದರ ಅಭಿವ್ಯಕ್ತಿಯೆಡೆಗೆ ಪಯಣಿಸುವ ಒಂದು ಅದ್ಭುತವಾಗಿದೆ.

ಈ ವಿಶ್ವಕ್ಕೆ, 'ಅದು ಭವಿಷ್ಯತ್ತಿನಲ್ಲಿ ಸೌಂದರ್ಯದ ಸಾಕಾರ ರೂಪವಾಗಲಿದೆ' ಎಂಬ ಪ್ರಮಾಣೀಕರಣದ ಅವಶ್ಯಕತೆಯಿದೆ. ಶ್ರೀ ಅರವಿಂದರು ಆಗಲೇ ನಮಗೆ ಆ ಭರವಸೆಯನ್ನು ನೀಡಿದ್ದಾರೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/15 – ಶ್ರೀಮಾತೆ**

# ನಮ್ಮಲ್ಲಿ ಪೂರ್ಣತ್ವದ ಅಸ್ತಿತ್ವವೇ ಪ್ರಕೃತಿಯ ಗಮ್ಯ

ನಾವು ನಮ್ಮತನವನ್ನು, ಅರಿತು ನಾವು ನಾವಾಗುವ ಪ್ರಕ್ರಿಯೆಯು ಬಹು ಮುಖ್ಯವಾಗಿದೆ. ಆದರೆ ಈ ನಮ್ಮತನವೆನ್ನುವುದು ನಮ್ಮ ಆಂತರ್ಯದಲ್ಲಿ ನೆಲೆಗೊಂಡಿರುತ್ತದೆ. ಅದನ್ನು ಸಾಧಿಸಬೇಕಾದರೆ ನಾವು ನಮ್ಮ ಬಾಹ್ಯದ ಅನ್ನ–ಪ್ರಾಣ–ಮನಗಳೆಂಬ ತ್ರಿವಿಧ ರಜ್ಜುಗಳಿಂದಾದ ಭಿಂತಿ (ಶರೀರ/ದೇಹ) ಹರಿದು ಮೇಲೆರಬೇಕು ಅಲ್ಲಿಯೇ ನಮ್ಮ ಋತದ ದಿವ್ಯರೂಪವು ನೆಲೆಸಿರುತ್ತದೆ. ನಾವು ನಮ್ಮತನವನ್ನು ಅರಿತುಕೊಳ್ಳುವುದರ ಮೂಲಕ ನಮ್ಮ ಉನ್ನತ ವಾಸ್ತವ್ಯಕ್ಕೆ ತಲುಪಬೇಕಿದೆ. ನಾವು ನಮ್ಮ ಆಂತರ್ಯದಲ್ಲೇ ಬೆಳೆದು ಪ್ರಜ್ಞೆಯಲ್ಲಿ ಪ್ರವೃದ್ಧಮಾನವಾಗುವ ಮೂಲಕವೇ ಅದನ್ನು ಕಂಡುಕೊಳ್ಳಬಹುದು. ಒಮ್ಮೆ ಅದನ್ನು ಸಾಧಿಸಿಬಿಟ್ಟರೆ ಊರ್ಧ್ವದಲ್ಲಿರುವ ನಮ್ಮ ಆಧ್ಯಾತ್ಮಿಕ ಅಥವಾ ದಿವ್ಯತೆಯ ಮನ–ಪ್ರಾಣ–ದೇಹಗಳು ಅವತರಿಸಿ ನಮ್ಮನ್ನು ದಿವ್ಯ ಜೀವನದ ನವ್ಯ ಸೃಷ್ಟಿಯೆಡೆಗೆ ಕರೆದೊಯ್ಯುತ್ತದೆ. ಪ್ರಸ್ತುತ ವಿಶ್ವದಲ್ಲಿ ಈ ಪ್ರಕ್ರಿಯೆಯು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ಪ್ರತಿಯೋರ್ವ ಮರ್ತ್ಯನೂ ತನ್ನೊಳಗಿನ ದಿವ್ಯಾತ್ಮವನ್ನು, ದಿವ್ಯತೆಯ ವಾಸ್ತವ್ಯವನ್ನು ಶೋಧಿಸಬೇಕು. ಮತ್ತು ಕಂಡುಕೊಂಡ ಆ ದಿವ್ಯತೆಯನ್ನು ತನ್ನ ದಿನನಿತ್ಯದ ಜೀವನ ಮತ್ತು ಅಸ್ತಿತ್ವದಲ್ಲಿ ವ್ಯಕ್ತಡಿಸುತ್ತಾ ಸಾಗಬೇಕು. ಎಲ್ಲದಕ್ಕೂ ಮೊದಲು ಆಂತರ್ಯದಲ್ಲಿ ದಿವ್ಯ ಜೀವನದ ಸ್ಫುರಣವಾಗಬೇಕು. ಏಕೆಂದರೆ ನಮ್ಮ ಬಾಹ್ಯ ಪ್ರವೃತ್ತಿಯು ಆಂತರ್ಯದ ಅನುಭೂತಿಯೇ ಆಗಿರುತ್ತದೆ. ನಮ್ಮ ಆಂತರ್ಯದಲ್ಲಿ ದಿವ್ಯತೆಯ ನೆಲೆ ಇಲ್ಲದಿದ್ದರೆ ಬಾಹ್ಯದಲ್ಲಿ ಅದರ ಪ್ರಕಾಶವು ಗೋಚರಿಸಲು ಸಾಧ್ಯವಿಲ್ಲ. ಪ್ರತಿಯೋರ್ವ ಮಾನವನ ಆಂತರ್ಯದಲ್ಲಿ ಆಧ್ಯಾತ್ಮಿಕ ಚೇತನವೊಂದು ಮರೆಯಾಗಿ ನೆಲೆಸಿರುತ್ತದೆ. ಅವನು ಅದರ ಮುಸುಕನ್ನು ಸರಿಸಿ ದಿವ್ಯ ಚೇತನವನ್ನು ದೃಗ್ಗೋಚರಗೊಳಿಸಬೇಕಿದೆ. ಅವನೊಳಗೆ ಚಿರಂತನ ಆತ್ಮ ಮತ್ತು ಚೈತನ್ಯದ ವಾಸ್ತವ್ಯವು ಇಲ್ಲದೇ ಹೋದರೆ ಅವನ ಅಸ್ತಿತ್ವವು ಪ್ರಸ್ತುತವನ್ನು ಮೀರಿ ಮೇಲೇರಲು ಸಾಧ್ಯವಾಗುವದಿಲ್ಲ.

ನಮ್ಮಲ್ಲಿ ಪೂರ್ಣತ್ವವನ್ನು ಬೆಳೆಸುವುದೇ ಪ್ರಕೃತಿಯ ಉದ್ದೇಶವಾಗಿದೆ. ಆದರೆ ಅದು ಬಾಹ್ಯ ರೂಪದಲಿ ಅಲ್ಲದೆ ಅವನ ಸರ್ವಾಂಗೀಣ ಪ್ರಜ್ಞೆಯಲ್ಲಿ ಧಾರಣ ಗೈಯಬೇಕು. ಅಪ್ರಜ್ಞೆ, ಉಪಪ್ರಜ್ಞೆ ಹಾಗೂ ಅರ್ಧಪ್ರಜ್ಞೆಗಳೆಂಬ ಕೀಳರಿಮೆಗಳು ತನ್ನನ್ನು ತಾನೇ ನಿಯಂತ್ರಿಸಿಕೊಳ್ಳಲು ಸಾಧ್ಯವಾಗದ ತೊಡಕುಗಳಾಗಿ ನಮ್ಮೆದುರು

ನಿಲ್ಲುತ್ತವೆ. ಇದು ಅಸ್ತಿತ್ವವನ್ನು ಮಾತ್ರ ಬಿಂಬಿಸುತ್ತದೆಯೇ ಹೊರತು ಪೂರ್ಣತ್ವವನ್ನು ಶೋಭಿಸುವದಿಲ್ಲ. ಪ್ರತಿಯೋರ್ವರು ತಮ್ಮ ಉನ್ನತ ಅಸ್ತಿತ್ವವನ್ನು ಪಡೆಯಬೇಕಾದರೆ ಮೊದಲು ತಮ್ಮ ಅಸ್ತಿತ್ವದ ಬಗೆಗಿನ ಪೂರ್ಣವಾದ ಮತ್ತು ಸತ್ಯವಾದ ತಿಳಿವಳಿಕೆಯನ್ನು ಹೊಂದಿರಬೇಕು. ಆ ಸ್ವಾನುಭವವೇ ಆಧ್ಯಾತ್ಮಿಕ ಜ್ಞಾನದ ಆರಂಭಿಕ ಹಂತವಾಗಿದೆ. ನಮ್ಮ ಆಂತರ್ಯದಲ್ಲಿ ನೆಲೆಸಿದ ನಮ್ಮ ಸ್ವಯಂ–ಅಸ್ತಿತ್ವದ ಪ್ರಜ್ಞೆಯೇ ನಮ್ಮ ಆಧ್ಯಾತ್ಮಿಕ ಜ್ಞಾನವಾಗಿ ಪ್ರತಿಫಲಿಸುತ್ತಿರುತ್ತದೆ. ನಮ್ಮ ಸರ್ವ ಜ್ಞಾನಗಳೂ ನಮ್ಮ ಪ್ರಜ್ಞೆಯನ್ನು ರೂಪಿಸುವಂತಿರಬೇಕು. ಇಲ್ಲದೇ ಹೋದರೆ ನಮ್ಮ ಜ್ಞಾನದ ಕೊರತೆಯು ಪ್ರಜ್ಞೆಯ ಬೆಳವಣಿಗೆಯನ್ನೇ ಮರೆತು ಮುಂದೋಡುತ್ತದೆ. ಮತ್ತು ತನ್ನ ಅಜ್ಞಾನದ ಮೂಲದೆಡೆಗೆ ಮರಳಲು ಪ್ರಯತ್ನಿಸುತ್ತದೆ. ಆದರೆ ನಾವು ಆ ಅಜ್ಞಾನದ ಮೂಲದಿಂದ ಕೊಡವಿಕೊಂಡೆದ್ದು ಜ್ಞಾನದ ಉತ್ತುಂಗ ಶಿಖರದೆಡೆಗೆ ಮೊಗಮಾಡಿ ಮೇಲೇರಿ ನಡೆಯಬೇಕಿದೆ. ಅದು ನಮ್ಮನ್ನು ಪ್ರಜ್ಞೆಯ ಆಗರದೆಡೆಗೆ ಕೊಂಡೊಯ್ಯುತ್ತದೆ.

ಇದನ್ನು ಸಾಧಿಸುವುದು ಕಷ್ಟವೇನಲ್ಲ. ಏಕೆಂದರೆ, ನಮ್ಮೊಳಗಿರುವ ಪ್ರಜ್ಞೆಯು ಎಲ್ಲದರ ಅಸ್ತಿತ್ವದ ಬಲವನ್ನು ಹೊತ್ತಿರುತ್ತದೆ. ನಾವು ಅದನ್ನು ಜಾಗೃತವಾಗಿಸಬೇಕಷ್ಟೇ. ಆ ಆಂತರ್ಯದಲ್ಲಿರುವ ಅಸ್ತಿತ್ವದ ಬಲವನ್ನು ಹೊರಗೆಡಹುವುದೇ ಪೂರ್ಣತೆಯ ಪ್ರತಿರೂಪವಾಗಿದೆ. ಅದನ್ನು ಸಾಧಿಸಿದ ನಂತರ ಆ ಅಸ್ತಿತ್ವದ ಬಲವು ಅವನ ಸ್ವಯಂ–ಶಕ್ತಿಯಾಗಿ ನಿಲ್ಲುತ್ತದೆ. ಒಂದು ವೇಳೆ ಅಸ್ತಿತ್ವದ ಬಲವನ್ನು ಪ್ರಯೋಗಿಸದೆ, ಅಥವಾ ಅರ್ಧಬಲ–ನಿಶ್ಶೇಷ ಬಲಗಳ ಮೂಲಕ ಸಾಧನೆಗೆ ತೊಡಗಿದಲ್ಲಿ ಅದು ಅಸ್ತಿತ್ವದ ವೈಕಲ್ಯಕ್ಕೆ ಅಥವಾ ಅಸ್ತಿತ್ವದ ಕ್ಷೀಣತೆಗೆ ಕಾರಣವಾಗುತ್ತದೆ. ಅಂತಹ ಅಸ್ತಿತ್ವವನು ತೋರಿಕೆಗೆ ಇದೆಯೆಂದು ಕಂಡುಬಂದರೂ ಅದು ಪೂರ್ಣತೆಯನ್ನು ಪ್ರತಿಬಿಂಬಿಸುವುದಿಲ್ಲ. ಅದು ಸಜೀವವಾಗಿ ನೆಲೆಸಿದ್ದರೂ ಅದರಲ್ಲಿ ಸ್ವಯಂಧಾರಣ ಶಕ್ತಿಯು ಇರುವುದಿಲ್ಲ. ಹಾಗಾಗಿ ಅದೊಂದು ಜಡ ಅಸ್ತಿತ್ವವಾಗಿ ಬಿದ್ದಲ್ಲೇ ಬಿದ್ದ ಮೆದ್ದ ಹಾವಿನಂತಾಗಿ ಒರಗಿರುತ್ತದೆ. ಅಂತಹ ಚಲನರಹಿತ ಅಸ್ತಿತ್ವಗಳನ್ನು ಕ್ರಿಯಾಶೀಲವಾಗಿ ಪರಿವರ್ತಿಸಬೇಕಾದರೆ, ಅದನ್ನು ಪೂರ್ಣತ್ವದೆಡೆಗೆ ಕೊಂಡೊಯ್ಯಬೇಕಾದರೆ ಸ್ವಯಂ–ಶಕ್ತಿಯ ಮೂಲಕ ಅದನ್ನು ಮೇಲೆತ್ತಬೇಕಾಗುತ್ತದೆ. ಈ ಕ್ರಿಯೆಯೇ ದಿವ್ಯ ಅಸ್ತಿತ್ವದ ಕಾರ್ಯರೂಪವಾಗಿದೆ. ಶಕ್ತಿಹೀನವಾದ ಚೇತನವು ಚೇತನವೇ ಅಲ್ಲ. ಹಾಗೂ ನಮ್ಮ ಅಸ್ತಿತ್ವದ ಆಂತರ್ಯದಲ್ಲಿ ಆಧ್ಯಾತ್ಮಿಕ ಪ್ರಜ್ಞೆಯೊಂದು ಸದಾ ಬೆಳಗುತ್ತಿರುವಂತೆ ನಮ್ಮ ಅಸ್ತಿತ್ವದ ಬಲವೂ ಸಹ ಅಲ್ಲಿಯೇ ಸುಪ್ತವಾಗಿರುತ್ತದೆ. ಅದು ತಾನೇ ತಾನಾಗಿ ಹೊರಬರಬೇಕು, ತನ್ನ ಅಸ್ತಿತ್ವವನ್ನು ತಾನೇ

ರೂಪಿಸಿಕೊಳ್ಳಬೇಕು. ಅದು ಯಾವ ದ್ರವ್ಯವನ್ನು ಬಳಸಿಕೊಂಡು ಪ್ರವೃದ್ಧಮಾನಕ್ಕೆ ಬರಲು ಪ್ರಯತ್ನಿಸುತ್ತದೆಯೋ ಆ ದ್ರವ್ಯವು ಅದರದೇ ಅವಿಭಾಜ್ಯ ಅಂಗವಾಗಿರಬೇಕು. ಅದು ತನ್ನ ಮೂಲವನ್ನೇ ಬಳಸಿಕೊಂಡು ತನ್ನ ಅಸ್ತಿತ್ವವನ್ನು ವ್ಯಕ್ತಪಡಿಸಬೇಕು. ಚೇತನವು ಪ್ರಜ್ಞಾಪೂರಕವಾಗಿ ಕೈಗೊಳ್ಳುವ ಇಚ್ಛೆಗಳು ಆ ಅಸ್ತಿತ್ವವನ್ನು ಸಾಮರಸ್ಯದ ರೂಪವಾಗಿ ನಿರ್ಮಿಸಲು ಶಕ್ಯವಾಗಿರುತ್ತವೆ. ಆ ಸಾಧನೆಗೆ ಚೇತನ ಕಾರಣವೇ ಹೊರತು ಕ್ರಿಯೆಯಾಗಲೀ ಕ್ರಿಯೆಯ ಹಿಂದಿರುವ ಶಕ್ತಿಯಾಗಲೀ ಅಲ್ಲ. ಇಲ್ಲಿ ಕ್ರಿಯೆಯೇ ಸರ್ವಶಕ್ತವಲ್ಲ. ನ್ಯೂನ್ಯತೆಯಿಂದ ಮೇಲೇಳುವ ಅಸ್ತಿತ್ವವು ಪೂರ್ಣದ ಹಂತಕ್ಕೆ ಏರಲು ಈ ಚೇತನವೇ ಕಾರಣವಾಗಿರುತ್ತದೆ.

ಕೊನೆಯದಾಗಿ ಪೂರ್ಣತೆಯನ್ನು ಅನುಭವಿಸುವುದು ಎಂದರೆ ಪೂರ್ಣಾನಂದವನ್ನು ಹೊಂದುವುದೇ ಆಗಿದೆ. ಆನಂದವಿಲ್ಲದ ಬದುಕು ಜಡತ್ವದ ಪ್ರತಿನಿಧಿಯಾಗಿರುತ್ತದೆ. ಇದು ಅಸ್ತಿತ್ವವೊಂದನ್ನು ತೋರಿಸುತ್ತದೆಯೇ ಹೊರತು ಪೂರ್ಣತ್ವವನ್ನು ಶೋಭಿಸುವದಿಲ್ಲ. ನಾವು ಅನುಭವಿಸುವ ಆನಂದವೂ ಸಹ ನಮ್ಮ ಆಂತರ್ಯದಿಂದಲೇ ಎದ್ದು ಬಂದ ಸ್ವಾವಲಂಬಿಯಾದ–ಸ್ವಯಂಚಾಲಿತವಾದ ತತ್ತ್ವವಾಗಿರಬೇಕು. ಅದನ್ನು ಬಾಹ್ಯದ ದ್ರವ್ಯಗಳಿಂದ ಕೃತಕವಾಗಿ ಸೃಷ್ಟಿಸಲು ಸಾಧ್ಯವಿಲ್ಲ. ಅದು ತನ್ನ ಪ್ರಭಾವವನ್ನು ಬೀರಿದ ವಲಯವನ್ನೆಲ್ಲ ತನ್ನ ಪರಿಧಿಗೆ ಸೇರಿಸಿಕೊಳ್ಳುತ್ತಾ ಸಾಗುತ್ತದೆ. ಮರ್ತ್ಯವನ್ನು ಆಳುತ್ತಿರುವ ನೋವು–ದುಃಖ–ಸಂಕಟಗಳೆಲ್ಲವೂ ಅಪೂರ್ಣತೆಯನ್ನು ಪ್ರತಿಬಿಂಬಿಸಿದರೆ ಆನಂದವು ಮಾತ್ರ ಪೂರ್ಣತ್ವವನ್ನೇ ಸಾಧಿಸುತ್ತದೆ. ಆನಂದವು ಅಸ್ತಿತ್ವದಲ್ಲಿರುವ ಪ್ರಜ್ಞಾ ಕೊರತೆಯನ್ನು, ಶಕ್ತಿಯ ಕೊರತೆಯನ್ನು, ವಾಸ್ತವ್ಯದ ಕೊರತೆಯನ್ನು ನೀಗಿಸಿ ಪ್ರಜ್ಞೆಯಲ್ಲಿ, ಶಕ್ತಿಯಲ್ಲಿ, ವಾಸ್ತವ್ಯದಲ್ಲಿ ಪೂರ್ಣತ್ವವನ್ನು ತುಂಬಿಹರಿಸುತ್ತದೆ. ಅದುವೇ ದಿವ್ಯ ಜೀವನದ ಹಂತವಾಗಿದೆ.

ನಾವು ಪೂರ್ಣತೆಯನ್ನು ಗಳಿಸಿ ಆ ಮೂಲಕ ವೈಶ್ವೀಕ ತತ್ವಕ್ಕೆ ಸಮೀಪಿಸಬೇಕಾದರೆ ನಾವು ನಮ್ಮ ಸುತ್ತ ಹಾಕಿಕೊಂಡ ಅತಿ ಸಣ್ಣತನದ ಅಹಮಿಕೆಯ ನಿರ್ಬಂಧಿತ ಪರಿಧಿಯನ್ನು ಮೀರಿ ಬೆಳೆಯಬೇಕು. ಏಕೆಂದರೆ, ಅದು ಅಪೂರ್ಣವಾದ ಅಸ್ತಿತ್ವವಾಗಿದೆ. ಒಂದು ವೇಳೆ ನಾವು ಆ ವಲಯದಿಂದ ಬೇರಾಗಿ ಮುಂದುವರಿಯದೇ ಇದ್ದಲ್ಲಿ ಅದು ನಮ್ಮನ್ನು ಅಪೂರ್ಣ ಪ್ರಜ್ಞೆ, ಅಪೂರ್ಣ ಶಕ್ತಿ ಮತ್ತು ಆನಂದರಹಿತವಾದ ವಾಸ್ತವ್ಯದಲ್ಲಿಯೇ ನಮ್ಮನ್ನು ಬಂಧಿಸಿಡಲು

ಪ್ರಯತ್ನಿಸುತ್ತದೆ. ಅದು ಯಾವಾಗಲೂ ನಮ್ಮನ್ನು ಅಧಃಪತನದೆಡೆಗೆ ನೂಕುತ್ತಾ ದೌರ್ಬಲ್ಯ, ಸಂಕಟ ಮತ್ತು ಅನಿವಾರ್ಯವಾದ ಅಧೀನತೆಯಲ್ಲಿಯೇ ಕೊಳೆಯುವಂತೆ ಗೈಯುತ್ತದೆ. ಅಥವಾ ಪ್ರಕೃತಿದತ್ತವಾದ ದಿವ್ಯತೆಯ ಅಂಶಗಳ ಪ್ರಭಾವದಿಂದ ಇಂತಹ ಸಂದಿಗ್ಧಗಳನ್ನು ದೂರವಿಡಬಹುದಾದರೂ ಅದು ಅಸ್ತಿತ್ವವನ್ನು ಸೀಮಿತ ವ್ಯಾಪ್ತಿಯ ಪ್ರಜ್ಞೆ–ಶಕ್ತಿ–ಆನಂದಗಳ ಚೌಕಟ್ಟಿನಲ್ಲಿಯೇ ಬದುಕುವಂತೆ ಒತ್ತಾಯಿಸಿರುತ್ತದೆ. ಇಲ್ಲಿ ಪೂರ್ಣತೆಯನ್ನು ಅನುಭವಿಸುವುದೆಂದರೆ ತಾನು ಎಲ್ಲರೊಳಗೊಂದಾಗಿ, ಎಲ್ಲವೂ ತನ್ನೊಳಗೊಂದಾಗಿ, ಸರ್ವ ಪ್ರಜ್ಞೆಗಳೂ ತನ್ನ ಪ್ರಜ್ಞೆಯೊಳಗೆ ಇಳಿದು, ತನ್ನ ಪ್ರಜ್ಞೆಯು ಸರ್ವರ ಪ್ರಜ್ಞೆಯೊಡನೆ ಬೆರೆತು ಕೊನೆಗೊಮ್ಮೆ ದಿವ್ಯಪ್ರಜ್ಞೆಯೊಡನೆ–ದಿವ್ಯಶಕ್ತಿಯೊಡನೆ–ದಿವ್ಯಾನಂದದೊಡನೆ ಏಕತೆಯನ್ನು ಹೊಂದುವುದೇ ಆಗಿದೆ. ಅದನ್ನು ಸಾಧಿಸಿದ ನಂತರ ಸರ್ವ ಕಾರ್ಯಗಳೂ, ಸರ್ವಾನುಭವಗಳೂ ತನ್ನದೇ ಎಂಬ ಭಾವನೆಯು ಮೂಡುತ್ತದೆ. ಬೇರೊಬ್ಬರು ಸುಖ–ದುಃಖಗಳಿಗೆ, ಅಳುವು–ಆನಂದಗಳಿಗೆ ಸ್ಪಂದಿಸುವ ಮನವು ನಮ್ಮದಾಗುತ್ತದೆ.

ಆದರೆ ಹೀಗೆ ವೈಶ್ವೀಕವಾಗಿ ಪೂರ್ಣತೆಯನ್ನು ಗಳಿಸಿ ಸಾರ್ವತ್ರಿಕ ಸ್ವಾತಂತ್ರ್ಯವನ್ನು ಹೊಂದಬೇಕಾದರೆ, ಆ ವ್ಯಕ್ತಿಯು ಓರ್ವ ದಾರ್ಶನೀಕನೋ ಅಥವಾ ಓರ್ವ ಅತೀಂದ್ರಿಯ ಪುರುಷನೋ ಆಗಿರಬೇಕು. ಆಗ ಮಾತ್ರ ಅವನ ಅಸ್ತಿತ್ವದಲ್ಲಿ ಚಿರಂತನವಾದ ಆಧ್ಯಾತ್ಮಿಕ ಪೂರ್ಣತೆಯು ನೆಲೆಸುತ್ತದೆ. ಹಾಗೂ ಕಾಲಾತೀತವಾದ ಅಸ್ತಿತ್ವದ ಪ್ರಜ್ಞೆಯನ್ನು ಹೊಂದಿಲ್ಲದ ಕೇವಲ ತಾನು ಧರಿಸಿದ ದೇಹ–ಪ್ರಾಣ–ಮನಗಳ ಚಕ್ರ ಭ್ರಮಣೆಯಲ್ಲಿ ಮಾತ್ರ ತಿರುಗುತ್ತ ಅದನ್ನೇ ನೆಚ್ಚಿಕೊಂಡು, ಈ ಪ್ರಪಂಚದ ವಸ್ತುಸ್ಥಿತಿಯ ಮೇಲೆ ಅವಲಂಬಿತವಾಗಿ ಅದು ಹೇಗೆ ಸಾಗುತ್ತದೆಯೋ ಅದರಂತೆಯೇ ನಡೆಯೋಣವೆಂದು ತಾಟಸ್ಥ್ಯ ನೀತಿಯನ್ನು ಅನುಸರಿಸಿದ ಮರ್ತ್ಯನು ಎಂದೂ ತನ್ನ ಸ್ವಯಂ ವಾಸ್ತವವನ್ನು ಬಳಸಿ ಮೇಲೇರಲು ಪ್ರಯತ್ನಿಸುವದಿಲ್ಲ. ಇದರಿಂದ ಅವನ ಅಸ್ತಿತ್ವದಲ್ಲಿ ಆಧ್ಯಾತ್ಮಿಕ ಪೂರ್ಣತೆಯು ಬಂದು ನೆಲೆಸುವದಿಲ್ಲ. ಅವನು ಕೇವಲ ಸ್ಥೂಲ ನೆಲೆಯ ಭೌತಿಕ ಬದುಕಿಗೆ ಮಾತ್ರ ಅಂಟಿಕೊಂಡು ದಿನದಿನದ ಆಸೆ, ನೋವು, ಸಂಕಟ, ಅವನತಿಗಳಲ್ಲೇ ಜೀವನ ಸವೆಸುತ್ತಾ ಸಾಗುತ್ತಾನೆ. ನಮ್ಮ ಪ್ರಜ್ಞೆಯ ನೆಲೆಗೆ ದೇಹವೊಂದು ಧಾರಣವಷ್ಟೆ. ಹಾಗೆಂದು ನಾವು ಪ್ರಜ್ಞೆಯನ್ನು ಸದಾ ಆ ದೇಹದಲ್ಲೇ ಬಂಧಿಸಿಡಲು

ಪ್ರಯತ್ನಿಸಬಾರದು. ಎಲ್ಲ ಸೀಮೆಗಳನ್ನು ದಾಟಿ ಆತ್ಮದ ಸುತ್ತ ಕಟ್ಟಿರುವ ಬಾಹ್ಯ ರಚನೆಯೆಡೆ ಮುನ್ನುಗ್ಗಬೇಕು, ಅದುವೇ ದಿವ್ಯ ಜೀವನದ **ಪ್ರಥಮ ಹಂತವಾಗಿದೆ.** ಅಲ್ಲಿಯವರೆಗೂ ಅಜ್ಞಾನ ಮತ್ತು ನಿರ್ಬಂಧಿತ ಪ್ರಜ್ಞೆಯ ಆಗರವಾಗಿದ್ದ ಮನಸ್ಸನ್ನೇ ನಮ್ಮ ಉನ್ನತಿಗೆ ಸಾಧನವಾಗಿ ಬಳಸಬೇಕು. ಇದು **ಎರಡನೆಯ ಹಂತವಾಗಿದೆ.** ಪ್ರಾಣದ ನಿಯಂತ್ರಣದಲ್ಲಿ ನಾವು ಬದುಕದೆ. ಆ ಪ್ರಾಣವನ್ನೇ ನಮ್ಮ ನಿಯಂತ್ರಣ–ದಲ್ಲಿಟ್ಟುಕೊಂಡು ಸಿದ್ಧಿಸುವ ಸಾಧನೆಯೇ **ಮೂರನೆ ಹಂತವಾಗಿದೆ.** ಪ್ರಜ್ಞೆಯು ಅನ್ನಮಯದ ಶರೀರವನ್ನು ಮೀರದಿದ್ದರೆ, ಕೇವಲ ತನ್ನ ಭೌತಿಕ ಅಸ್ತಿತ್ವದಲ್ಲಿಯೇ ಬದುಕ ಸಾಗಿಸುತ್ತಿದ್ದರೆ ಆ ಪ್ರಜ್ಞೆಯು ಪೂರ್ಣತ್ವವನ್ನು ಗಳಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಹಾಗೂ ಆ ಪ್ರಜ್ಞೆಯು ಸ್ವಯಂ ಕಟ್ಟಳೆಯ ನಿರ್ಬಂಧವನ್ನು ಮೀರದಿದ್ದರೆ, ಇರುವುದನ್ನು ಇರುವಂತೆಯೇ ಸ್ವೀಕರಿಸುವ ಮನೋಭಾವನೆಯಲ್ಲಿ ನಡೆಯುತ್ತಿದ್ದರೆ ದಿವ್ಯ ಜೀವನದ ಅವತರಣವು ಸಾಧ್ಯವಾಗುವದಿಲ್ಲ. ಓರ್ವ ವ್ಯಕ್ತಿಯು ತನ್ನ ವೈಯಕ್ತಿಕ ಮಾನಸದ ಮಿತಿಗಳನ್ನು ದಾಟದಿದ್ದರೆ, ವೈಶ್ವಿಕ ಮನದೊಡನೆ ತನ್ನ ಮನವನ್ನು ಏಕತೆಗೊಳಿಸದಿದ್ದರೆ, ಮತ್ತು ಅದರ ಪ್ರಜ್ಞೆಯ ಸಮಗ್ರತೆಯನ್ನು ಅನುಭವಿಸಿ ಆನಂದಿಸದೇ ಇದ್ದರೆ ಆತ ಸಂಪೂರ್ಣ ಪ್ರಜ್ಞಾಪೂರ್ವಕವಾದ ಅಸ್ತಿತ್ವವನ್ನು ಹೊಂದಲು ಸಾಧ್ಯವಿಲ್ಲ. ಹಾಗಾಗಿ ನಾವೆಲ್ಲರೂ ನಮ್ಮ ಸ್ವಂತದ ಸೂತ್ರವನ್ನಷ್ಟೇ ಅಲ್ಲದೇ ಬ್ರಹ್ಮಾಂಡದ ಸೂತ್ರವನ್ನೇ ಮೀರಬೇಕು. ಇದರಿಂದ ಪ್ರತಿಯೋರ್ವರೂ ಈ ವೈಶ್ವಿಕ ಅಸ್ತಿತ್ವದ ಮುಂದೆ ತಮ್ಮ ಅಸ್ತಿತ್ವವನ್ನು, ಅದಕ್ಕಿರುವ ಪರಿಪೂರ್ಣವಾದ ಸಾಮರಸ್ಯದ ನಿಲುವನ್ನು ಕಂಡುಕೊಳ್ಳಬಹುದು. ವೈಯಕ್ತಿಕ ಪ್ರಜ್ಞೆಯು ವೈಶ್ವಿಕ ಪ್ರಜ್ಞೆಯೊಂದಿಗೆ ಏಕತೆಯನ್ನು ಬೆಸೆಯಲು ಇದು ಬಹು ಮುಖ್ಯವಾದ ಅಂಶವಾಗಿದೆ. ಇಲ್ಲದೆ ಹೋದರೆ ವ್ಯಕ್ತಿಯು ವಿಶ್ವದ ನಿಯತಿಯಂತೆಯೇ ಬದುಕ ಸಾಗಿಸುತ್ತಾನೆ. ಇದು ನಿರ್ಬಂಧಿತ ಮಿತಿಯೊಳಗೆ ಅವನನ್ನು ತೆವಳುವಂತೆ ಮಾಡುತ್ತದೆ. ಕೊನೆಗೊಮ್ಮೆ ಅವನಲ್ಲಿರುವ ಆಧ್ಯಾತ್ಮಿಕ ಸ್ವಾತಂತ್ರ್ಯವನ್ನೇ ಪೂರ್ಣ ರೂಪದಲ್ಲಿ ನಾಶಮಾಡಿಬಿಡುತ್ತದೆ. ಹಾಗಾಗಿ ಅವನು ಅತ್ಯುನ್ನತವಾದ ದಿವ್ಯ ವಾಸ್ತವ್ಯದೆಡೆಗೆ ತೆರಳಬೇಕು. ಅದರೊಡನೆ ಏಕತೆಯನ್ನು ಅನುಭವಿಸಬೇಕು. ಅದರೊಳಗೆ ಶಾಶ್ವತವಾಗಿ ನೆಲೆಸಬೇಕು. ಅಲ್ಲಿ ಅವನ ದೇಹ–ಪ್ರಾಣ–ಮನಗಳು ಪ್ರಕಾಶದ ಪುಂಜದಲಿ ತೊಳೆದಿಟ್ಟ ಮುತ್ತಿನಂತಾಗಬೇಕು. ಆಗ ಅವನ ಆಲೋಚನೆ–ಭಾವನೆ–ಕಾರ್ಯಗಳೆಲ್ಲವೂ ದಿವ್ಯತೆಯನ್ನು ಹೊತ್ತು ಅವನಿಂದ ನಡೆಯುತ್ತವೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 21/1059–63**

ಒಂದು ವೇಳೆ ಈ ಭೌತಿಕ ಪ್ರಕೃತಿಯಲ್ಲಿ ಒಂದು ವಿಕಸನವಾದರೆ, ಅದು ಪ್ರಜ್ಞೆ ಮತ್ತು ಜೀವನದ ವಿಕಸನದಲ್ಲಿ ನೇರವಾಗಿ ಪ್ರಭಾವ ಬೀರಿದ್ದೇ ಆದಲ್ಲಿ ಅದು ಪೂರ್ಣ ಪ್ರಜ್ಞೆಯನ್ನು ಪೂರ್ಣ ಜೀವನವನ್ನು ದೊರಕಿಸಿಕೊಡುವಲ್ಲಿ ಸಕ್ಷಮವಾಗುತ್ತದೆ. ಕೇವಲ ನಿಯತಿಯ ಮಾರ್ಗದಲ್ಲೇ ಸಾಗಹೋದರೆ ಈ ಗೆಲುವು ದೂರವಾಗುತ್ತಾ ಸಾಗುತ್ತದೆ. ಅಥವಾ ನಮ್ಮ ಅವಿವೇಕತನದಿಂದ ನಮ್ಮ ಆತ್ಮವನ್ನು ಹಿಡಿದಿಟ್ಟುಕೊಳ್ಳದೇ ಪ್ರಜ್ಞೆಯೆಡೆಗೆ ಹರಿಯಬಿಟ್ಟದ್ದೇ ಆದಲ್ಲಿ ನಮ್ಮ ವಸ್ತುಸ್ಥಿತಿ, ಜೀವನ ಮತ್ತು ಅಸ್ತಿತ್ವದಲ್ಲಿ ಪ್ರಜ್ಞೆಯನ್ನೂ, ಸಂಪೂರ್ಣ ಸತ್ಯವನ್ನೂ ವಿಕಸನಗೊಳಿಸುತ್ತದೆ. ಮರ್ತ್ಯನು ತನ್ನ ಮೂಲದೆಡೆಗೆ ಹಿಂದಿರುಗಬೇಕಾದರೆ ಅದು ಅವನ ಅಧೋಗತಿಯಿಂದ ಅಲ್ಲದೆ ಅವನ ಆಧ್ಯಾತ್ಮಿಕ ಸಾಧನೆಯಿಂದಾಗಿರಬೇಕು. ಅಜ್ಞಾನದಲ್ಲಿ ನಮ್ಮ ಅಸ್ತಿತ್ವವು ಹತಾಶೆ, ನೋವು ಅಥವಾ ಅರ್ಧ ಗೆಲುವುಗಳೆಂಬ ಸಂದಿಗ್ಧಗಳಲ್ಲಿಯೇ ಸಿಲುಕಿರುತ್ತದೆ. ಹಾಗಾಗಿ ನಾವು ನಮ್ಮ ಆತ್ಮದ ಸ್ವಯಂ–ಶೋಧನಕ್ಕೆ ತೊಡಗಬೇಕಿದೆ. ಪ್ರಕೃತಿಯಲ್ಲಿನ ವೈಶ್ವಿಕ ಶಕ್ತಿ ಮತ್ತು ದಿವ್ಯತೆಯ ಸ್ವಾನುಭವದೆಡೆಗೆ ಅಲೌಕಿಕ ಯಾತ್ರೆ ಹೊರಡಬೇಕಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 21/1107 – ಶ್ರೀ ಅರವಿಂದರು**

# ಕಾವ್ಯ

**– ಪುಟ್ಟು ಕುಲಕರ್ಣಿ**

## ಪೂರ್ಣ ಯೋಗದ ಆಂತರ್ಯ

ಜೀವನವೇ ಯೋಗ
ಋತದ ಯೋಗದಲಿ ಸೃಷ್ಟಿ– ಜೀವನವು ತಾ ಕ್ಲಿಷ್ಟವಿದ್ದರೂನು
ಸಮತೆ ಸ್ಪಂದದಲಿ ಪೂರ್ಣಪಥದಲ್ಲಿ ಚಿರ ಗುರಿಯ ಹೊಂದಿ ತಾನು
ಸತತ ಯತ್ನದಲಿ ವಿಧದ ಸಲಿಲದಲಿ ರೂಪಗಳ ಪಡೆದು ಸಾಗಿ
ಭೂಮ ಭವ್ಯತೆಯ ದಿವ್ಯೋ ನೆಲೆಯೆಡೆಗೆ ನಿತ್ಯ ಸಮಸ್ಪಂದಿಯಾಗಿ 1

ಪರಿಪೂರ್ಣಗೊಳುವ ಮಿಡಿತದಲಿ ರೂಪ ರೂಪಗಳು ವಿಕಸಗೊಳುತ
ರಚನೆಯಲಿ ಖಚಿತ ವಿಕಸನದ ಗತಿಯು, ಪರಿಪೂರ್ಣಗೊಳುವ ತುಡಿತ
ದರ್ಶಗೊಂಡಿರುವ ಶಕ್ತಿ ಪ್ರಕಟನೆಯು ಘನನಿಬಿಡ ಸೂತ್ರ ಸತ್ಯ
ಅತಿಕಠಿಣದೊಳಗೆ ಪ್ರಕಟಗೊಳ್ಳುತಲಿ ತಾ ಶಕ್ತಿಗೊಂಡು ನಿತ್ಯ 2

ಕಾಲ ಸೂತ್ರದಲಿ ಲೀಲೆಗೊಳ್ಳುತಿರೆ ಖಿಲಗೊಳುತ ಸಕಲವೆಲ್ಲ
ತಮ್ಮಾತ್ಮ ಬಲವ ಜೊತೆ ತೇಜದೊಲವ ಕ್ಷೀಣತೆಗೆ ಸಿಲುಕಿ ಎಲ್ಲ,
ಗುಣದ ಶಕ್ತಿಯದು ನಿಶ್ಶಕ್ತಿಗೊಳುತ ಕರಗುತಿಹ ಹಂತದೊಳಗೆ
ಜೀವಕಳೆಯನ್ನು ಕಳೆಕಳೆದುಕೊಂಡು ನಿರ್ಜೀವ ಹಂತದೆಡೆಗೆ 3

ಘನನಿಬಿಡ ತಮದಿ ಜಡತೆಯೆಡೆ ನಡೆದು ನಿರ್ಜೀವಗೊಳುತ ಕರಗಿ
ಸರ್ವಸ್ವವೆಲ್ಲ ಸ್ಪಂದನವೆ ಇರದ ನಿರ್ಜಡದಿ ಸಾಗಿ ಹುದುಗಿ,
ಈ ಕುಸಿತವನ್ನು ತಡೆತಡೆಯಲೆಂದು ಆಗಮಿಸಿ ಆತ್ಮ–ಸಲಿಲ
ಸತತದಲಿ ಧಾರೆ ಧಾರೆಗೊಳ್ಳುತಲಿ ಅವತರಣದೊಳಗೆ ಲೀಲ 4

ಆವರ್ತದೊಳಗೆ ಆವರಣಗೊಳುವ ರೂಪಧಾರಣೆಯ ಸರಣಿ
ಸರಣಿಯಲಿ ಸಾಗಿ ಊರ್ಧ್ವಕೇರುವದೆ ಅಮರತ್ವದೆದೆಯ ವಾಣಿ,
ಜನನ–ಮರಣಗಳ ಮೈಲುಗಲ್ಲಿನಲಿ ಚಿರಯಾನ ಗಮ್ಯದೆಡೆಗೆ
ಭೂತ–ಭೌತಿಕದ ತತ್ತ್ವ ತಾನಿದುವು ಆಧಾರವಾಗಿ ಪ್ರಭೆಗೆ 5

ಈಗಿದೋ ನಮ್ಮ ಜೀವನವು ಪೂರ್ಣ ಯಾತನೆಯ ಘಾತದೊಳಗೆ
ಭವಭಾವದೊಳಗೆ ಬರಿ ಗೋಳು ಕಷ್ಟ–ನಷ್ಟಗಳ ಕೂಪದೊಳಗೆ,

ಜೀವನಕೆ ದಿವ್ಯ ಸ್ಪಂದನವ ತರುವ ಜೊತೆ ಭವ್ಯ ಭಾವವಿಡುತ
ಶಕ್ತಿಸಂಪನ್ನ ಚಿರದ ಫಲಿತವದು ಅನವರತ ಸ್ಪಂದಗೊಳುತ 6

ದಿವಭಾವದಲ್ಲಿ ಭವಿತವ್ಯ ತರುವ ಸರ್ವಾತ್ಮ ಸೂತ್ರ ತಾನು
ಘನಘೋರ ಅಗ್ನಿ ಜ್ವಾಲೆಯಲಿ ಸಿಲುಕಿ ತಲ್ಲಣದಿ ನೊಂದರೂನು,
ಪಾಕಗೊಳ್ಳುತಲಿ ಪರಿಪಕ್ವಗೊಳಲು ಅವಕಾಶ ಪಡೆದುಕೊಂಡು
ನವಜನ್ಮ ಪಡೆದು ಅನುಭೂತಿಯೊಳಗೆ ಭವ ಬದುಕ ಬೆಳಗಲೆಂದು 7

ಅದಕಾಗಿ ಇಂತು ಕಮ್ಮಟದಿ ಸತತ ಕುದಿಕುದಿವ ಹಂತದೊಳಗೆ
ತಂತಾನೆ ತಾನು ಮೂಸೆಯಂತಾಗಿ ಕುದಿಯಲೆನೆ ಒಳಗೆ ಒಳಗೆ
ಆಂತರ್ಯಕಿಳಿದ ಸರ್ವಸ್ವವೆಲ್ಲ ಕರಗುತಲಿ ಏಕವಾಗಿ
ಒಂದರೊಳಗೊಂದು ಬಂಧ–ಸಂಬಂಧ ಸಹಜ ಹಾಸು–ಹೊಕ್ಕಾಗಿ 8

ಪರಮಾಗ್ನಿಯೊಳಗೆ ಪರಿಶುದ್ಧವಾಗಿ ಪರಿಪಕ್ವಗೊಂಡು ಹೊಮ್ಮಿ
ನವರೂಪ–ರೂಪ ರಚನೆಗಿದು ತಾನು ಘನ–ಮೂಲದ್ರವ್ಯ ಚಿಮ್ಮಿ
ನವ ನವೀನದಾ ಜೀವನವ ಪಡೆಯೆ ಸ್ವ–ರೂಪಾಂತರಣದೊಳಗೆ
ನಾವಿನ್ಯಪೂರ್ಣ ಜೀವನವ ಪಡೆಯೆ ನವಶಕ್ತಿ ಗಳಿಸಿ ಹೀಗೆ 9

ಸಾರ್ವಭೌಮತೆಯ ಸಾರ ಸರ್ವಸ್ವ ಸರಿಸರಿದು ಹೋಗುತಿಲ್ಲಿ
ಕಾಲ ಯಾನದಲಿ ಲೀಲೆಗೊಂಡಿದ್ದು ತಾ ಲೀನವಾಗುತಿಲ್ಲಿ,
ಹಲವು ಪಥಗಳಲಿ ಹಲವು ವಿಧಗಳಲಿ ಕೆಲಕೆಲವು ಪಂಥವಾಗಿ
ತನ್ನನ್ನೇ ತಾನು ವಿಧದ ರೂಪದಲಿ ಪ್ರತ್ಯಕ್ಷಗೊಳಿಸಿ ಸಾಗಿ, 10

ವೈಶಿಷ್ಟಪೂರ್ಣ ಮಾರ್ಗಗಳ ಕಟೆದು ಆಯಾಮಗಳಲಿ ಸಾಗಿ
ಈ ಮಾರ್ಗವೀಗ ತಾ ಬೀಜಕ್ಷೇತ್ರ ಭವಿತವ್ಯ ಬೆಳಕಿಗಾಗಿ
ಬರಲಿರುವ ಭವ್ಯ ಜೀವನಕೆ ತಾನು ಅವಿಭಾಜ್ಯ ಅಂಶವಾಗಿ
ಅದಕಾಗಿ ಗತವು ಶಿಶುವಾಗಿ ಮತ್ತೆ ಆಗಮಿಸಿ ಜನನವಾಗಿ. 11

ಬಲು ಗೂಢವಾಗಿ ಸಂಚಲನಗೊಂಡು ಇದುತನಕ ಬಂದರೂನು
ತನ್ನೆದೆಯ ಗುಹ್ಯದಾಂತರ್ಯವನ್ನು ಹೊರಗೆಡವದಂತೆ ತಾನು,
ತನ್ನಾತ್ಮ ಶಕ್ತಸಂಪನ್ನಪೂರ್ಣ ಸ್ಪಂದನದ ಛಂದದಲ್ಲಿ
ನಮಗಿದೋ ಲಭ್ಯ ಪ್ರಾಚೀನ ಕಾಲ ನವರೂಪು ಪಡೆದಿತಿಲ್ಲಿ. 12

ಈಗಿದೋ ತನ್ನ ಆ ಗುಹ್ಯವನ್ನ, ತಾ ತೊರೆದು ಹೊರಗೆ ಬಂದು
ನಾವಿನ್ಯಪೂರ್ಣ ಮಾನವನ ಭವ್ಯ ಭವಿತವ್ಯಕಾಗಿ ಇಂದು,
ತವಕದಲಿ ನಿತ್ಯ ಸ್ಪಂದನದಿ ಈಗ ಉಪಯುಕ್ತ ಅಂಶವಾಗೆ
ಶಕ್ತಿಸಂಪನ್ನ ಜೀವನದ ಗತಿಗೆ ತಾ ಮುಕ್ತ ದ್ವಾರವಾಗೆ 13

ಅದಕಾಗಿ ಈಗ ತನ್ನನ್ನು ತಾನು ಅರಿಯಲೆನೆ ಶೀಘ್ರದೊಳಗೆ
ಪ್ರಕೃತಿಗಿದು ನಿತ್ಯ ಶಾಶ್ವತದ ಸತ್ಯ ಇದು ಪರಮ ಕೃಪೆಯ ಕೊಡುಗೆ
ವಿಶ್ವಕಾದರ್ಶತತ್ತ್ವವದು ತನ್ನ ಸತ್ವವಾಗಿರಲು ಹೃದಯ
ವಿಕಸನದ ಪಥದಿ ಮನುಕುಲಕೆ ಇದುವು ಅನಿವಾರ್ಯವಿರುವ ವಿಷಯ 14

ದರ್ಶಗೊಳ್ಳಲು ಬೇಕು ಬಾಹ್ಯದಲಿ ಇದುವು ಅನುಭಾವ ಪಥಕೆ ಸತತ
ಆತ್ಮಸ್ಪಂದದಲಿ ಪ್ರಕಟಗೊಳ್ಳಲಿಹ ತನ್ನದೇ ಮೂಲ ಮಿಡಿತ,
ತಾದಾತ್ಮ್ಯದಲ್ಲಿ ಪ್ರಗತಿಯನು ಪಡೆದು ಸಮತೆಯನು ಮಿಗಿಲುಗೊಳಿಸೆ
ಸಾಧಿಸುವ ಕರ್ಮಪಥವೀಗ ಲೀಲೆಗೊಳ್ಳಲೆನೆ ಗಮನವಿರಿಸೆ 15

ಇಂತಿರಲು ಶಕ್ತ ತಾನೀಗ ಯುಕ್ತ ಸಾಮರ್ಥ್ಯಪೂರ್ಣವಾಗಿ
ಸುಸಂಬದ್ಧದಲಿ ಸೃಷ್ಟಿಗೊಳ್ಳುತಿಹ ನವನವೋನ್ಮೇಷವಾಗಿ
ಅತಿ ಸರಳವಾಗಿ ನವ ಸೃಷ್ಟಿಯಲ್ಲಿ ಗತಿಗಮನ ಪಡೆದುಕೊಂಡು
ಅನಂತಾನಂತ ಶಕ್ತಸಂಪನ್ನ ಪರಿಪೂರ್ಣ ತಾನದಿಂದು 16

ಈಗಿದೋ ಲೀಲೆಗೊಳ್ಳುತಿರೆ ಇಂತು ಮನುಕುಲವ ಊರ್ಧ್ವಗೊಳಿಸೆ
ಅವನಂತರಂಗದಲಿ ಆಳಕಿಳಿದು ಅದ ಸತತ ಬೆಳಗುಗೊಳಿಸೆ
ಮಾನವನ ಬದುಕ ಜೊತೆಗವನ ಭವ್ಯದಸ್ಮಿತೆಯ ದಿವ್ಯಗೊಳಿಸಿ
ಔನ್ನತ್ಯಪೂರ್ಣ ಶೃಂಗದುತ್ತುಂಗ ತಾಣದಲಿ ನೆಲೆಯನಿರಿಸಿ. 17

**– ಪುಟ್ಟು ಕುಲಕರ್ಣಿ (2023)**

**ಆಧಾರ: ಶ್ರೀ ಅರವಿಂದರ ‘Synthesis of Yoga’**

## ಆಗರ್ಭ–ಬ್ರಹ್ಮ–ಬ್ರಹ್ಮಾಂಡದುದಯ ಗರ್ಭಿಣಿಯ ಗರ್ಭವಾಗ

ದಿವ್ಯಸುಪ್ತಿಯಲಿ ಇರುವ ದೈವವದು ಸಾವಿರದ–ಚಕ್ಷು ತೆರೆದು
ದೃಷ್ಟಿಪಾತದಲಿ ಸೃಷ್ಟಿ ಬೆಳಗಲೆನೆ ಅನಿಮೇಷ ಸತತವಿಹುದು
ಅವನೀಗ ದರ್ಶ ಆಕಾರವಡದ ಚಿಂತನದ ಮೂಲ–ಬಿಂದು
ಆತ್ಮಕಾವರಣವಾಗಿರದ ಸ್ಥಿತಿಯ ಆಕಾರಗಳಲಿ ನಿಂದು

ಸರ್ವವನು ಬಲ್ಲ ಶಬಲತೆಯ ಮೊತ್ತ ಮಹತ್–ತತ್ತ್ವದಲಿ ಸಾಗಿ
ಲೋಕ ಸೃಜಿಸಲೆನೆ ಬುದ್ಧಿಯಲಿ ಬಂದ ಸಂಗತಿಯ ಸಂಗವಾಗಿ
ಚಿನ್ಮಯದ ಅರಿವು ಒಡಮೂಡಿ ತಾನು ಪಡಿಮೂಡಲೆಂದು ಆಗ
ಆಗರ್ಭ–ಬ್ರಹ್ಮ–ಬ್ರಹ್ಮಾಂಡದುದಯ ಗರ್ಭಿಣಿಯ ಗರ್ಭವಾಗ

ಈ ಮಾಯೆ ಮಾಯೆಯಾಟದಲಿ ಇರುವ ಹೂಟಗಳ ಅಂತರಾಳ
ಮನವೀಗ ಸತತ ಸಾಹಸದಿ ಮಿಡಿದು ಆಂತರ್ಯ ಅರಿವ ತಾಳ
ಜೀವ–ಚೈತನ್ಯ ಅಂಕುರಿಸಿಕೊಂಡು ಉತ್ಕ್ರಾಂತಿ–ನಿಯತಿ–ಮೂಲ
ಚಿನ್ಯದ ಶೀಶುವು ಗರ್ಭದಲಿ ಬೆಳೆದು ಉದಿಸಲೆನೆ ನಿಗದಿ ಕಾಲ.

ಚಿಂತನದ ಸಲಿಲ ಚಿನ್ಮಯದ ಧಾರೆ ಬೆಳಗುತ್ತ ಸಾಗುತಿರಲು
ಶುಭ್ರಾತಿಶುಭ್ರ ನಿರ್ಮಾಯ ಶೂನ್ಯ ದಿವ್ಯಾನುಭವದ ಸಾಲು,
ಅದರ ಪ್ರಭೆಯಲ್ಲಿ ಭರತದುತ್ಸಾಹ ಗಗನಕ್ಕೆ ಜಿಗಿವ ಪುಟಿತ
ಆತ್ಮದಾ ನಿತ್ಯ ಪ್ರತಿಮೆಗಳನಲ್ಲಿ ವ್ಯಾಖ್ಯಾನಗೊಳಿಸೆ ಸತತ

ಬಯಲಿನೊಡಲಲ್ಲಿ ಬಯಲಾಗಿ ಇದ್ದ ನಿರ್ವಯಲ ಪಥ್ಯ ಕಂಡು
ಅವನೀಗ ಅದರ ಆಂತರ್ಯವರಿತ ಆತ್ಮಸ್ಥಗೊಳಿಸಿಕೊಂಡು
ಆ ಗೂಢ ಒಗಟು ತಂತಾನೆ ತೆರೆದು ತೆರೆತೆರೆಯ ಸಾಲುಗಳಲಿ
ವಿಸ್ತಾರ ಪೂರ ಬೆಳಕಿನಾ ಸಾರ ನೆಲ–ಮುಗಿಲು ತುಂಬಿತಲ್ಲಿ

**– ಪುಟ್ಟು ಕುಲಕರ್ಣಿ**

**(ಸಾವಿತ್ರಿ; ದಳ 1 ರೇಣು 5 ಪುಟ 76)**

---

**ಟಿಪ್ಪಣಿ:**

Matter Pregnant; ಐತರೇಯ ಉಪನಿಷತ್ತು ಇದನ್ನು “ಈಕ್ಷಿತ ಲೋಕಾನ್ನು ಸೃಜ” ಎಂದು ಹೇಳುತ್ತಿದೆ. ಅಂದರೆ ಭಗವಂತನು ಲೋಕಗಳನ್ನು ಸೃಷ್ಟಿ

ಮಾಡಬೇಕೆಂದು ಬುದ್ಧಿಯಲ್ಲಿ ವಿಚಾರ ಮಾಡಿದನು. ಆಗಲೇ ಜಗತ್ತಿನ ಗರ್ಭಧಾರಣೆಯಾಯಿತು. ಆದ್ದರಿಂದ ಮಹತ್ತತ್ತ್ವ ಎನ್ನುವ ಬುದ್ಧಿಗೆ ಗರ್ಭಿಣೀ ಎಂದು ಹೋಲಿಕೆ ಇದೆ. ಅದೇ ರೀತಿಯಲ್ಲಿ, ಭಗವದ್ಗೀತೆಯೂ 'ಮಮಯೋನಿರ್ಮಹದ್ಬ್ರಹ್ಮ ತಸ್ಮಿನ್ ಗರ್ಭಂ ದದಾಮ್ಯಹಂ' (14.3) – [ಅಲ್ಲಿ ನಾನು ಜಗತ್ತಿನ ಬೀಜವನ್ನಿಡುವ ಸ್ಥಾನವು ಎಲ್ಲಕ್ಕಿಂತ ದೊಡ್ಡದಾದ ಮಾಯಾಶಕ್ತಿ ಇದೆ. ಇದರಲ್ಲಿಯೇ ನಾನು ಬೀಜವನ್ನು ಇಡುತ್ತೇನೆ. ಇಲ್ಲಿಂದಲೇ ಎಲ್ಲ ವಸ್ತುಗಳೂ ಜನಿಸುತ್ತವೆ] ವಿವರಿಸುತ್ತಿದೆ. ಮಹತ್ವಕ್ಕೆ ಗರ್ಭಿಣೀ ಎಂದು ಹೆಸರಿದೆ.

## ಮಂತ್ರ–ಮಾಯಕದ ರಹಸ್ಯೋದ್ಘಾಟ ಶ್ರುತಿಬದ್ಧಗೊಂಡು ರೂಪ

ಬಲು ಗೂಢ–ಗುಹ್ಯ–ಜೀವನದ ನೆಲೆಯ ಆ ಆದಿಮೂಲದೆಡೆಗೆ
ಪರಮ–ಪರಿಶುದ್ಧ ಇಂದ್ರಿಯಾತೀತ ತಾ ಭೂಮಕ್ಷೇತ್ರದೊಳಗೆ
ಈ ಅಲ್ಪಬಾಹ್ಯಸತ್ತೆಗಿದು ಕಲ್ಪ–ವ್ಯಾಪ್ತಿಯಾ ರಕ್ಷೆಯಾಗಿ
ಮೃಣ್ಮಯದ ಘನದ ಗೋಡೆಯಿಂದೀಗ ಇದು ತಾ ವಿಭಕ್ತವಾಗಿ

ಪೂರ್ಣದರ್ಶನದ ಸೃಷ್ಟಿ–ದೃಷ್ಟಿಯಲಿ ಸುಸ್ಪಷ್ಟಗೊಂಡಿತಿಲ್ಲಿ
ಸ್ಫಟಿಕಶುದ್ಧತೆಯ –ಪವನ–ಪಾವನದ ಮಾಯಕದ ರಂಗದಲ್ಲಿ
ಮಾಂಸ–ಮಜ್ಜೆಗಳ ಜೀವ–ಪ್ರಕೃತಿಯಲಿ ಎಂದಿಗೂ ಸ್ಪಂದಗೊಳದ
ಅದರೊಳಗೆ ಅವನು ಆಗಮಿಸಿ ಈಗ, ಅರಿಯಲೆನೆ ನಿತ್ಯ–ಬಂಧ

ದೀಪ್ತಿ ತಾನೊಂದು ಬೆಳಗುಗೊಳಿಸಿತ್ತು ಅಮೂರ್ತದಾ ರೂಹುಗಳನು
ವಿಸ್ಮಯಾದ್ಭುತದ ಅಧಿಕ್ರಮಣಶ್ರೇಣಿ ಉತ್ಕೃಷ್ಟ ಹಂತದೊಳಗೆ
ಸೂಕ್ಷ್ಮಾತಿಸೂಕ್ಷ್ಮ ಸೂಕ್ಷ್ಮಾಂಡ–ಜಡದ ದಿವ್ಯತೆಯ ಕಾಲಕರ್ಮ
ಉದಿತ ಈ ಭವ್ಯ ಭೂಮ ಸಾಮ್ರಾಜ್ಯ ವೈರಾಜ್ಯವಿದರ ಧರ್ಮ

ಪ್ರಾಣದುಂಬಿರುವ ವರ್ಣಮಾಲೆಗಳ ಆಕಾಶವೊಂದಕೀಗ
ಇದಕೆ ಪ್ರತಿಯಾಗಿ ಉಲ್ಲೇಖಗೊಂಡು ತಾನುದಿತಗೊಂಡಿತೀಗ
ಉಜ್ವಲದ–ದೀಪ್ತಿ ವೈಭವದ–ಬೋಧಿ ಆಚ್ಛಾದ ಛಂದದಿಂದ
ಪುಟಿಪುಟಿದು ಬೆಳೆದು ತಾ ಪ್ರಕಟಗೊಂಡು ಜೊತೆಗಿದೋ ಬಂಧದಿಂದ

ಮಂತ್ರ–ಮಾಯಕದ ರಹಸ್ಯೋದ್ಘಾಟ ಶ್ರುತಿಬದ್ಧಗೊಂಡು ರೂಪ
ದೀರ್ಘಗೊಳ್ಳುತಿದೆ ಅದರ ಸಮ್ಮುಖವು ಪ್ರತಿಬೋಧದಲ್ಲಿ ದೀಪ

ಮನಾಕರ್ಷಕದ –ರೂಪಗಳ ಲೋಕ ತಾನೊಂದು ಪ್ರೇಮವಾಗಿ
ನಮಗದುವು ಈಗ ಅತಿಸನಿಹದೊಳಗೆ ತಾ ನಿತ್ಯ ವಾಸಿಯಾಗಿ,
ಇಲ್ಲಿದೋ ಇದುವು ಅನಾವರಣದಲಿ ಸುಸ್ಪಷ್ಟವಾಗಿ ನಿಲಲು
ಬುವಿಯ–ದೃಷ್ಟಿಯದು ನಿರಾಕಾರವನು ಅನುಭೂತಿಗೊಳಿಸಿಕೊಳಲು

ಆಕಾರ ಸರ್ವ–ಸರ್ವಸ್ವವೆಲ್ಲ ಸೌಂದರ್ಯ ಸ್ವಯಂ–ಪೂರ್ಣ
ಜೊತೆಗಿದೋ ಸರ್ವ ವಸ್ತು–ವಿಯಗಳು ಸತ್ಯದಲಿ ಮಿನುಗಿ ವರ್ಣ,
ಪಾರದೀಪಕದ ಆ ದೀಪ್ತಿಕಾಂತಿ ವಾಯುಮಂಡಳವು ಈಗ
ಯೋಗಮಾಯೆಯಲಿ ಬೆಳಗುಗೊಂಡಲ್ಲಿ ಸುಸ್ಪಷ್ಟವಾಯಿೀತಾಗ

**– ಪುಟ್ಟು ಕುಲಕರ್ಣಿ**
**(ಸಾವಿತ್ರಿ; ದಳ 2 ರೇಣು 2 ಪುಟ 103)**

---

**ಟಿಪ್ಪಣಿ:**
ಜಾಗ್ರತಗೊಂಡ ಸರ್ವಸ್ವವೂ ಶಕ್ತಿಮಯವಾಗಿರುತ್ತದೆ. ಹೀಗಾಗಿ ಶಕ್ತಿಯು ಜಾಗ್ರತಿಯನ್ನು ರೂಪಿಸುತ್ತದೆ. ಚಿತ್ ಶಕ್ತಿಯಾಗಿರುವ ಹಂತದಲ್ಲಿ ಇದು ಕಾರ್ಯಪ್ರವೃತ್ತಗೊಳ್ಳುತ್ತದೆ. ಶಕ್ತಿಯು ತನ್ನಲ್ಲಿ ತಾನೇ Kenetic-Forceನ್ನು ರೂಪಾಂತರದ ಹಂತದಲ್ಲಿ ರೂಪಿಸಿಕೊಳ್ಳುತ್ತದೆ. ಇದನ್ನೇ ತಪಸ್ಸನ್ನಾಗಿಸಿ ಸರ್ವ ಕ್ರಿಯೆಗಳ ಆಧಾರವನ್ನಾಗಿಸಿಕೊಳ್ಳುತ್ತದೆ. ಅದಕ್ಕಾಗಿ, ಎಲ್ಲ ಶಕ್ತಿಯೂ ಚಿತ್ತಿನ ರೂಪವೇ ಆಗಿದ್ದು, ಆತ್ಮದಿಂದ, ಪ್ರಕಾಶದ ಮೂಲಕವೇ ಪ್ರಕಟಗೊಳ್ಳುತ್ತದೆ. ಇದು ಅದರ ಮೂಲ ಉದ್ದೇಶವೂ ಆಗಿದೆ.ಆದರೆ ಪ್ರಕಾಶದಲ್ಲಿಯೂ ಸಹಿತ ಹಲವಾರು ವಿಧಗಳಿವೆ. ಇದು ಚಿತ್ತಿನ ಹಲವು ವಿಧದ ರೂಪಾಂತರದಿಂದ ನಿರ್ಮಾಣಗೊಳ್ಳುತ್ತವೆ. ಶಾಶ್ವತದ ಪ್ರಕಾಶಮಾನವಾದ ಜ್ಯೋತಿಪುಂಜದಿಂದ ಹೊರಹೊಮ್ಮುವ ಏಳು ಕಿರಣಗಳು ಏಕೀಭವಿಸಿಕೊಂಡು, ಸೂರ್ಯನ ತೆರದಲ್ಲಿ ಸಾಕಾರ ಪಡೆದುಕೊಂಡು ಮಾನವನಿಗೆ ಕಾಣುತ್ತದೆ; (ಆದಿತ್ಯವತ್ ತಮಸಃ ಪರಸ್ತಾತ್). ಅವಿನಾಶಿಯಾದ ಹಂತದಲ್ಲಿ ಪ್ರಕಟಗೊಳ್ಳುತ್ತದೆ. ಇದರ ಮೂಲಕವೇ ಏಳೂ ಏಳೂ ಕಿರಣಗಳು ಲೋಕದ ಸೃಷ್ಟಿಗೆ–ಅನುಷ್ಠಾನಕ್ಕೆ–ಅಭಿವ್ಯಕ್ತಿಗೆ–ರೂಪಾಂತರಕ್ಕೆ ಕಾರಣವಾಗುತ್ತವೆ. ಸತ್–ಚಿತ್–ಆನಂದ–ವಿಜ್ಞಾನ–ಮನಸ್ಸು–ಪ್ರಾಣ–ಅನ್ನ ಇವು ಸಪ್ತ ಆಯಾಮ ಹೊಂದಿದ, ಸಪ್ತ ರೂಪಗಳಲ್ಲಿ ಪ್ರಕಟಗೊಳ್ಳುವ ಚಿತ್ತಿನ ಸ್ವರೂಪಗಳೇ ಆಗಿವೆ. ಇದನ್ನೇ ಜ್ಯೋತಿರ್ಮಯ ಬ್ರಹ್ಮನ ಸಗುಣತತ್ತ್ವ ಎನ್ನುತ್ತಾರೆ.

ಇನ್ನು – ಪ್ರಕಾಶ, ಅಗ್ನಿ, ವಿದ್ಯುತ್,ಜ್ಯೋತಿ, ತೇಜಸ್ಸು, ದೋಷ ಮತ್ತು ಛಾಯಾ ಇವು ಏಳು ಜ್ಯೋತಿರ್ಮಯ ಬ್ರಹ್ಮನ ನಿರ್ಗುಣ ತತ್ತ್ವದ ರೂಪಗಳಾಗಿವೆ (ಗುಣಗಳಾಗಿವೆ).

**ಸೂರ್ಯತೇಜದಲಿ ಪಡಿಮೂಡಿಕೊಂಡ ಸೌಂದರ್ಯ ಪಥಗಳನ್ನು**

ಪ್ರಜ್ಞಾನ ನಿನದ ವಿಜ್ಞಾನ ಮೂಲ ನೆಲೆಯ ದೃಷ್ಟಾರರಿವರು
ಮಾಧುರ್ಯಮಯದ, ಸಾಮರ್ಥ್ಯ ಘನದ ದಿವ್ಯದಾನಂದ ಘನರು,
ಸೂರ್ಯತೇಜದಲಿ ಪಡಿಮೂಡಿಕೊಂಡ ಸೌಂದರ್ಯ ಪಥಗಳನ್ನು
ಸತತ ಧ್ಯಾನದಲಿ ಆತ್ಮಭಾವದಲಿ ಶೋಧಕರು ಕಂಡರಿನ್ನು

ಸಪ್ರೇಮಮಯದ ಅಗ್ನಿದೀಪ್ತಿಯಾ ಪರಿವಹನ ಧಾರೆಯಂದ
ಕರಣಗಳ ಬೀಸಿ ಆರ್ಣವವ ದಾಟಿ ಸಾಗಿಹುದು ಈಜು–ವೃಂದ
ಸಾನಂದ–ಘನದ ಹೇಮವರ್ಣೀಯ ದ್ವಾರಗಳ ಪರಿಧಿಯೊಳಗೆ
ಪಾದನ್ಯಾಸಗಳ ಲಲಿತ ಲಾಸ್ಯದಲಿ ತಲ್ಲೀನರಿವರು ಹೀಗೆ

ತೇಜದುಂಬಿರುವ ಪ್ರಕೃತಿ ವದನದಾ ಚಿರ–ದೀಪ್ತಿ–ಶಾಂತಿಯನ್ನು
ಸಾರ್ಥಕ್ಯದಲ್ಲಿ ಸರ್ವಸಮಗೊಳಿಸೆ ಪ್ರಜ್ಯೋತಿ–ಕಾಂತಿಯನ್ನು,
ಸತತದಲಿ ಸೋತು ನೊಂದಿರುವ ಬುವಿಗೆ ನವತೋಷ ತುಂಬೆ ಮುದದಿ
ಅವರ ವಿಕ್ರಮದ ಪದದ ವಿನ್ಯಾಸ ಖಚಿತದಲಿ ಬರುವ ದಿನದಿ.

**– ಪುಟ್ಟು ಕುಲಕರ್ಣಿ**

**(ಸಾವಿತ್ರಿ; ದಳ 3 ರೇಣು 4 ಪುಟ 344)**

## ಶ್ರೀ ಅರವಿಂದರ
## ‘ಗೀತಾ ಪ್ರಬಂಧಗಳು’

**– ಅನುವಾದ: ಜಾನ್ವಿ**

**28**

### ಅಧ್ಯಾಯ – 22
### ಪ್ರಕೃತಿಯ ನಿಗುಣಗಳಾಚೆಗೆ (22/1)

ಈ ಹಿಂದಿನ ಅಧ್ಯಾಯದಲ್ಲಿ ಪ್ರಕೃತಿಯ ನಿಯಮತಿ ಮತ್ತು ಅದರ ವ್ಯಾಪ್ತಿಯನ್ನು ಕುರಿತು ತಿಳಿದು ಕೊಂಡಿದ್ದೇವೆ. ನಮ್ಮ ಅಹಂ ನಮ್ಮ ವ್ಯವಹಾರದ ಕರ್ತೃವಾಗಿದೆ, ಅದು ಪ್ರಕೃತಿಯ ವ್ಯಾಪಾರದ ಮಾಧ್ಯಮವಾಗಿ, ಉಪಕರಣವಾಗಿ ಕೆಲಸ ಮಾಡುತ್ತದೆ; ಆದ್ದರಿಂದ ಅದು ಪೃಕೃತಿಯ ನಿಯಂತ್ರಣದಲ್ಲಿಯೇ ಇರುತ್ತದೆ. ಅಂದರೆ ಅದರ ಎಲ್ಲ ಇಷ್ಟಾನಿಷ್ಟಗಳು, ಕ್ರಿಯೆಗಳು, ಪ್ರಕೃತಿಗಧೀನವಾಗಿಯೇ ಇರುತ್ತವೆ. ಇನ್ನು ನಮ್ಮ ಪ್ರಕೃತಿಯ ವಿಶೇಷವೇನೆಂದರೆ, ಅದು ವರ್ತಮಾನದ ಕ್ಷಣದ ಫಲವಾಗಿರುವಂತೆ ತೋರಿದರೂ ಸಹ ಅದರ ಮೇಲೆ ಪೂರ್ವಜನ್ಮ, ಗತಕಾಲ ಮತ್ತು ತಜ್ಜನಿತ ರೂಪಾಂತರದ ಪರಿಣಾಮವೂ ಬಹಳಷ್ಟಿರುತ್ತದೆ. ಕೆಲವರೇನೂ ಹೀಗೆ ಹೇಳುವುದುಂಟು, “ನಮ್ಮ ಆರಂಭದ ಅಥವಾ ಮೊದಲ ಕೃತಿಯು ಸ್ವತಂತ್ರವಾಗಿರುವುದು, ಸ್ವ–ಇಚ್ಛೆಯಿಂದಲೇ ನಾವದನ್ನು ಮಾಡುತ್ತೇವೆ. ಆದರೆ ಆನಂತರದ ಎರಡನೆಯ, ಮೂರನೆಯ ಹೀಗೆ ಉತ್ತರೋತ್ತರ ಕೃತಿಗಳ ಪರಂಪರೆಯು ಹಿಂದು ಹಿಂದಿನ ಕೃತಿಯಿಂದ ಪ್ರಭಾವಿತವಾಗಿರುವುದು, ಹೀಗೆ ಕೃತಿ ಪರಂಪರೆಯು ಅಸ್ವತಂತ್ರವಾಗಿರುವುದು. ಆದರೆ ಆರಂಭದಲ್ಲಿನ ನಮ್ಮ ಕೃತಿಗೆ ನಾವೇ ಕಾರಣರು, ನಮ್ಮ ಸ್ವ–ಸಂಕಲ್ಪವೇ ಕಾರಣ, ಮುಂದಿನ ಎಲ್ಲ ಕೃತಿಗಳು ಅಸ್ವತಂತ್ರವಾಗಿದ್ದರೂ ಅಷ್ಟರ ಮಟ್ಟಿಗಿನ ಹೊಣೆ ನಮ್ಮ ಮೇಲಿದೆ. ನಾವೇ ಅದಕ್ಕೆ ಜವಾಬುದಾರರು” ಎಂದು ವಾದಿಸುವುದುಂಟು – ಆದರೆ ಪ್ರಕೃತಿಯ ಸ್ತರದಲ್ಲಿ ನಮ್ಮ ಆರಂಭಿಕ ಕೃತಿ ಯಾವುದು ಎಂಬುದನ್ನು ನಾವು ನಿರ್ಧರಿಸಲು ಸಾಧ್ಯವಾಗುವುದೇ ಇಲ್ಲ. ನಮ್ಮ ಮೊದಲ ಸ್ವತಂತ್ರ ಕೃತಿ ಎಂದು ನಮಗೆ ತೋರಿದರೂ ಅಥವಾ ಹಾಗೆ ಭಾಸವಾದರೂ ಅದನ್ನು ‘ಇದೇ’ ಎಂದು ನಿರ್ಧರಿಸಲು ಸಾಧ್ಯವಾಗುವುದಿಲ್ಲ. ಪ್ರಕೃತಿಯ ಪಾತಳಿಯಲ್ಲಿ ನಮ್ಮ ಪ್ರಸ್ತುತ ಯಾವುದು, ಹಿಂದಿನ ಅವಸ್ಥೆ ಯಾವುದು, ನಮ್ಮ ಸದ್ಯದ ಕೃತಿಯು ಹಿಂದಿನದರ

ಪರಿಣಾಮವೇ ಅಲ್ಲವೇ ಎಂಬುದನ್ನು ಯಾರೂ ನಿರ್ಧರಿಸಲಾರರು. ನಮಗೇನೋ ವರ್ತಮಾನ, ಭೂತಕಾಲ, ಭವಿಷ್ಯತ್ ಕಾಲ ಎಂದೆಲ್ಲ ಭಾಸವಾಗುವುದು ನಿಜವೇ; ಆದರೆ ನಾವು ಯಾವಾಗಲೂ ಇರುವುದು ವರ್ತಮಾನದ ಕ್ಷಣದಲ್ಲಿಯೇ, ಚಿಂತಿಸುವುದು ಮಾತ್ರ ಮುಂದಿನ ಭವಿಷ್ಯತ್ತನ್ನು ಕುರಿತೇ! ನಾವು ಈ ಪ್ರಸ್ತುತ ಹಿಂದಿನ ಕ್ಷಣಕ್ಕೆ ಹೋಗಿ ಪುನರಪಿ ಜೀವಿಸಲು ಸಾಧ್ಯವೇ? ಅಸಾಧ್ಯ – ಅಂತೆಯೇ ನಮಗೆ ತೀರ ಆಪ್ತವಾಗಿ ಭಾಸವಾಗುವುದು ವರ್ತಮಾನ ಮತ್ತು ಅದರ ಪರಿಣಾಮ ರೂಪದ ನಾಳಿನ ಭವಿತವ್ಯ, ಇಷ್ಟೇ. ಆದರೆ ನಮ್ಮ ಹಿಡಿತ ವರ್ತಮಾನದ ಮೇಲೂ ಇಲ್ಲ. ಏಕೆಂದರೆ ಅದು ಗತದ (ಭೂತಕಾಲದ) ಪರಿಣಾಮವಾಗಿದೆ, ಗತಕಾಲದ ಮೇಲೆ ಆಧಾರಿತವಾಗಿದೆ. ಭೂತಕಾಲವು ಕೃತಿ ಹಾಗೂ ಪರಿಣಾಮ ರೂಪದಿಂದ ಜೀವಂತವಾಗಿರುವುದಾದರೂ ನಾವು ಅದನ್ನು "ಮೃತ" ಎಂದೇ ಭಾವಿಸುತ್ತೇವೆ. "ಈ ಕ್ಷಣದಲ್ಲಿ ತಾನು ಸ್ವತಂತ್ರ, ನಾನೇನು ಬೇಕಾದರೂ ಮಾಡಬಹುದು, ಇಚ್ಛಾ ಸ್ವಾಂತ್ರ್ಯದ ಮೂಲಕ ನಾನು ವರ್ತಮಾನದಲ್ಲಿ ಕೂಡ ವ್ಯವಹರಿಸಬಹುದೆಂದು ನಾನು ಅಂದುಕೊಂಡಿದ್ದರೆ ಅದು ಶುದ್ಧ ತಪ್ಪು. ಅಂಥ ಇಚ್ಛಾ ಸ್ವಾತಂತ್ರ್ಯ, ಕಾರ್ಯ ಸ್ವಾತಂತ್ರ್ಯ ಮತ್ತು ಅದರ ಪರಿಣಾಮ ಯಾವುದೂ ನಮ್ಮ ಕೈಯಲ್ಲಿ ಇಲ್ಲ. ಅಂಥ ಸ್ವಾತಂತ್ರ್ಯ ನಮಗಿಲ್ಲ; ಬೇರೆ ದಾರಿ, ಬೇರೆ ರೀತಿಯ ಆಲೋಚನೆ, ಬೇರೆ ಸಂಕಲ್ಪ" ಇವಾವುದೂ ನಮ್ಮ ಕೈಯಲ್ಲಿಲ್ಲ ಮತ್ತು ಇದನ್ನು ಬಿಟ್ಟು ಬೇರೆ ದಾರಿಯೂ ಇಲ್ಲ.

ಹಾಗಾದರೆ ನಮಗೆ ಸ್ವಾತಂತ್ರ್ಯ ಇಲ್ಲವೇ ಇಲ್ಲವೇ? ಇದೆ, ಸ್ವಲ್ಪಮಟ್ಟಿಗೆ ಇದೆ. ಕೆಲ ಸಾಧ್ಯತೆಗಳ ಮಧ್ಯೆ ಯಾವುದನ್ನು ಆಯ್ದುಕೊಳ್ಳಬೇಕು, ಯಾವುದನ್ನು ಬಿಡಬೇಕು ಎಂಬ ಸ್ವಾತಂತ್ರ್ಯ ನಮಗಿದೆ. ಪ್ರಕೃತಿ ಕೆಲಸ ಮಾಡುವ ರೀತಿಯೇ ಹಾಗೆ. ನಮ್ಮ ಉತ್ಸಾಹ, ನಮ್ಮ ಸಮ್ಮತಿ, ನಮ್ಮ ನಿರಾಕರಣೆ, ನಿರಾಸಕ್ತಿ ಇವು ಕೂಡ ನಮ್ಮ ಆಯ್ಕೆಯೇ. ನಮ್ಮಲ್ಲಿ ಇರುವ ಪ್ರಕೃತಿ ಮಾಡಿಕೊಳ್ಳುವ ಆಯ್ಕೆ ಅದು. ನಾವು ತೀರ ಜಡ ಎಂದು ಭಾವಿಸುವ ಅಣುವಿನಲ್ಲೂ ಸಹ ಅದರದೇ ಆದ ಸಂಕಲ್ಪವಿದೆ. ಹಾಗಾದರೆ ವ್ಯತ್ಯಾಸವೆಲ್ಲಿದೆ ಎಂದರೆ, ನಾವು ನಮ್ಮ ಸ್ವಂತ (ಆತ್ಮ ಅಥವಾ ಜೀವ ಅಥವಾ ಶರೀರ ಅಥವಾ ವ್ಯಕ್ತಿತ್ವ ಅಥವಾ ಸತ್ತೆ soul) ಎಂದು ಯಾವುದನ್ನು ಭಾವಿಸಿದ್ದೇವೆಯೋ ಅದನ್ನು ಪ್ರಕೃತಿಯ ಸಂಕಲ್ಪದ ಕಾರ್ಯದ ಜೊತೆಗೆ ಎಷ್ಟರ ಮಟ್ಟಿಗೆ ಹೊಂದಾಣಿಕೆ ಮಾಡಲು ನಮಗೆ ಸಾಧ್ಯವಾಗಿದೆ ಅನ್ನುವುದರ ಮೇಲೆ ಎಲ್ಲವೂ ಅವಲಂಬಿಸಿದೆ. ಅದರ ಜೊತೆಗೆ ನಮ್ಮನು ಗುರುತಿಸಿಕೊಂಡರೆ, ಅಂದರೆ

ಪ್ರಕೃತಿಯ ಸಂಕಲ್ಪದ ಜೊತೆ ಗುರುತಿಸಿಕೊಂಡರೆ, ಅದಕ್ಕೆ ಸಹಕರಿಸಿದರೆ, ಆಗ ಅದು ಪ್ರಕೃತಿಯದೆನಿಸುವುದಿಲ್ಲ, ನಮ್ಮದೇ ಸಂಕಲ್ಪ, ನಾವೇ ಕರ್ತೃ ಎಂದು ಅನಿಸುತ್ತದೆ. ಅದು ಆಗ ಸ್ವ–ಇಚ್ಛೆ ಅಥವಾ ನಮ್ಮ ಸ್ವತಂತ್ರ ಸಂಕಲ್ಪ, ನಮ್ಮ ಸ್ವತಂತ್ರ ಕಾರ್ಯ ಎನಿಸುತ್ತದೆ. ತಪ್ಪೋ ಸರಿಯೋ, ಭ್ರಮೆಯೋ ಅಲ್ಲವೋ ಆ ಮಾತು ಬೇರೆ; ಆದರೆ ಈ ಸಂಗತಿ, ಈ ರೀತಿ ಭಾವಿಸುವುದು ಮಾತ್ರ ತನ್ನದೇ ಆದ ಪರಿಣಾಮವನ್ನು ಹೊಂದಿದೆ, ಇದರಿಂದ ಸಾಕಷ್ಟು ಪ್ರಯೋಜನ ಕೂಡ ಇದೆ. ಪ್ರಕೃತಿಯಲ್ಲಿ ಎಲ್ಲವೂ ತನ್ನದೇ ಆದ ಪರಿಣಾಮವನ್ನು ಹೊಂದಿದೆ ಮತ್ತು ಪ್ರಯೋಜನವನ್ನು ಹೊಂದಿದೆ. ನಾವು ಪ್ರಜ್ಞಾಪೂರ್ವಕವಾಗಿ ಹೀಗೆ ಮಾಡಿದಾಗ ನಮ್ಮ ಸತ್ತೆಯು (being) ಪ್ರಕೃತಿಯ ಜೊತೆ ಒಂದಾಗುವುದಲ್ಲದೇ, ಪ್ರಕೃತಿಯ ಅಂತರಂಗದಲ್ಲಿರುವ ಪುರುಷನ ರಹಸ್ಯ ಸಾನಿಧ್ಯಕ್ಕೆ ಉನ್ಮುಖವಾಗುತ್ತದೆ. ಅದರ ಬಗ್ಗೆ ಅರಿವು ಮೂಡುತ್ತದೆ. ಹೀಗೆ ಆದಾಗ ಜ್ಞಾನ ವೃದ್ಧಿಯಾದಂತೆಲ್ಲ ಹಿರಿದಾದ ಕಾರ್ಯ ಮಾಡುವ ಸಾಧ್ಯತೆ ಹೆಚ್ಚಾಗುತ್ತ ಹೋಗುತ್ತದೆ. ನಮ್ಮೊಳಗಿನ ಅಹಂ ಪರಿಕಲ್ಪನೆ ಮತ್ತು ವೈಯಕ್ತಿಕ ಸಂಕಲ್ಪದ ಮೂಲಕವೇ ಪ್ರಕೃತಿಯು ಹೆಚ್ಚು ಹೆಚ್ಚಿನ ಸಾಧ್ಯತೆಗಳ ಸಾಮರ್ಥ್ಯ ಪಡೆಯುತ್ತದೆ, ತಾಮಸಿಕತ ಗುಣವಾದ ತೀರ ಜಡತೆ, ನಿಷ್ಕ್ರಿಯತೆಗಳ ಅಧಿಕ್ಯದಿಂದ, ಹಿಡಿತದಿಂದ ಬಿಡಿಸಿಕೊಂಡು ರಾಜಸಿಕ ಗುಣದ ಉತ್ಸಾಹ ಹಾಗೂ ಹೋರಾಟ ಗುಣಗಳನ್ನು ಬೆಳೆಸಿಕೊಳ್ಳುತ್ತದೆ. ಈ ರಾಜಸಿಕ ಗುಣವನ್ನೇ ಮತ್ತೆ ಮುಂದೆ ಜ್ಞಾನದ ಬೆಳಕು, ಆನಂದ ಇವುಗಳ ಅಗರವಾದ ಸಾತ್ವಿಕ ಗುಣದಲ್ಲಿ ಪರಿವರ್ತನೆ ಹೊಂದುವಂತೆ ಮಾಡುತ್ತದೆ. ಇದೊಂದು ರೀತಿಯ ಸಾಪೇಕ್ಷ ಪ್ರಭುತ್ವವಿದ್ದಂತೆ. ಸಾಮಾನ್ಯ ವ್ಯಕ್ತಿಯು ಇಂಥ ಪ್ರಭುತ್ವ ಪಡೆದಾಗ ತನ್ನ ಹಿರಿದಾದ ಗುಣಗಳ ಮೂಲಕ ನಿಮ್ನ ಸ್ತರದ ಗುಣಗಳ ಮೇಲೆ, ನಿಮ್ನ ಸಾಧ್ಯತೆಗಳ ಮೇಲೆ ಉನ್ನತ ಸಾಧ್ಯತೆಗಳ ಮೂಲಕ ಸ್ವಾಮಿತ್ವ ಸಂಪಾದಿಸಿದಂತೆ. ಹೀಗೆ ಮಾಡುವಾಗ ಪ್ರಕೃತಿಯ ಸಹಜ ಸ್ವಭಾವವಾದ ನಿಮ್ನ ಸ್ತರದ ಮೇಲೆ ಉನ್ನತ ಸ್ತರದ ಸ್ವಾಮಿತ್ವಕ್ಕಾಗಿ ನಡೆಯುವ ಹೋರಾಟದಲ್ಲಿ ತನ್ನ ಆತ್ಮವನ್ನು (ತನ್ನ ಆತ್ಮವೆಂದು ತಾನೇನು ಬಗೆದಿರುವುನೋ ಅದನ್ನು) ಜೋಡಿಸುತ್ತಾನೆ. ಅದು ಸ್ವತಂತ್ರ ಸಂಕಲ್ಪವೋ, ಅಲ್ಲವೋ, ಕೇವಲ ಭ್ರಮೆಯೋ ಏನೇ ಇರಲಿ ಪ್ರಕೃತಿ ಕಾರ್ಯಾಚರಣೆಯ ಮಾಧ್ಯಮವಾಗಿ ಅವಶ್ಯವಾಗಿದೆ. ಮಾನವನ ಪ್ರಗತಿಯಲ್ಲಿ. ವಿಕಾಸದಲ್ಲಿ ಕೂಡ ಅದು ಮಹತ್ವದ್ದು ಮತ್ತು ಅವಶ್ಯದ್ದಾಗಿದೆ. ಅವನು ಹಿರಿದಾದ ಸತ್ಯದ ಸ್ತರವನ್ನು ಏರುವ ಮೊದಲು ಈ ರೀತಿಯ ಸ್ವತಂತ್ರ ಸಂಕಲ್ಪ, ತನ್ನ ಆತ್ಮ ಸಂಕಲ್ಪವೆಂಬ ಭಾವವನ್ನು ಅವನು ತಾಳುವುದು ಅತ್ಯಂತ ಅವಶ್ಯವಾಗಿದ್ದು, ಒಂದು

ವೇಳೆ ಅದನ್ನು ಕಳೆದುಕೊಂಡರೆ ಮಹಾ ಅನಾಹುತ ಸಂಭವಿಸುವ ಸಾಧ್ಯತೆ ಇರುವುದು. ಅಂತೆಯೇ, ಪ್ರಕೃತಿಯು ತನ್ನ ಅನುಜ್ಞೆಯನ್ನು, ಉದ್ದೇಶವನ್ನು ಪೂರ್ತಿಗೊಳಿಸಬೇಕಾದರೆ ಮಾನವನ ಮೇಲೆ ಇಂಥ ಭ್ರಮೆಯನ್ನು ಹೇರುವುದು ಎಂದು ಹೇಳುವುದುಂಟು ಮತ್ತು ಈ ಹೇಳಿಕೆ ಸರಿಯಾಗಿದೆ ಕೂಡ. ಪ್ರಕೃತಿಯ ಮಾಯಾ ಶಕ್ತಿಯಲ್ಲಿ ಈ ತರಹದ ಭ್ರಮಾ ಶಕ್ತಿ ತುಂಬ ಬಲಶಾಲಿಯಾಗಿದೆ. ಅಷ್ಟೇ ಈ ರೀತಿಯ ಭ್ರಮೆಯು ಮಾನವನ ಒಳಿತಿಗಾಗಿ, ಅವನ ಹಿತಕ್ಕಾಗಿಯೇ ಇದೆ, ಅನ್ಯಥಾ ಅವನು ತನ್ನ ಸಾಧ್ಯತೆಯ ಪೂರ್ಣ ಶಿಖರವನ್ನು ಮುಟ್ಟುವುದು ಸಾಧ್ಯವಿಲ್ಲ ಎಂದು ಕೂಡ ಹೇಳಬಹುದು.

ಹಾಗಾದರೆ ಇದು ಸಂಪೂರ್ಣ ಭ್ರಮೆಯೇ? ಕೇವಲ ಆಭಾಸ ಮಾತ್ರವೇ? ಅಲ್ಲ, ಖಂಡಿತ ಅಲ್ಲ. ಇಲ್ಲಿ ವ್ಯಾವಹಾರಿಕ ದೃಷ್ಟಿಕೋನ ಅಥವಾ ವ್ಯಾವಹಾರಿಕ ವೇದಿಕೆಯ ಮೇಲಿಂದ ಹಾಗೆ ಹೇಳಿದೆ. ನಮ್ಮ ಅಹಂ ತಾನೇ ನಿಜವಾದ ಆತ್ಮ ಎಂದು ಭಾವಿಸುತ್ತದೆ ಮತ್ತು ಹಾಗೆಯೇ ವರ್ತಿಸುತ್ತದೆ. ನಮ್ಮೆಲ್ಲ ಚಟುವಟಿಕೆಗಳ, ಕಾರ್ಯಗಳ ಕೇಂದ್ರ ಬಿಂದು ತಾನು, ಎಲ್ಲವೂ ತನ್ನ ಸಲುವಾಗಿಯೇ ಇದೆ ಎಂಬುದು ಅದರ ಭಾವನೆ. ಇದರಿಂದಾಗಿ ಅದರ ನಿಲುವಿನಲ್ಲಿ, ದೃಷ್ಟಿಕೋನದಲ್ಲಿ ವ್ಯತ್ಯಾಸವುಂಟಾಗುತ್ತದೆ. ನಮ್ಮೊಳಗೆ ಏನೋ ಒಂದು (ಅಥವಾ ಯಾರೋ ಒಬ್ಬರು) ಇದೆ (ಇದ್ದಾರೆ). ನಮ್ಮ ಪ್ರಕೃತಿಯ ಕಾರ್ಯದ ಹಿಂದೆ ಅದೇ ಇದೆ (ಅಥವಾ ಅವರೇ ಇದ್ದಾರೆ) ಮತ್ತು ಅವನ (ಅದರ) ಸಲುವಾಗಿಯೇ ಎಲ್ಲವೂ ಇದೆ ಎಂದು ಭಾವಿಸುವುದು ತಪ್ಪಲ್ಲ. ಅದು ಸರಿಯಾದದ್ದೇ ಆದರೆ "ಅದು" ಅಹಂ ಅಲ್ಲ, ನಮ್ಮ ಹೃದಯದಲ್ಲಿ ರಹಸ್ಯವಾಗಿ ಇರುವವನು ಪರಮಾತ್ಮನೇ. ಅಹಂ ಅಲ್ಲ, ಜೀವಾತ್ಮನೇ, ಜೀವಾತ್ಮನು ಪರಮಾತ್ಮನ ಅಂಶನೇ – "ನಾನು–ನಾನು" ಎಂದು ಸ್ವಯಂ ಘೋಷಣೆ ಮಾಡಿಕೊಳ್ಳುವ ಅಹಂ–ಭಾವವು ಸತ್ಯವನ್ನರ್ಥೈಯಿಸಿಕೊಳ್ಳಲಾರದ ಮನಸ್ಸೆ ವಿಕೃತ ಪ್ರತಿಬಿಂಬ ಅಷ್ಟೇ. ಮೂಲ ಪರಮಾತ್ಮ ನಮ್ಮ ಹೃದಯದಲ್ಲಿಯೇ ಇದ್ದಾನೆ. ಅವನೇ ಸಮಸ್ತ ಪ್ರಪಂಚದ ಒಡೆಯ, ಅವನ ಅಣತಿಯ ಪ್ರಕಾರವೇ ಪ್ರಕೃತಿಯು ಕಾರ್ಯ ಮಾಡುತ್ತದೆ. ಅಂತೆಯೇ ಅಹಂನ ಸ್ವತಂತ್ರ ಸಂಕಲ್ಪವೆಂಬ ಆಭಾಸವು ವಿಕೃತವಾದುದು, ಅದು ಮಿಥ್ಯಾಪ್ರತ್ಯಯವು. ನಮ್ಮ ಹೃದಯಸ್ಥನಾದ ಆತ್ಮನ ಇಚ್ಛೆಯೇ ಎಲ್ಲ ಕ್ರಿಯೆಗಳ ಮೂಲ ಕಾರಣ. ಹಾಗೆ ನೋಡಿದರೆ ಪ್ರಕೃತಿಯು ಕೂಡ ಆ ಪರಮಾತ್ಮನ ಸಂಕಲ್ಪದ ಪ್ರತಿಫಲಿತ ರೂಪವೇ. ಏಕೆಂದರೆ ಅದು ಕಾಲದ

ಕ್ರಮಾನುಗತ ಗತಿಯೊಳಗೆ ವ್ಯಕ್ತವಾಗುವುದು. ಅದು ನಿರಂತರವಾದ ಬದಲಾವಣೆಗಳ ಸರಣಿ ಇದ್ದ ಹಾಗೆ. ಆ ಸರಣಿಯಲ್ಲಿ ಹಿಂದಿನ ಕೊಂಡಿಗಳ (ಗತ ಕಾಲದ ಸ್ಮೃತಿಗಳ) ಬಗ್ಗೆ ಸಲ್ಲದ ಆಸಕ್ತಿ ಇಲ್ಲ, ಅವುಗಳಿಗೆ ತಮ್ಮ ಪರಿಣಾಮ ಹಾಗೂ ಉದ್ದೇಶಗಳ ಬಗ್ಗೆ ಮಾಹಿತಿಯೂ ಇಲ್ಲ. ವಿಶೇಷ ಆಸ್ತಿಯೂ ಇಲ್ಲ. ಆದರೆ ದೈವೀ ಸಂಕಲ್ಪವು ಕಾಲಾತೀತವಾದುದು. ಅದಕ್ಕೆ ಎಲ್ಲ–ಅಡ್ಡ ಪರಿಣಾಮಗಳು ಕೂಡ ಗೊತ್ತು. ನಮ್ಮೊಳಗಿನ ಪ್ರಕೃತಿಯ ಕಾರ್ಯ, ವಿಧಾನ ಕೂಡ ಹೊತ್ತು, ಘಟನೆಯ ಪೂರ್ವದಲ್ಲಿಯೇ ಅತಿಮಾನಸಿಕ ಪ್ರಕಾಶದಲ್ಲಿ ಈ ದೈವೀ ಇಚ್ಛೆಗೆ ಎಲ್ಲವೂ ನಿಚ್ಚಳವಾಗಿ ಕಾಣುತ್ತದೆ. ನಮ್ಮ ಅಹಂ ಮಯ ಅಜ್ಞಾನದ ವಿರೋಧದ ಕಲ್ಪನೆಯೂ ಅದಕ್ಕಿರುತ್ತದೆ ಮತ್ತು ಇವೆಲ್ಲ ಅವರೋಧಗಳ ನಡುವೆ ಯಶಸ್ವಿಯಾಗಿ ಕಾರ್ಯ ಮಾಡುವುದು ಹೇಗೆ ಎಂಬುದು ಗೊತ್ತಿರುತ್ತದೆ.

ನಾವು ಪ್ರಗತಿ ಹೊಂದಿದಂತೆ, ವಿಕಾಸ ಹೊಂದಿದಂತೆ, ನಾವು ಕ್ಲುಪ್ತ ಸಮಯದಲ್ಲಿ ನಮ್ಮ ಸತ್ತೆಯ ನಿಜ ಸತ್ಯದ ಬಗ್ಗೆ ಜಾಗೃತರಾಗುತ್ತೇವೆ, ಸತ್ಯದ ಅರಿವಾಗುತ್ತದೆ. ಆಗ ನಮ್ಮ ಅಹಂಮಯವಾದ ಸ್ವತಂತ್ರ ಸಂಕಲ್ಪದ ಕಲ್ಪನೆ ಬಿದ್ದು ಹೋಗುತ್ತದೆ. ಅಹಂಮಯವಾದ ಇಚ್ಛಾ ಸ್ವಾತಂತ್ರ್ಯ ಅಥವಾ ಸಮಕಲ್ಪ ಸ್ವಾತಂತ್ರ್ಯದ ನಿರಾಕರಣೆಯೆಂದರೆ ಕರ್ಮ ನಿರಾಕರಣೆ, ಕರ್ಮ ತ್ಯಾಗ ಎಂದರ್ಥವಲ್ಲ. ಏಕೆಂದರೆ ಪ್ರಕೃತಿಯೇ ಕರ್ತೃವಾಗಿ ಕರ್ಮ ಮಾಡುತ್ತಿರುತ್ತದೆ. ಪ್ರಕೃತಿಯ ವಿಕಾಸ ಕ್ರಮದಲ್ಲಿ ಸ್ವತಂತ್ರ ಸಂಕಲ್ಪದ ಪರಿಕಲ್ಪನೆ ಮೂಡುವ ಮೊದಲೇ ಅದು ಕರ್ಮ ಮಾಡುತ್ತಲೇ ಇತ್ತು. ಅದೇ ರೀತಿಯಾಗಿ ಈ ಇಚ್ಛೆ ಇರುವಾಗಲೂ ಇಲ್ಲದಿರುವಾಗಲೂ, ನಾಶವಾದಾಗಲೂ ಪ್ರಕೃತಿ ಕಾರ್ಯ ಮಾಡುತ್ತಲೇ ಇರುತ್ತದೆ. ಯಾವ ವ್ಯಕ್ತಿಯು ಈ ಮಿಥ್ಯಾ ಪ್ರತ್ಯಯವನ್ನು ಅಂದರೆ ತಾನೇ ಕರ್ತೃ ಎಂಬ ಭಾವನ್ನು ತೊಡೆದು ಹಾಕಿರುವುನೋ ಅವನಲ್ಲಿ ಪ್ರಕೃತಿಯು ಇತರತ್ರ ಮಾಡುವ ಕಾರ್ಯಕ್ಕಿಂತ ಹಿರಿದಾದ, ಹೆಚ್ಚಿನ ಕೆಲಸವನ್ನು ಮಾಡಲು ಸಾಧ್ಯವಾಗುವುದು. ಏಕೆಂದರೆ ಅಂಥ ವ್ಯಕ್ತಿಯ ಮನಸ್ಸು ಸತ್ಯದರ್ಶಿಯಾಗಿರುವುದು ಮತ್ತು ಅದರಿಂದಾಗಿ ಅವನಿಗೆ ಪ್ರಕೃತಿಯ ವಿಷಯವಾಗಿ ಅಧಿಕ ಜ್ಞಾನ ಲಾಭವಾಗುವುದು. ತನ್ನ ಸದ್ಯದ ಪ್ರಕೃತಿಯು ಈ ಮೊದಲು ಯಾವ ರೀತಿ ಕಾರ್ಯ ಮಾಡಿದೆ, ಈಗ ಹೇಗೆ ಮಾಡುತ್ತಿದೆ ಎಂಬುದು ನಿಚ್ಚಳವಾಗಿ ತಿಳಿಯುತ್ತದೆ. ತನ್ನೊಳಗೆ, ತನ್ನ ಸುತ್ತಲೂ ಯಾವ ಶಕ್ತಿ ಕ್ರಿಯಾಶೀಲವಾಗಿದೆ, ಅದು ತನ್ನ ವಿಕಾಸದಲ್ಲಿ ಪ್ರಕೃತಿಗೆ ಎಷ್ಟರ ಮಟ್ಟಿಗೆ

ಸಹಾಯಕವಾದೀತು, ಅಥವಾ ಪ್ರತಿಬಂಧಕವಾದೀತು ಎಂಬುದು ಅವನಿಗೆ ಗೊತ್ತಾಗುತ್ತದೆ. ಈ ಪ್ರಕೃತಿಯಲ್ಲಿ ಅವ್ಯಕ್ತವಾಗಿದ್ದು ವ್ಯಕ್ತವಾಗಲು ಯತ್ನಿಸುವ ಶಕ್ತಿಗಳನ್ನಾತ ಗುರುತಿಸುತ್ತಾನೆ. ವ್ಯಕ್ತಿ ಮತ್ತು ಪ್ರಕೃತಿ ಇಬ್ಬರಿಗೂ ಅಹಂಮಯ ಮನಸ್ಸಿಗಿಂತ ಬಹಳ ಅಧಿಕ ಪ್ರಮಾಣದಲ್ಲಿ ಕಾರ್ಯ ಮಾಡುವ ಈ ಮಾಧ್ಯಮದ ಸ್ಪಷ್ಟ ದರ್ಶನವಾಗುವುದು. ಪ್ರಕೃತಿಯ ಕಾರ್ಯಗಳಿಗೆ ಅದರ ಲೀಲೆಗೆ ಪುರುಷನು ನೀಡುವ ಸಮ್ಮತಿಯನ್ನು ಈ ವ್ಯಕ್ತಿಯ ಮನಸ್ಸು ಹೆಚ್ಚು ಸಮರ್ಥವಾದ, ಶಕ್ತಿಯುತವಾದ ಮಾಧ್ಯಮವಾಗಿ ಕೆಲಸ ಮಾಡಬಲ್ಲದು. ಪ್ರಕೃತಿಯ ಎಲ್ಲ ಕ್ರಿಯೆಗಳಿಗೆ ಅದು ಹೆಚ್ಚು ಚೆನ್ನಾಗಿ, ಶೀಘ್ರವಾಗಿ ಪ್ರತಿಸ್ಪಂದಿಸುವ ಮಾಧ್ಯಮವಾಗುವುದು. ಆದರೆ ಇಚ್ಛಾ ಸ್ವಾತಂತ್ರ್ಯದ ನಿರಾಕರಣೆಯು ನಮ್ಮಂತರಂಗದಲ್ಲಿರುವ ಪರಮಾತ್ಮನ ಸಾಕ್ಷಾತ್ಕಾರ ಅಥವಾ ಪರಿಪೂರ್ಣ ಜ್ಞಾನವಿಲ್ಲದೇ ಕೇವಲ ವಿಧಿ, ಹಣೆಯ ಬರಹ ಎನ್ನುವ ನಿಮಿತ್ತ ಮಾತ್ರ ಹಂತದಲ್ಲಾದಾಗ ಯಾವ ಪ್ರಯೋಜನವೂ ಆಗುವುದಿಲ್ಲ. ಏಕೆಂದರೆ ಆಗ ನಮ್ಮಲ್ಲಿನ್ನೂ ಅಹಂಮಯ ವ್ಯಕ್ತಿತ್ವವೇ ನಮ್ಮ ಆತ್ಮವೆಂಬ ಮಿಥ್ಯಾಪ್ರತ್ಯಯ ಇರುತ್ತದೆ. ಆ ಮಿಥ್ಯಾಪ್ರತ್ಯಯವೇ ಪ್ರಕೃತಿಯ ಮಾಧ್ಯಮವಾಗಿ, ನಾವು ಅದರ ಮೂಲಕವೇ ಕರ್ಮ ಮಾಡುತ್ತೇವೆ, ನಮ್ಮ ಅಹಂ ಪ್ರಕೃತಿಯ ಉಪಕರಣವಾಗಿರುತ್ತದೆ. ಆಗ ನಾವು ಅಹಂ ಮೂಲಕವೇ ಕರ್ಮ ಮಾಡುತ್ತೇವೆ. ನಮ್ಮ ಸಂಕಲ್ಪವು ಅಹಂನ ಉಪಕರಣವಾಗಿರುತ್ತದೆ, ಹೀಗಾಗಿ ಇದು ನಮ್ಮಲ್ಲಿ ಯಾವ ಬದಲಾವಣೆಯನ್ನೂ ತರಲು ಶಕ್ತವಾಗುವುದಿಲ್ಲ. ಸ್ವಲ್ಪಮಟ್ಟಿಗಿನ ಬೌದ್ಧಿಕ ದೃಷ್ಟಿಕೋನದಲ್ಲಿ ಬದಲಾವಣೆ ಬರಬಹುದೇ ಹೊರತು ಹೆಚ್ಚಿನ ಲಾಭವಾಗುವುದಿಲ್ಲ. ನಮ್ಮ ಅಹಂಮಯ ಅಸ್ತಿತ್ವ ಮತ್ತು ಕರ್ತೃತ್ವಗಳು ಪ್ರಕತಿ ನಿಯತಿಗಳಾಗಿವೆ ಎಂಬುದು ನಮಗೆ ಗೊತ್ತು ಮತ್ತು ಈ ವ್ಯವಹಾರಿಕ ಸತ್ಯತೆಯನ್ನು ನಾವು ಮನ್ನಿಸುತ್ತೇವೆ. ನಾವು ಪ್ರಕೃತಿಯ ಅಧೀನದಲ್ಲಿದ್ದೇವೆ ಎಂಬ ಸಂಗತಿಯನ್ನು ನಾವು ಒಪ್ಪುತ್ತೇವೆ. ಆದರೆ ನಮ್ಮೊಳಗಿರುವ ನಿಜವಾದ ಅಜ, ಅಮರ ಆತ್ಮ, ಪ್ರಕೃತಿಯ ಗುಣಗಳಾಚೆಗಿರುವ ಆತ್ಮದ ಅನುಭವ – ದರ್ಶನ ಆಗಿರುವುದರಿಂದ "ಈ ಮುಕ್ತಿಯ" ಬಾಗಿಲು ನಮ್ಮಿಂದ ದೂರವೇ ಉಳಿಯುತ್ತದೆ. ಪ್ರಕೃತಿ ಮತ್ತು ಅಹಂ ಇಷ್ಟೇ ನಾವಲ್ಲ; ನಮ್ಮಲ್ಲಿ ಸ್ವತಂತ್ರ, ಮುಕ್ತ ಆತ್ಮ ಇದೆ, ಪುರುಷನಿದ್ದಾನೆ.

ನಮ್ಮೊಳಗೆ ಸ್ವತಂತ್ರನಾದ, ಮುಕ್ತನಾದ, ಇಚ್ಛಾ ಸ್ವಾತಂತ್ರ್ಯವುಳ್ಳ ಪುರುಷನಿದ್ದಾನೆ (ಆತ್ಮ); ಅವನ ಸ್ವಾತಂತ್ರ್ಯ ಯಾವುದರಲ್ಲಿದೆ? ಈ ಪ್ರಶ್ನೆಗೆ ಸಾಂಖ್ಯರ ಉತ್ತರ ಬೇರೆ

ಇದೆ, ಗೀತೆ ನೀಡುವ ಉತ್ತರ ಬೇರೆ ಇದೆ. ಏಕೆಂದರೆ, ಪುರುಷ ಮತ್ತು ಪ್ರಕೃತಿಯ ಸಂಬಂಧವನ್ನೂ ಸಾಂಖ್ಯ ಮತ್ತು ಗೀತೆ ಬೇರೆ ಬೇರೆಯಾಗಿ ವ್ಯಾಖ್ಯಾನಿಸುತ್ತವೆ. ಸಾಂಖ್ಯರ ಪ್ರಕಾರ ಪುರುಷನು ಸಾರಭೂತ ಅಸ್ತಿತ್ವದಲ್ಲಿ ಸ್ವತಂತ್ರನಾಗಿದ್ದಾನೆ. ಅವನು ಅಕರ್ತಾ ಆಗಿರುವುದರಿಂದ ಸ್ವತಂತ್ರನಾಗಿದ್ದಾನೆ. ತಾನು ನಿಷ್ಕ್ರಿಯನಾಗಿದ್ದುಕೊಂಡು ಪ್ರಕೃತಿಯ ನೆರಳು ಮತ್ತು ಅದರ ಕ್ರಿಯೆಯ ನೆರಳು ತನ್ನ ಮೇಲೆ ಬೀಳುವುದನ್ನು ಒಪ್ಪಿಕೊಳ್ಳುತ್ತಾನೆ. ಆಗೆಲ್ಲ ಅವನು ಪ್ರಕೃತಿಯ ತ್ರಿಗುಣಗಳಿಗೆ ವಶವರ್ತಿಯಾಗಿ ವ್ಯವಹರಿಸುವಂತೆ ಕಾಣಿಸುತ್ತಾನೆ. ಇದು ತಾತ್ಕಾಲಿಕವಾಗಿರುವ ಸ್ಥಿತಿಯಾದರೂ ಎಲ್ಲಿಯವರೆಗೆ ಅವನು ಪ್ರಕೃತಿ ಮತ್ತು ಅದರ ಕ್ರಿಯೆಗಳಿಂದ ಸಂಪೂರ್ಣವಾಗಿ ಬಿಡಿಸಿಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ಅದೇ ಸ್ಥಿತಿ ಇರುತ್ತದೆ. ಅವನು ಮುಕ್ತನಾಗುವುದಿಲ್ಲ. ಹಾಗಾದರೆ ಪುರುಷನು ಅಂದರೆ ವ್ಯಕ್ತಿಯು ತಾನು ಕರ್ತೃವಲ್ಲ. ತಾನು ಮಾಡುವ ಕೆಲಸಗಳೆಲ್ಲವೂ ಪ್ರಕೃತಿಯದು, ತಾನು ಮೂಲತಃ ನಿಷ್ಕ್ರಿಯನು ಎಂದು ಭಾವಿಸಿದರೆ, ಆತ್ಮಾನಂ ಅಕರ್ತಾರಮ್ (13.30) ಅಂಥ ಸ್ಥಿತಿ ಪ್ರಾಪ್ತವಾಗಲಾರದೇ? ಎಂದು ಗೀತೆ ಕೇಳುತ್ತದೆ. ಸಾಂಖ್ಯರ ಪ್ರಕಾರ ಪುರುಷನು ಪ್ರಕೃತಿಯ ಕಾರ್ಯಗಳಿಗೆ ಸಮ್ಮತಿ ನೀಡುವವನು, 'ಅನುಮತಿ' ಕೊಡುವವನು, ಕಾರ್ಯವೆಲ್ಲವೂ ಪ್ರಕೃತಿಯದೇ; ಪುರುಷನು ಕೇವಲ ಸಾಕ್ಷಿ ಮಾತ್ರ, ಪೋಷಕ ಮಾತ್ರ; ಅವನು ಆಳುವವನೂ ಅಲ್ಲ, ವಿಶ್ವಾತ್ಮಕ ಈಶ್ವರನ ಕ್ರಿಯಾಶೀಲ ಅವನಲ್ಲ. ಅವನು ಕೇವಲ ನೋಡುವ, ವೀಕ್ಷಿಸುವ ಮತ್ತು ಸಮ್ಮತಿ ನೀಡುವ ತತ್ತ್ವ ಮಾತ್ರ. ನಾಟಕವನ್ನು ನೋಡುವ ಪ್ರೇಕ್ಷಕನ ತರಹ ಅವನ ಪಾತ್ರ. ಈ ನಾಟಕದ ಯಜಮಾನನಲ್ಲ. ಕೇವಲ ಪ್ರೇಕ್ಷಕ. ಅದರ ಸೂತ್ರಧಾರನಲ್ಲ, ಅದರ ರಚನಾಕಾರನೂ ಅಲ್ಲ. ಹೀಗಿರುವಾಗ ಅವನು ತನ್ನ ಸಮ್ಮತಿಯನ್ನು ಹಿಂತೆಗೆದುಕೊಂಡುಬಿಟ್ಟರೆ, ಆ ನಾಟಕ ನಡೆದು, ಅದರ ಮಾಯಾಜಾಲದಲ್ಲಿ ತಾನು ಸಿಲುಕಿ ಒಂದು ಪಾತ್ರವಾಗಿರಲು ಅಥವಾ ಪ್ರೇಕ್ಷಕನಾಗಿರಲು ಒಪ್ಪದಿದ್ದರೆ, ಆಗ ಅವನು ಆ ನಾಟಕದ ಪೋಷಕನೂ ಆಗುವುದಿಲ್ಲ. ಪ್ರೇಕ್ಷಕನೂ ಆಗುವುದಿಲ್ಲ. ನಾಟಕ ನಿಂತೇ ಹೋಗುವ ಸ್ಥಿತಿ ಬರುವುದು. ಏಕೆಂದರೆ ಸಾಕ್ಷಿಯಾಗಿ ನಿಂತು ನೋಡುವ ಪುರುಷನ ಸಲುವಾಗಿಯೇ ಪ್ರಕೃತಿಯು ಪ್ರಪಂಚದಾಟವನ್ನು ನಿಯೋಜಿಸಿದೆ, ಅವನ ಮನರಂಜನೆಗಾಗಿಯೇ ಇದನ್ನೆಲ್ಲ ಮಾಡುತ್ತದೆ. ಪುರುಷನ ಬೆಂಬಲವಿಲ್ಲದೇ ಪ್ರಕೃತಿ ಏನೂ ಮಾಡುವುದಿಲ್ಲ. ಸಾಂಖ್ಯರ ಈ ವಾದವು ಗೀತೆಯ ಸಿದ್ಧಾಂತಕ್ಕಿಂತ ಭಿನ್ನವಾಗಿದೆ. ಪ್ರಕೃತಿ ಮತ್ತು ಪುರುಷರ ಸಂಬಂಧವನ್ನು ಗೀತೆಯು ಈ ರೀತಿ ವ್ಯಾಖ್ಯಾನಿಸುವುದಿಲ್ಲ. ಸಾಂಖ್ಯರ ವಾದದ

ಪ್ರಕಾರ ಕರ್ಮಗಳು ಹಾಗೂ ಕರ್ಮ – ಪ್ರಪಂಚವೇ ನಿಂತು ಹೋದರೆ, ಗೀತೆಯ ಪ್ರಕಾರ ಸ್ವಾರ್ಥರಹಿತ, ಇಷ್ಟಾನಿಷ್ಟರಹಿತ ದಿವ್ಯ ಕರ್ಮಗಳ ಪರಂಪರೆ ನಿಲ್ಲುವುದಿಲ್ಲ, ಮುಂದುವರೆಯುತ್ತದೆ. ಸಾಂಖ್ಯರ ಪ್ರಕಾರ ಪುರುಷ ಮತ್ತು ಪ್ರಕೃತಿ ಎರಡೂ ಭಿನ್ನ ಭಿನ್ನ ಅಸ್ತಿತ್ವವುಳ್ಳವುಗಳು, ಅದು ದ್ವೈತದ ಪರಿಕಲ್ಪನೆ. ಆದರೆ ಗೀತೆಯಲ್ಲಿ ಹಾಗಲ್ಲ, ಅವೆರಡೂ ಏಕೈಕ ಸದ್ ವಸ್ತುವಿನ ಎರಡು ಮುಖಗಳು ಅಥವಾ ಆಯಾಮಗಳು ಎಂದು ಗೀತೆ ಹೇಳುತ್ತದೆ. ಪುರುಷನು ಪ್ರಕೃತಿಯ ಕೆಲಸಗಳ 'ಅನುಮಂತಾ' ಮಾತ್ರ ಅಲ್ಲ ಅದರ ಸ್ವಾಮಿಯೂ ಹೌದು, ಅವನು ಪ್ರಕೃತಿ ಈಶ್ವರ ಪ್ರಕೃತಿಯ ನಾನಾ ವಿಧ ಕಾರ್ಯಗಳ ಮೂಲಕ ಜಗತ್ತನ್ನು ಅನುಭವಿಸುವವನು. ಪ್ರಕೃತಿಯ ದೈವೀ ಸಂಕಲ್ಪ ಹಾಗೂ ಜ್ಞಾನದ ಮೂಲಕ ಪುರುಷನ ಅನುಮತಿಯಿಂದ, ಅವನ ಸಹಜ ಸಾನಿಧ್ಯದಲ್ಲಿ, ಅವನಲ್ಲಿ, ಅವನ ಅಸ್ತಿತ್ವದ ನಿಯಮಗಳ ಪ್ರಕಾರ ಹಾಗೂ ಅವನಲ್ಲಿ ಇರುವ ಪ್ರಜ್ಞಾಯುಕ್ತ ಇಚ್ಛೆಯ ಪ್ರಕಾರ ನಡೆಯುವ ಎಲ್ಲ ಕ್ರಿಯೆಗಳನ್ನು ನಿಜವಾಗಿ ಅನುಭವಿಸುವವನು ಅವನೇ. ಆದ್ದರಿಂದ ಈ ದೈವೀ ಸತ್ತೆಯ (ದಿವ್ಯ ಪುರುಷನ) ಇರುವಿಕೆಯನ್ನು ತಿಳಿದುಕೊಳ್ಳುವುದು (know) ಅದಕ್ಕೆ ಪ್ರತಿಕ್ರಯಿಸುವುದು (respond) ಹಾಗೂ ಪರಮಾತ್ಮನ ಸ್ವಭಾವದಲ್ಲಿ, ಪ್ರಕೃತಿಯಲ್ಲಿ ಜೀವಿಸುವುದೇ ಆತ್ಮನ (ಜೀವಿಯ) ಉದ್ದೇಶ. ಅವನು ತನ್ನ ಅಹಮಿಕೆ ಕಳೆದುಕೊಂಡು, ಅದರ ಕಾರ್ಯಗಳಿಂದ ಬಿಡುಗಡೆ ಹೊಂದಿ, ಪರಮಾತ್ಮ ಪ್ರಜ್ಞೆಯಲ್ಲಿ ವಾಸ ಮಾಡುವುದೇ ನಿಜವಾದ ಏಕೈಕ ಉದ್ದೇಶವಾಗಿದೆ. ಆಗ ಅವನು ನಿಮ್ನ ಪ್ರಕೃತಿಯ ಗುಣಗಳ ಅಧಿಪತ್ಯದಿಂದ ಮುಕ್ತನಾಗಿ ಉನ್ನತ ಪ್ರಕೃತಿಯ ಸ್ತರಕ್ಕೇರಿ ದೈವೀ ಪ್ರಕೃತಿಯಲ್ಲಿ ಸ್ಥಿತನಾಗುತ್ತಾನೆ.

ಈ ಉನ್ನತ ಪ್ರಕೃತಿಗೇರುವ ಆರೋಹಣವು ಆತ್ಮ (soul) ಮತ್ತು ಪ್ರಕೃತಿ (nature) ಇವುಗಳ ಸಂಕೀರ್ಣ ಸಂಬಂಧವನ್ನವಲಂಬಿಸಿ ನಿರ್ಧಾರಿತವಾಗುತ್ತದೆ. ಇದು ಗೀತೆಯ ತ್ರಿವಿಧ ಪುರುಷರ ಪರಿಕಲ್ಪನೆಯ ಮೇಲೆ ಆಧಾರಿತವಾಗಿದೆ. ಪ್ರಕೃತಿಯ ಬದಲಾವಣೆಗಳ ಜೊತೆಗೆ, ಸಂಭೂತಿಯ (becomings) ಜೊತೆಗೆ ತಾನೂ ತ್ವರಿತವಾಗಿ ಬದಲಾಗುತ್ತ, ವಿಕಾರ ಹೊಂದುತ್ತ (ವಿಕಾರ ಅಂದರೆ ವಿಕೃತ, ಕೆಟ್ಟ ಅಂತ ಅರ್ಥಮಾಡಬಾರದು; ವಿಕಾರ ಅಂದರೆ ಇರುವ ಆಕಾರವನ್ನು ಕಳೆದುಕೊಳ್ಳುವುದು (ವಿಗತ ಆಕಾರ) ಹಾಗೂ ಹೊಸ ಆಕಾರ ಪಡೆಯುವುದು (ವಿಶೇಷ ಆಕಾರ) ಎಂದರ್ಥ, ಪ್ರಕೃತಿಯ ಕ್ರಿಯೆಯಲ್ಲಿ ಭಾಗವಹಿಸಿ

ಪ್ರಕೃತಿಗನುಗುಣವಾಗಿ ಬದಲಾಗುತ್ತ, ಬೆಳೆಯುತ್ತ, ನಾಶಹೊಂದುತ್ತ ಹೋಗುವುದು. ಇಂಥ ಪುರುಷನನ್ನು ಕ್ಷರ ಎಂದು ಕರೆಯುತ್ತಾರೆ. ಪುರುಷನು ಮಾಡುವ ಕರ್ಮಗಳ ಮುಖಾಂತರ ಅವನ ಬೆಳವಣಿಗೆಯಲ್ಲಿ ಅವನ ವ್ಯಕ್ತಿತ್ವ, ಚೇತನ ಎಲ್ಲದರಲ್ಲೂ ಬದಲಾವಣೆ ಆಗುವುದು. ಇಲ್ಲಿ ಪ್ರಕೃತಿಯು ಕೂಡ ಕ್ಷರವಾಗಿರುತ್ತದೆ. ಕಾಲಾನುಸಾರ ಬದಲಾವಣೆ ಹೊಂದುತ್ತ, ಸಂಭೂತಿಯ ಲಕ್ಷ್ಯದಲ್ಲಿ ಬೆಳವಣಿಗೆ ಹೊಂದುತ್ತ ಹೋಗುತ್ತದೆ. ಆದರೆ ಈ ಪ್ರಕೃತಿಯು ಪರಾತ್ಪರ ಪುರುಷನ ಕ್ರಿಯಾಶಕ್ತಿ ಮಾತ್ರ; ಪುರುಷನೇನಿರುವುನೋ ಪ್ರಕೃತಿ ಕೂಡ ಅದೇ ಆಗಬಲ್ಲದು, ಪುರುಷನ ಸಂಭೂತಿಯ ಸಾಧ್ಯತೆಗಳ ಮೇಲೆ ಪ್ರಕೃತಿಯ ಪರಿವರ್ತನೆ ಆಗುವುದು. ಹೀಗೂ ಹೇಳಬಹುದು, ಪುರುಷನ ಸಂಭೂತಿಯನ್ನು ಕಾರ್ಯಗತಗೊಳಿಸುವ ಶಕ್ತಿಯನ್ನೇ ಪ್ರಕೃತಿ ಎಂದು ಹೇಳಬಹುದು. ಪ್ರಕೃತಿ ಕರ್ಮವು ನಿಗದಿತವಾಗುವುದು ಅದರ ಕರ್ಮಗಳ ಮೇಲಿಂದ. ಅದರದೇ ಆದ ಸಹಜ ಸ್ವಭಾವ, ಆತ್ಮದ (ಜೀವದ) ಸ್ವಸಂಭೂತಿಯ ಸಾಧ್ಯತೆಯ ಮೇಲೆ ಮಾತ್ರ ಅದು ಕೆಲಸ ಮಾಡಬಲ್ಲದು. ಆದರೆ ಅದು ಸಂಭೂತಿಯ ಅಂದರೆ ಮುಂದೆ ಏನಾಗಬೇಕಿದೆಯೋ ಅದರ ಕಾರ್ಯಗತಗೊಳಿಸುವ ಕ್ರಿಯಾಶಕ್ತಿಯಾಗಿರುವುದರಿಂದ, ಕಾರ್ಯವೇ ಪ್ರಕೃತಿಯ ನಿರ್ಧಾರಕ ತತ್ತ್ವವೆಂದು ಭಾಸವಾಗುವುದು. ಸದ್ಯಕ್ಕೆ ನಾವೇನಿದ್ದೇವೆಯೋ ಅದರಂತೆಯೇ ಕಾರ್ಯ ಮಾಡುತ್ತೇವೆ ಮತ್ತು ಆ ಕಾರ್ಯದ ಮೂಲಕವೇ ನಾವು ಬೆಳೆಯುತ್ತೇವೆ, ನಾವು ಏನಾಗಲಿದ್ದೇವೆ ಎನ್ನುವುದೆಲ್ಲವೂ ನಾವು ಏನಿದ್ದೇವೆ ಮತ್ತು ಏನು ಮಾಡುತ್ತೇವೆ ಅನ್ನುವುದರ ಮೇಲೆ ಅವಲಂಬಿಸಿರುತ್ತದೆ. ಪ್ರಕೃತಿ ಅಂದರೆ ಕೆಲಸ, ಕ್ರಿಯಾಶಕ್ತಿ, ಪ್ರಕೃತಿ ಅಂದರೆ ಬದಲಾವಣೆ, ರೂಪಾಂತರಣ, ಸಂಭೂತಿ, ಪ್ರಕೃತಿಯು ಈ ಎಲ್ಲವನ್ನೂ ಮಾಡುವಂತ ಶಕ್ತಿ. ಆದರೆ ಇದೆಲ್ಲದರ ಹಿಂದಿರುವ ಆತ್ಮ ಅಥವಾ ಪುರುಷನೇ ಎಲ್ಲವನ್ನೂ ಬಲ್ಲ ಸರ್ವಜ್ಞ ಪ್ರಜ್ಞಾ ಸತ್ತೆ, ಕ್ರಿಯಾಶಕ್ತಿಯ ಮೂಲ ಆತ್ಮಸತ್ತೆಯೇ ಅದು ಉತ್ಪನ್ನವಾಗುವುದು ಆತ್ಮಸತ್ತೆಯಿಂದಲೇ, ಆ ಆತ್ಮಸತ್ತೆಯ ಪ್ರಕಾಶಮಯವಾದ ಪಜ್ಞಾ ದ್ರವ್ಯದಿಂದಲೇ ಪ್ರಕೃತಿಯು ಸಂಕಲ್ಪವನ್ನು ಸ್ವೀಕರಿಸುತ್ತದೆ ಮತ್ತು ಅದರ ಬದಲಾವಣೆಗಳನ್ನೇ ಪ್ರಕೃತಿಯು ಕಾರ್ಯ ರೂಪದಲ್ಲಿ ತಂದು ಪ್ರಕಟಿಸುತ್ತದೆ ಮತ್ತು ಆ ಆತ್ಮಸತ್ತೆ ಅಥವಾ ಪುರುಷನು ಏಕ ಮತ್ತು ಅನೇಕ. ಆ ಏಕ ಪ್ರಾಣಸತ್ತೆಯಿಂದಲೇ ಸಮಸ್ತ ಪ್ರಾಣಗಳು (ಪ್ರಾಣಿಗಳು) ಎದಿಸಿವೆ, ಜನಿಸಿವೆ; ಆ ಏಕ ತತ್ತ್ವವೇ ಸಮಸ್ತ ವಿಶ್ವಾತ್ಮಕ ಅಸ್ತಿತ್ವವಾಗಿದೆ ಮತ್ತು 'ಸರ್ವಭೂತಾನಿ' ಏಕೆಂದರೆ ಇದೆಲ್ಲವೂ ಒಂದೇ ಆಗಿದೆ. ಎಷ್ಟೇ ಅಸಂಖ್ಯಾತ ಪುರುಷರಿರಲಿ

ಅವರೆಲ್ಲರೂ ಮೂಲತಃ ಒಂದೇ, ಒಂದೇ ಪುರುಷನ ಅನೇಕ ರೂಪಗಳು – ಆದರೆ ಅಹಮಿಕೆಯ ಅರಿವಿನಿಂದಾಗಿ ಪ್ರಕೃತಿಯಲ್ಲಿ ಭೇದ ಭಾವ ಕಂಡುಬರುತ್ತದೆ; ಅಹಂ ಅನ್ನುವುದು ಪ್ರಕೃತಿಯ ಕಾರ್ಯದಲ್ಲಿನ ಒಂದು ಅಂಶ ಅಥವಾ ಒಂದು ಭಾಗ. ಅದು ಮನಸ್ಸನ್ನು ಪ್ರಭಾವಿಸಿ ಆತ್ಮ ಪ್ರಜ್ಞೆಯು (ಜೀವಾತ್ಮ) ಸೀಮಿತವಾದ ಆ ಕ್ಷಣದ ಸಂಭೂತಿಯ ಜೊತೆ ಗುರುತಿಸಿಕೊಳ್ಳುವಂತೆ ಮಾಡುತ್ತದೆ. ನಿರ್ದಿಷ್ಟ ಸ್ಥಳ–ಕಾಲಗಳಲ್ಲಿ ಕ್ರಿಯಾಶೀಲವಾಗಿರುವ ಪ್ರಜ್ಞೆಯ ಜೊತೆ ಮಾತ್ರ ಗುರುತಿಸಿಕೊಳ್ಳುವಂತೆ ಮಾಡುತ್ತದೆ ಹಾಗೂ ಅದರ ಗತಕಾಲದ ಕರ್ಮಗಳ ಪರಿಣಾಮದ ಜೊತೆ (ಫಲದ ಜೊತೆ) ಕ್ಷಣ ಕ್ಷಣಕ್ಕೂ ಹೊಂದಿಕೊಳ್ಳುವಂತೆ, ಗುರುತಿಸಿಕೊಳ್ಳುವಂತೆ ಮಾಡುತ್ತದೆ. ಪ್ರಕೃತಿಯ ಪ್ರಾಂತದಲ್ಲಿಯೇ ಎಲ್ಲ ಪ್ರಾಣಿಗಳು, ಎಲ್ಲ ಜೀವಗಳು ಎಲ್ಲ ವಸ್ತುಗಳು ಒಂದೇ ಆಗಿವೆ, ಒಂದೇ ಮಹಾಜೀವದ ಅಂಗ ಭೂತಗಳು ಎಂಬುದನ್ನು ಸ್ವಲ್ಪಮಟ್ಟಿಗೆ ಸಾಕ್ಷಾತ್ಕರಿಸಿಕೊಳ್ಳಲು ಸಾಧ್ಯವಿದೆ. ವಿಶ್ವಾತ್ಮನೇ ವಿಶ್ವ ಪ್ರಕೃತಿಯೆ ಎಲ್ಲ ವ್ಯವಹಾರಗಳಲ್ಲಿ ವ್ಯಕ್ತರೂಪ ತಾಳುತ್ತಾನೆ. ಪ್ರಕೃತಿಯು ಈ ವಿಶ್ವಾತ್ಮನಿಗೆ ವ್ಯಕ್ತರೂಪ ನೀಡುತ್ತದೆ ಎಂಬ ಅನುಭೂತಿಯನ್ನು ಪ್ರಕೃತಿಯ ಸ್ತರದಲ್ಲಿ ಅನುಭವ ಪಡೆಯುವುದು ಅಸಾಧ್ಯವೇನಲ್ಲ. ಆದರೆ ಇದು ನಮ್ಮ ನಿಜ ಆತ್ಮನ ದರ್ಶನವಲ್ಲ. ಇಲ್ಲಿ ವಿಶ್ವಾತ್ಮಕ ಸಂಭೂತಿಯ ಅರಿವಾಗುತ್ತದೆ. ಇದೇನೂ ಅನೃತ ಜ್ಞಾನವಲ್ಲ. ಆದರೆ ಇದರಿಂದ ನಮ್ಮ ಆತ್ಮ ಸಾಕ್ಷಾತ್ಕಾರವಾಗುವುದಿಲ್ಲ. ನಮ್ಮ ನಿಜವಾದ ಆತ್ಮವು ವಿಶ್ವರೂಪಕ್ಕಿಂತಲೂ ಭಿನ್ನವಾಗಿದೆ. ಅದಕ್ಕಿಂತಲೂ ಅಧಿಕವಾದದ್ದಾಗಿದೆ, ಅದು ವಿಶ್ವರೂಪದ ಆಚೆಗಿದೆ.

(ಸಶೇಷ)

## ಶ್ರೀ ಅರವಿಂದರ
## 'ಪೂರ್ಣಯೋಗ ಪಥ'

**– ಶ್ರೀ ಪಿ.ಕೆ. ನಂದೀಶ, ತುಮಕೂರು**

**"ವಿಶ್ವದಲ್ಲಿ ತನ್ನ ಮೂಲದಿಂದ ಬೇರ್ಪಟ್ಟ ಅಂಶವು ಮತ್ತೆ ತನ್ನ ಮೂಲದೊಡನೆ ಒಂದಾಗುವದೇ ಯೋಗವು"**

**– ಶ್ರೀ ಅರವಿಂದರು**

(ಶ್ರೀ ಅರವಿಂದರ 'ಯೋಗ ಸಮನ್ವಯ'ದ ಆಂತರ್ಯದ ಕುರಿತು ಶ್ರೀ ನಂದೀಶ ಅವರು ಸರಣಿ ಉಪನ್ಯಾಸಗಳನ್ನು ನೀಡಲಿದ್ದಾರೆ. ಪ್ರಥಮ ಹೆಜ್ಜೆಯಲ್ಲಿ ಈ 'ಯೋಗ ಸಮನ್ವಯ'ದ ಪ್ರವೇಶದ ಕುರಿತು ನೀಡಿದ ಉಪನ್ಯಾಸದ ಸಾರ–ಸಂಗ್ರಹ ಇಲ್ಲಿದೆ. – ಸಂಪಾದಕ)

### ಪ್ರಥಮ ಹೆಜ್ಜೆ

ನಾವು ಮಾನವ ಜೀವಿಗಳು, ಸೃಷ್ಟಿ ಶೈಲದ ಶಿಖರಗಾಮಿಗಳು, ಈ ಪ್ರಪಂಚದಲ್ಲಿ ನಮಗಿಂತ ಉನ್ನತವಾದ ಜೀವಿಗಳೇ ಇಲ್ಲ ಎಂದು ಭಾವಿಸಲು ಕಾರಣವಿದೆ. ನಾವು ಸಾಧಿಸಿರುವ ನಾಗರೀಕ ವೈಜ್ಞಾನಿಕ ಜೀವನ ಅಮೋಘವಾದುದು. ಆದರೆ ಅವನ ಸೃಷ್ಟಿಯಾದ ವಿಜ್ಞಾನ ತಂತ್ರ ಜ್ಞಾನವು ಅವನಿಗೆ ನೆಮ್ಮದಿ, ಶಾಂತಿ, ಆನಂದಕ್ಕಿಂತ ಅಧಿಕ ದುಃಖ ಆತಂಕ ಸೃಷ್ಟಿಸಿರುವುದು ನಾವಿಂದು ಮೂಕ ಸಾಕ್ಷಿಗಳ ಹಾಗೆ ಕಾಣುತ್ತಿದ್ದೇವೆ.

ಇದಕ್ಕೆ ಕಾರಣ ಮಾನವನ 'ಅಜ್ಞಾನ' ಅಥವಾ ಅಪೂರ್ಣ ಜ್ಞಾನ. ಪ್ರಸ್ತುತ ಅವನ ಚಿಂತನಾ ಶಕ್ತಿಯ ಕಾರ್ಯ ವಿಧಾನವೇ ಅವನಿಗೆ ತಿಳಿದಿಲ್ಲ, ಜೀವನದ ಗುರಿ ಏನು ಎಂಬುದನ್ನರಿಯದ, ಕೇವಲ ಇಂದ್ರಿಯದ ಸುಖ ಸಾಧನಗಳತ್ತ ಅವನ ಚಿತ್ತ ಹರಿದಿದೆ ಸದಾ, ಹಾಗಾಗಿ ಶಾಶ್ವತ ಸುಖದ ಹಂಬಲ ಕೇವಲ ಹಂಬಲವಾಗಿದೆ. ಬದಲಾಗಿ ನಶ್ವರ ಐಹಿಕದ ಸಮೃದ್ಧತೆ ಅವನಿಗೆ ಭಯ ಆತಂಕ ನಿರಾಸೆಗೆ ಕಾರಣವಾಗಿದೆ.

ಮಾನವ ಚಿಂತಿಸಬಲ್ಲ ಜೀವಿ, ಅವನ ಅಂತರಂಗದ ಬಗೆಗೆ, ಅವನ ಬುದ್ಧಿಯ ಬಗೆಗೆ ಅವನಿಗೆ ತಿಳಿದಿರುವುದು ಕಡಿಮೆ. 'ಪ್ರಜ್ಞಾಪೂರ್ವಕ'ವಾಗಿ ಆಲೋಚನೆ ನಡೆಸಿದಲ್ಲಿ ವಿಕಾಸದ 'ಮಧ್ಯಂತರ' ಜೀವಿಯಾಗಿ ಮಾನವ ಗೋಚರಿಸುತ್ತಾನೆ. ಪ್ರಕೃತಿ ಈಗಿನ ಮಾನವನಲ್ಲಿ ಸುಧಾರಣೆ ಬಯಸುತ್ತದೆ, ಅವನ ಮೂಲಕ ಮುಂದಿನ ಹಂತದ

ಜೀವಿಯ ಸೃಷ್ಟಿಸಲು ಅದು ಯೋಜಿಸಿರುವುದು, 'ಧ್ಯಾನಿಸಿ' ಭಾವಿಸಿದಾಗ ತಿಳಿಯುತ್ತದೆ. ಅವನಲ್ಲಿನ ಅಪರಿಪೂರ್ಣ ಜೀವಿಯನ್ನು ಪ್ರಕೃತಿ ಪರಿಪೂರ್ಣಗೊಳಿಸಲು ಹಾತೊರೆದಿದೆ, ಹಾಗಾಗಿ ಜ್ಞಾನ, ಪ್ರೀತಿ, ಸೌಂದರ್ಯ, ಸಾಮರಸ್ಯ, ಆನಂದ ಇವುಗಳ ಮೂಲಕ ಅವನ ದುಃಖ ಆತಂಕ ಅಜ್ಞಾನಗಳನ್ನು ಪರಿವರ್ತಿಸಲು ಅದು ಕಾರ್ಯ ಮಾಡುತ್ತಿದೆ.

ಮಾನವರಲ್ಲಿ ಇವೆಲ್ಲವೂ ಅಂತರಂಗದಲ್ಲಿ ಸದ್ದಿಲ್ಲದೆ ನಡೆಯುತ್ತಿದೆ, ಇದರ ಅರಿವು (ಕೆಲವರಿಗೆ) ಅಂತರ್‌ಮುಖಿಗಳಿಗೆ ವೇದ್ಯವಾಗುತ್ತಿದೆ, ಅಂತರಂಗದ ಆಳದಲ್ಲಿ ನಮ್ಮ ಪರಮೋಚ್ಛ ಸ್ಥಿತಿ ನಮಗಾಗಿ ಕಾತರಿಸಿದೆ. ಇಂದ್ರಿಯಗಳಿಂದ ಹಿಂದೆ ಹರಿದು ಆಂತರ್ಯದ ಕಡೆಗೆ ಗಮನ ಹರಿಸಿದಾಗ ಅನಂತ ಸುಖದ ಅವಿಚ್ಛಿನ್ನ ಝರಿ ನಿರಂತರ ಅಲ್ಲಿ ಸರಿದಿದೆ ಎಂಬುದು ತಿಳಿದು ಬರುತ್ತದೆ.

ಶ್ರೀ ಅರವಿಂದರ ಯೋಗ ಸಮನ್ವಯ ಗ್ರಂಥದಲ್ಲಿ ಅವರ ಯೌಗಿಕ ಸಿದ್ಧಿಯ ಕುರಿತು ಆಳವಾದ, ಗಹನವಾದ, ಭವ್ಯತೆಯಿಂದ ಕೂಡಿದ ಅನುಭೂತಿ ತತ್ತ್ವಗಳ ಸಮೂಹವೇ ತುಂಬಿದೆ.

ದೈವೀ ದಿವ್ಯವಾದ "ಕ್ಷರ" ಮತ್ತು "ಅಕ್ಷರ" ಮತ್ತು ಜಡ ಮತ್ತು "ಚೇತನ" ಎರಡೂ ಅಸ್ಥಿತ್ವದ ಸಾಮರಸ್ಯವನ್ನು ಈ ಗ್ರಂಥದ ವಿಸ್ತಾರ ವರ್ಣನೆ ಮುಂದಿಡುತ್ತದೆ. ಮಹಾಶಕ್ತಿ, ಮಹಾಕಾಳಿ, ಮಾಹೇಶ್ವರಿ, ಮಹಾಸರಸ್ವತಿ ಎಂಬ ಆದ್ಯಾ ಶಕ್ತಿಯ ನಾಲ್ಕು ಪ್ರಮುಖ ಆಯಾಮಗಳ ಮೂಲಕ ಬಹಿರಂಗದ ಪ್ರಾಪಂಚಿಕ ವ್ಯವಹಾರ ನಿರಂತರ ಸಾಗಿರುವ ಬಗೆಯನ್ನು ಅವರು ದರ್ಶಿಸಿದ್ದಾರೆ.

ಸೃಷ್ಟಿಯ ಉದ್ದೇಶ ಅದರ ರಹಸ್ಯ ಕಾರ್ಯಾಚರಣೆಯ ಕಾರ್ಯ ವಿಧಾನ ನಮ್ಮ ಇಡೀ ಅಸ್ತಿತ್ವವನ್ನು ನಿಯಂತ್ರಿಸುವ ರೀತಿ ನೀತಿಗಳನ್ನು ಸಹಿತ ನಿದರ್ಶಿಸಿದ್ದಾರೆ, ಹಾಗಾಗಿ ಅವರು "ಯೋಗ ಸಮನ್ವಯ" ಅಥವಾ ಪೂರ್ಣಯೋಗ ಎಂದು ಕರೆದಿದ್ದಾರೆ.

ಅವರ ಪೂರ್ಣಯೋಗವು ಸೃಷ್ಟಿಯ ಎಲ್ಲಾ ಮಾರ್ಗ ಮಗ್ಗುಲುಗಳನ್ನು ವಿವೇಚಿಸುತ್ತದೆ. ಪ್ರಜ್ಞೆಯ ವಿಕಸನದ ಮೂಲಕ ಬೆಳಕು ಮತ್ತು ಶಕ್ತಿ ಜ್ಯೋತಿ ಶಾಂತಿ ಆನಂದಗಳ ನಿರಂತರ ಝರಿ ನಮ್ಮಲ್ಲಿ ಹರಿಯುವಂತೆ ಮಾಡಬಹುದಾಗಿದೆ ಎಂದು ಬೋಧಿಸುತ್ತದೆ.

ನಮ್ಮೊಳಗೂ ದೈವೀ ಸಾನ್ನಿಧ್ಯವಿದೆ, ಅದನ್ನೂ ಪೂರ್ಣಯೋಗಿಯಾಗಿ ತಾವು ಕಂಡುಕೊಂಡ ಶ್ರೀ ಅರವಿಂದರು ಅವರ ಪಥದಲ್ಲಿ ಸಾಗುವ ಸಾಧಕರಿಗೆ ನಿರಂತರ ಮಾರ್ಗದರ್ಶನ ನೀಡಲು ಸೂಕ್ಷ್ಮ ತನುಧಾರಿಯಾಗಿ ಸಹಾಯಕ್ಕೆ ನಿಂತಿದ್ದಾರೆ. ಆ ಗುರುವಿಗೆ ವಿಧೇಯರಾಗಿ, ನತಮಸ್ತಕರಾಗಿ ಸನ್ನಿಧಿಯನ್ನು ಹಂಬಲಿಸದವರಿಗೆ 'ಗುರು'ವಾಗಿ ಮಾರ್ಗದರ್ಶನ ಮಾಡುತ್ತಿದ್ದಾರೆ.

ಶ್ರೀ ಅರವಿಂದರ ಪ್ರಕಾರ 'ಸನಾತನ' ಎಂದು ಹೆಸರಿಸಬಹುದಾದ ದೈವಾಂಶ ಒಂದು ನಿರಂತರ ಸರ್ವ ಸೃಷ್ಟಿಯ ಮೂಲದಲ್ಲಿ ಇದ್ದು ಕಾರ್ಯಗೈದಿದೆ. ಅಗತ್ಯ ಬಂದಾಗಲೆಲ್ಲ ಅದು ಪ್ರಕಟಿತಗೊಂಡು ಮಾನವ ಬದುಕಿನ ಮತ್ತು ಸೃಷ್ಟಿ ವ್ಯಾಪಾರದ ರೂಪುರೇಷೆಗಳನ್ನು ಬದಲಿಸಬಲ್ಲದು ಎಂದೂ ಅದು ಸದ್ಯದ ಸೃಷ್ಟಿಯಲ್ಲಿ ಪರಿಪೂರ್ಣಗೊಂಡ ಜೀವಿಯ ಸೃಷ್ಟಿಗಾಗಿ ಕಾರ್ಯಗೈದಿದೆ ಎಂದೂ, ಮುಂದೆ 'ದೈವೀ ದಿವ್ಯತೆ'ಯ ಜೀವಿಗಳು ಭೂ ಮಂಡಲದಲ್ಲಿ ಬರಲು 'ಸನಾತನ' ಅಂಶವು ಕೆಲಸದಲ್ಲಿ ತೊಡಗಿದೆ ಎಂದು ಅವರು ಘೋಷಿಸಿದ್ದಾರೆ.

ಈ ಹಿಂದೆ ದಶಾವತಾರದ ಪರಿಕಲ್ಪನೆ ಇದ್ದು, ಪ್ರಸ್ತುತದಲ್ಲಿ ಆತ್ಯಂತಿಕವಾಗಿ "ದೈವೀ ಜೀವನ"ದ ಸಾಧ್ಯತೆಯನ್ನು ಈ ಭೂತಲದಲ್ಲಿ ಕಾಣಬಹುದು. ಅದಕ್ಕಾಗಿ ಪ್ರಜ್ಞೆಯ ವಿಕಸನದ ಕಡೆಗೆ ನಾವು ಗಮನ ಹರಿಸಬೇಕು ಎಂದು ಅವರು ಕರೆ ನೀಡಿದ್ದಾರೆ.

ಪ್ರಜ್ಞಾ ವಿಕಾಸದ ಮೂಲಕ ಮಾನವನಲ್ಲಿ ವಿಶ್ವ ಚೈತನ್ಯವು ಹರಿದು ಅವನ ಮೂಲಕವೇ ಈ ಲೋಕದ 'ಪರಿವರ್ತನೆ'ಗೆ ಕಾರ್ಯವೆಸಗಲು ಬಯಸುತ್ತಿದೆ ಎಂದಿದ್ದಾರೆ.

ಶ್ರೀ ಅರವಿಂದರ ಯೋಗವು ಭಗವಂತನಿಗಾಗಿ ಇದೆ, ಮಾನವರ ಕ್ಷುದ್ರ ಬಾಳನ್ನು ಅರಿವಿನ ಬಾಳಾಗಿಸಿ ಶಾಂತಿ, ಆನಂದ ಜ್ಯೋತಿಯ ಪರಿಪೂರ್ಣ ಬಾಳನ್ನಾಗಿ ಪರಿವರ್ತಿಸಲು ಯೋಗ ಮಾರ್ಗವನ್ನು ಕಡೆದು ಮೂಡಿಸಿದೆ ಅವರ "ದಿವ್ಯಜೀವನ" ಎಂಬ ಗ್ರಂಥ.

'ಅಪರಿಪೂರ್ಣತೆ'ಯಿಂದಾಗಿ ಮಾನವರು 'ತರ್ಕ' 'ವಿತಂಡ ವಾದ'ದಲ್ಲಿ ತೊಡಗುತ್ತಾರೆ, ಎಲ್ಲೆಡೆ 'ದೇವತಾ ಶಕ್ತಿ'ಯೇ ಗೋಚರಿಸುತ್ತದೆ ಪರಿಪೂರ್ಣ ದೃಷ್ಟಿಗೆ, ಎಲ್ಲೆಡೆ ಇರುವ ಈಶ್ವರೀ ಶಕ್ತಿ ನಮ್ಮಲ್ಲಿ ಇಲ್ಲವೆ ಎಂದರೆ ಇದೆ. ಆದರೆ ಹೇಗೆ ವಿದ್ಯುತ್ ತಂತಿಗಳ ಮೂಲಕ ಹರಿಯಬಲ್ಲದೋ ಹಾಗೆ ಎಲ್ಲಡೆ ಇರುವ ಶಕ್ತಿ ನಮ್ಮಲ್ಲಿ ಹರಿಯಲು ನಾವು 'ವಾಹಕ' ತಂತಿಯ ಹಾಗೆ ರೋಧಮುಕ್ತರಾಗಬೇಕಾಗಿದೆ, ಇಲ್ಲಿ 'ರೋಧ' ಎಂದರೆ 'ಅಹಂ' ಪ್ರಜ್ಞೆ ಅದು ಸಾಧನೆಗೆ ಪೂರಕವಾದ ಉಪಕರಣವಾಗಲು ಸಾಧ್ಯವಿದೆ.

Ego was the helper and Ego is the bar. ಎಂದಿದ್ದಾರೆ ಶ್ರೀ ಅರವಿಂದರು.

ವಿದ್ಯುತ್ ಎಲ್ಲಡೆ ಪ್ರಕೃತಿಯಲ್ಲಿ ಅಂತರ್‌ನಿಹಿತವಾಗಿ ಇದ್ದರೂ ಪ್ರಕಟವಾಗಲು ಡೈನಮೋಗಳ ಅಗತ್ಯ ಇರುವ ಹಾಗೆ ಮಹರ್ಷಿಗಳು, ಯೋಗಿಗಳು ಸಾಧನೆಗೆ ತೊಡಗುವವರಿಗೆ ಅಗತ್ಯವಾಗಿ ಬೇಕಾಗಿದ್ದಾರೆ.

ಶ್ರೀಮಾತಾ ಅವರು ಒಂದೆಡೆ ಹೀಗೆ ಹೇಳಿರುತ್ತಾರೆ "ಈ ಭೂಮಿಯ ರಚನೆ"ಯ ಸಂದರ್ಭದಿಂದಲೂ ಎಲ್ಲೆಲ್ಲಿ ಪ್ರೇರಣೆಯ ಕಿರಣ ಗೋಚರಿಸಿದೆಯೋ ಅಲ್ಲೆಲ್ಲಾ ನನ್ನ ಇರವನ್ನು ಕಾಣಬಹುದಾಗಿದೆ ಎಂದೂ, ಪ್ರಕಟವಾಗಿರುವ ಎಲ್ಲದರಲ್ಲಿ ಪರಮೋಚ್ಚ ಪ್ರಭುವಿನ ಅಂಶ ಇರಲು ಸಾಧ್ಯವಿದೆ, ಅವನ ದಿವ್ಯತೆ ಮತ್ತು ಭವ್ಯತೆ ಎಲ್ಲಾ ಕಾಲದಲ್ಲೂ ಎಲ್ಲಾ ದೇಶಗಳಲ್ಲಿ ಎಲ್ಲಾ ನಾಮ ರೂಪಗಳಲ್ಲಿ ಪ್ರಕಟವಾಗಿದೆ. ಭಗವದ್ಗೀತೆಯಲ್ಲೂ ಈ ಅರ್ಥದ ಮಾತು ಶ್ರೀಕೃಷ್ಣನ ಮೂಲಕ ವ್ಯಕ್ತವಾಗಿದೆ.

ಆದರೆ ಮತ್ತೆ ಈಗಲೂ ಈ ಪ್ರಸ್ತುತ ಸಂದರ್ಭದಲ್ಲಿಯೂ ಕೂಡ ಪೂರ್ಣಯೋಗ ಸಾಧಕರ ಶರೀರಗಳಲ್ಲಿ ಪ್ರಕಟವಾಗಲು ದೈವೀ ಶಕ್ತಿಗಳು ನಿರಂತರ ಸಂಭವಿಸುತ್ತಲೇ ಇವೆ. ಆ ಮೂಲಕ ಜ್ಯೋತಿ ಶಾಂತಿ ಆನಂದ ಶಕ್ತಿಗಳು ಈ ಭವದಲ್ಲಿ ಇಳಿದೂ ಇಳಿದು 'ಅಭವ'ದ ಅಂಶಗಳನ್ನು ಸಂಗ್ರಹಗೊಳ್ಳುತ್ತಿವೆ. ಬಾ ಇಲ್ಲಿ ಸಂಭವಿಸು ಇಂದೆನ್ನ ಹೃದಯದಲ್ಲಿ ನಿತ್ಯವೂ ಅವತರಿಪ ಸತ್ಯಾವತಾರ ಎಂಬ ಹಂಬಲದ ಪ್ರಾರ್ಥನೆ ಯಾವ ಹೃದಯದಲ್ಲಿದೆಯೋ ಅಲ್ಲಿ ಈ ದೇವತಾ ಶಕ್ತಿಗಳು ಸಂಭವಿಸುತ್ತವೆ.

ಆ ಶಕ್ತಿ ಜ್ಯೋತಿ ಆನಂದಗಳು ಇಳಿಗಿಳಿಯಲು ಮಾನವನ ಎದೆಯಲ್ಲಿ ಹಾರೈಕೆ ಅಭೀಪ್ಸೆ ನಿರಂತರ ಇರಬೇಕು, ನಂಬಿಕೆ ವಿನಯ, ವಿಧೇಯತೆ ಇರಬೇಕು, ನಮ್ರತೆ ಇರಬೇಕು ಸ್ವೀಕಾರಾನುಕೂಲ ಇರಬೇಕು. ಪ್ರಾಮಾಣಿಕತೆ ಸತ್ಯ ಪ್ರಜ್ಞೆ ಇರಬೇಕು, ಚೇತನ ಸಮಸ್ತವೂ ಸಮರ್ಪಣೆಗೊಂಡಿರಬೇಕು, ಸಾಧನೆಗೆ ವಿರೋಧಿಯಾದ ಎಲ್ಲಾ ಅಂಶಗಳನ್ನು ಸ್ವಾರ್ಥ, ಹಿಂಸೆ, ಕೋಪ, ಮೋಹ, ಮದ, ಮತ್ಸರ, ಕಾಮ ಇವೆಲ್ಲವೂ ರೂಪಾಂತರಗೊಂಡಿರಬೇಕು, ಮಾನವನ ಪಾತ್ರ ಶುದ್ಧವಾಗಿರಬೇಕು.

ತನು, ಮನ, ಬುದ್ಧಿಗಳಲ್ಲಿ ಶುದ್ಧಿಯಾಗಿರಬೇಕು, ದೈಹಿಕ ಪ್ರಾಣಿಕ ಮಾನಸಿಕ ಸತ್ತೆಗಳು ಪರಾಪ್ರಕೃತಿಗೆ ಶರಣಾಗಿರಬೇಕು. ಶರಣಾಗತಿ ಪರಿಪೂರ್ಣಗೊಂಡ ಹಾಗೆಲ್ಲಾ ಪ್ರಗತಿಯೋಗವಿರುತ್ತದೆ ಎಂಬುದು ಗಮನಾರ್ಹ. ಶ್ರೀಮಾತಾರವಿಂದರ ಯೋಗ ಶಕ್ತಿಯು ಪ್ರಪಂಚದ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ರೂಪಗಳಲ್ಲಿ ಕಾರ್ಯಗೈದಿದೆ. ಸಾಧಕ ಎಲ್ಲಿರುವನೋ ಅಲ್ಲಿಯೇ ಶ್ರೀಮಾತಾರವಿಂದರ ಕೃಪೆ ಅವನಿಗೊದಗಲಿದೆ.

ಮಾರ್ಗದಲ್ಲಿನ ತೊಡಕುಗಳನ್ನು ನಿವಾರಿಸಿ ಕೃಪೆಗೈದು ಮುಂದೆ ನಡೆಸಲಿದೆ ಎಂಬುದನ್ನು ಮನಗಾಣಬೇಕಾಗಿದೆ.

ದೈವೀ ಶಕ್ತಿಗಳ ಅವರೋಹಣದಿಂದ ನಮ್ಮ ಇಡೀ ಸತ್ತೆಯಲ್ಲಿ 'ರೂಪಾಂತರಣ' ಪ್ರಕ್ರಿಯೆಯ ಗತಿ ತೀವ್ರಗೊಂಡು ಪರಿಪೂರ್ಣ ದೃಷ್ಟಿಯು ಪ್ರಖರವಾದಂತೆಲ್ಲಾ, ಇಡೀ ದೇಹ ಪ್ರಾಣ ಮನ ಬುದ್ಧಿ ಚಿತ್ತ ಅಹಂಕಾರಗಳೆಲ್ಲಾ ದೈವೀ ಉಪಕರಣಗಳಾಗಿ ದಿವ್ಯವಾಗಿ ರೂಪಾಂತರಿಸಲ್ಪಟ್ಟು ದೈವೀ ಪ್ರೇರಿತವಾದ 'ದಿವ್ಯಜೀವನ' ಸಾಧ್ಯವಾಗುತ್ತದೆ ಎಂಬುದೇ ಶ್ರೀ ಅರವಿಂದರ ಭೂಬಾಳಿನ 'ನಿದರ್ಶನ'ವಾಗಿದೆ.

**ಪೂರ್ಣಯೋಗ ಸಾಧಕ ಅರಿತಿರಬೇಕಾದ ಸಂಗತಿಗಳು:**

1. ಆಧ್ಯಾತ್ಮಿಕತೆ ನೈತಿಕತೆಗಿಂತ ತೀರ ಭಿನ್ನವಾದುದು.
2. ಆಧ್ಯಾತ್ಮಿಕತೆ ಅವನ ಮಾನಸಿಕತೆಗಿಂತ ಅವನ 'ಪ್ರಜ್ಞೆ'ಯನ್ನು ಅವಲಂಬಿಸಿದೆ.
3. ದೈವೀ ಪ್ರಜ್ಞೆಯೊಂದಿಗೆ ನಮ್ಮ ಪ್ರಜ್ಞೆ ಒಂದಾದಾಗ ದೈವೀ ಶಕ್ತಿ, ಜ್ಯೋತಿ, ಶಾಂತಿ, ಆನಂದ ಇವು ಅವನ ಸತ್ತೆಗೆ ಇಳಿಯುತ್ತವೆ.
4. ದೈವೀ ಶಕ್ತಿ, ಜ್ಯೋತಿ, ಆನಂದ ಇವು ಸಾಧಕನ ಪ್ರಾಣಿಕ, ಮಾನಸಿಕ ಹಾಗೂ ಅಧ್ಯಯನದ ಪರಿವರ್ತನೆಗೆ ತೊಡಗುತ್ತವೆ.
5. ಇಡೀ ಅಸ್ತಿತ್ವವನ್ನು ಭಗವಂತನ ಪ್ರಜ್ಞೆಗೆ ಒಪ್ಪಿಸಿದಾಗ ಎದುರಾಗುವ 'ಪರಿಸ್ಥಿತಿ'ಗಳನ್ನು ವಿಧೇಯವಾಗಿ ಸ್ವೀಕರಿಸಲು ಸರ್ವದಾ ಸಿದ್ಧವಿರಬೇಕು. ಪ್ರತಿ"ರೋಧ" ಸಲ್ಲದು.
6. ಸಾಧಕ ತನ್ನ 'ಪರಿಸ್ಥಿತಿ' ಮತ್ತು ಪರಿಸರಗಳಲ್ಲಿ, ಪ್ರಾಣಿಕ ಮಾನಸಿಕ ಸಂಬಂಧಗಳನ್ನು ಎಚ್ಚರದಿಂದ ನಿರುಕಿಸಬೇಕು.
7. ದೈವೀ ಶಕ್ತಿಗಳು ಮತ್ತು ಅಸುರೀ ಶಕ್ತಿಗಳ ಕಾರ್ಯ ವಿಧಾನಗಳನ್ನು ಎಚ್ಚರದಿಂದ ಅರಿತು ದೈವೀ ಶಕ್ತಿಗಳಿಗೆ ಸದಾ ಮುಕ್ತತೆಯಿಂದ ಸ್ಪಂದಿಸುತ್ತಿರಬೇಕು, ಅಸುರೀ ಶಕ್ತಿಗಳನ್ನು ಸದಾ ಎಚ್ಚರಿಕೆಯಿಂದ ನಿವಾರಿಸುತ್ತಿರಬೇಕು.
8. ಶಾಂತಿ, ಸಮತೆ, ಸಹನೆಗಳಿಂದ ಪ್ರಗತಿಯ ಗತಿ ತೀವ್ರವಾಗಿರಲಿ, ನಿಧಾನವಾಗಿರಲಿ ಅನುಲಕ್ಷಿಸುತ್ತಿರಬೇಕು, ಯಾವುದೇ ಆತುರ, ಒತ್ತಾಯ, ಒತ್ತಾಸೆಗಳನ್ನು ಹೇರಬಾರದು.

9. ದೈವೀ ಶಕ್ತಿಗೆ ನಿಮ್ಮ 'ಪರಿವರ್ತನೆ' ಹೇಗೆ ಮಾಡುವುದು ಎಂಬುದು ತಿಳಿದಿರುತ್ತದೆ ಎಂದು ತಿಳಿದುಕೊಳ್ಳಬೇಕು.

**ಪೂರ್ಣಯೋಗ ಪಥ**

ಸರ್ವತೋಮುಖ ತೃಪ್ತಿಕಾರಕವಾದ ಈ ಯುಗದ ಏಕೈಕ ಪ್ರತಿಭೆ ಶ್ರೀ ಅರವಿಂದರರದು. ಅತ್ಯಂತ ಪವಿತ್ರವೂ ಶಾಂತವೂ ಆದ ಅವರ ದರ್ಶನ ದೀಪ್ತ ಭಾವಚಿತ್ರವನ್ನು ನಿತ್ಯವೂ ವೀಕ್ಷಿಸುವುದೂ ಒಂದು ಪೂಜೆಯೆಂದು ಭಾವಿಸಬಹುದು. ಅವರ ನಿರ್ಮಲ ಅಂತರಂಗದ ದೀಪ್ತಿಯು ಅವರ ನೇತ್ರದ್ವಯಗಳಿಂದ ಸದಾ ಸೂಸುತ್ತಿರುವಂತೆ ತೋರುತ್ತದೆ. ನೋಡುತ್ತಾ ಇರುವಂತೆ ಲೌಕಿಕ ವೃತ್ತಿಗಳೆಲ್ಲವೂ ಅಡಗಿ ಹೋಗುವುವು. ಭೂಮಭಾವದ ದೈವೀ ಭವ್ಯತೆಯೊಂದು ನಮ್ಮ ಚೇತನವನ್ನು ತುಂಬಿಕೊಳ್ಳುತ್ತದೆ.

ಶ್ರೀ ಅರವಿಂದರ ಅವ್ಯಕ್ತ ಆಧ್ಯಾತ್ಮಿಕ ಚೇತನವನ್ನು ಪರಿಚಯಿಸಿಕೊಳ್ಳುವುದೂ ಒಂದು ತಪಸ್ಸೇ ಆಗುತ್ತದೆ, ಅತ್ಯಂತ ಏಕಾಗ್ರತೆಯಿಂದ ಅವರ ವಾಙ್ಮಯದಲ್ಲಿನ ಈಕ್ಷತ್ ಪರಿಚಯ ನಮಗಾಗತೊಡಗಿದಂತೆ ಹಿಮಾಲಯದ ಭವ್ಯತೆಯು ಸಾಗರದ ವೈಶಾಲ್ಯತೆಯೂ ನಮ್ಮ ಚೇತನದಲ್ಲಿ ಅರಳತೊಡಗುತ್ತದೆ. ಅಂತಹ ಅತ್ಯಪೂರ್ವವಾದ ದಿವ್ಯವಾದ ಆಧ್ಯಾತ್ಮಿಕ ಚೇತನ ಶ್ರೀ ಅರವಿಂದರು.

ಭವ್ಯವಾದ ಅವರ ವ್ಯಕ್ತಿತ್ವ ವಾಚಕರ ಅಲ್ಪತೆಯನ್ನು ತೊಲಗಿಸಿ ಭೂಮಕ್ಕೇರಿಸುತ್ತದೆ. ಹೃದಯದ ಭಾವ ವಿಸ್ತಾರ ಅನಂತತೆಗೇರುತ್ತದೆ, ಅಂತಹ ಸಾಧನೆ ಅವರ ಸಾಹಿತ್ಯವನ್ನು ಓದುವುದು. ಏಕೆಂದರೆ ಅವರು ಬರೆದಿರುವುದು ಮನಸ್ಸಿನ ಮಟ್ಟದಿಂದಲ್ಲ, ಅತಿಮಾನಸ ಮತ್ತು ಅಧಿಮಾನಸದ ಎತ್ತರದಿಂದ. ಅವರ ಶಕ್ತಿ ಸರ್ವತೋಮುಖವಾಗಿ ಮಹೋನ್ನತವಾಗಿ ಅವರ ಕೃತಿ ಶ್ರೇಣಿಗಳಲ್ಲಿ ಅವತರಣಗೊಂಡಿದೆ ಎನ್ನಬಹುದು.

ಅವರ Life Divine, Essays on Gita, Synthesis of Yoga, Ideal of Human Unity, The Secret of Veda, Future Poetry, Savitri ಮೊದಲಾದ ಕೃತಿ ಶ್ರೇಣಿಗಳನ್ನು ಪೂರ್ಣವಾಗಿ ಗ್ರಹಿಸುವುದೆಂದರೆ ಅದೊಂದು ಮಹಾಸಾಧನೆಯಾಗುತ್ತದೆ. ಶ್ರೀ ಅರವಿಂದರ ಈ ಕೃತಿಗಳೆಲ್ಲವೂ ಪ್ರಜ್ಞೆಯ ಸರ್ವೋಚ್ಚ ಶೃಂಗಗಳಲ್ಲಿ ರೂಪಗೊಂಡವು ಎಂಬುದು ವಾಚಕನಿಗೆ ಗೋಚರವಾಗುವುದೂ ಕೂಡ ಪುಣ್ಯ ವಿಶೇಷವಿದ್ದರೆ ಮಾತ್ರ!

ಪೌರ್ವಾತ್ಯ, ಪಾಶ್ಚಿಮಾತ್ಯ, ತತ್ತ್ವಶಾಸ್ತ್ರ, ಮನಃಶಾಸ್ತ್ರ, ವಿಜ್ಞಾನಗಳ ಆಳವಾದ ಪಾಂಡಿತ್ಯ ಮತ್ತು ಸ್ವಾನುಭವ ಸಿದ್ಧಿಯಿಂದ ಮೈತಳೆದ ಅವರ ಕೃತಿಗಳೆಲ್ಲವೂ ಪೂರ್ಣ ದೃಷ್ಟಿಗೆ ನಿಲುಕುವಂತಹ ಕೃತಿ ರತ್ನಗಳಾಗಿವೆ. ಸಾಕಷ್ಟು ಅಧ್ಯಯನದ ಮೂಲಕ ವ್ಯುತ್ಪತ್ತಿ ಶಕ್ತಿಯನ್ನು ಅರ್ಜಿಸದೆ ಶ್ರೀ ಅರವಿಂದರ ಸಾಹಿತ್ಯ ಪ್ರವೇಶ ಕಷ್ಟ, ಏಕೆಂದರೆ ಯಾವುದು ಗೀತೆ, ಉಪನಿಷತ್ತು, ವೇದಗಳಲ್ಲಿ ಪ್ರಚುರಗೊಂಡಿದೆಯೇ ಆ 'ದಿವ್ಯ ದರ್ಶನ'ವು ಶ್ರೀ ಅರವಿಂದರಲ್ಲಿ ಪೂರ್ಣಯೋಗದ ಸಾಧನೆಯ ಫಲಿತವಾಗಿ ವೈಜ್ಞಾನಿಕವಾಗಿ, ಯೌಗಿಕವಾಗಿ, ದಾರ್ಶನಿಕವಾಗಿ 'ಪಾರಲೌಕಿಕ'ಗಳಿಕೆ ಎರಡನ್ನೂ ಆಲಂಗಿಸಿ ಅಭಿವ್ಯಕ್ತಿಗೊಳಿಸಲಾಗಿದೆ.

ಸಿದ್ಧ ಪುರುಷರಾದ ಶ್ರೀ ಅರವಿಂದರು ತಮ್ಮ ತಪಸ್ಸಿನಿಂದ ಕಂಡ ಸತ್ಯವೇನೆಂದರೆ ಈ ಪ್ರಕೃತಿ ಅತೀತದ ಅವತರಣಕ್ಕೆ ಕಾತರಿಸಿದೆ. ಈ ಕಾರ್ಯದಲ್ಲಿ ಅದು ತೊಡಗಿದೆ. ಅದರ ಗತಿ ನಿಧಾನವಾದರೂ 'ಸಿದ್ಧಿ'ಯತ್ತ ನಡೆದಿದೆ. ಅಂತಹ ಸಿದ್ಧಿ ಮನುಷ್ಯತ್ವದ ಒಳಗೊಳ್ಳುವಿಕೆಯ ಮೂಲಕ ಕ್ಷಿಪ್ರಗೊಂಡು ಅಪೂರ್ವವಾದ ಮಾನವ ಚೇತನಗಳಲ್ಲಿ 'ದಿವ್ಯಗೊಂಡು' ದೈವಿ ಭವ್ಯತೆ ಭೂತಲದಲ್ಲಿ ಮೈದಾಳಲಿದೆ ಎಂಬುದು ಶ್ರೀ ಅರವಿಂದ ಮಹರ್ಷಿಗಳ ದರ್ಶನವಾಗಿದೆ.

**ಪೂರ್ಣಯೋಗದ ಸಾಧನೆಯ ಮೆಟ್ಟಿಲುಗಳು:**

1. ಮನಸ್ಸು ಅಚಂಚಲವಾಗಿ ನೆಲೆಗೊಳ್ಳಬೇಕು.
2. ಉನ್ನತ ಪ್ರಜ್ಞೆಗೆ ಸದಾ ತೆರೆದಿರಿಸಿಕೊಂಡಿರಬೇಕು.
3. ಸದಾ ಶಾಂತಿ ಮತ್ತು ಸಮತೆ, ನಿಶ್ಯಬ್ಧತೆಯಲ್ಲಿ ಅನುಸಂಧಾನ ನಡೆಸಬೇಕು.
4. ಶ್ರದ್ಧೆ, ಅಭೀಪ್ಸೆ ಸಮರ್ಪಣೆ ನಿರಂತರವಾಗಿರಬೇಕು.
5. ಪ್ರಾಣಿಕದ ದುರಾಗ್ರಹದಿಂದ ಮುಕ್ತವಾಗಿರಬೇಕು.
6. ಯಾವುದೇ ಕ್ರಿಯೆ ದೈವೀ ಸಂಕಲ್ಪಕ್ಕೆ ಅನುಗುಣವಾಗಿ ನಡೆಯಬೇಕು. ವೈಯಕ್ತಿಕ 'ಅಹಂ' ಪ್ರೇರಣೆಯಿಂದ ಯಾವುದೂ ಚಲಿಸಬಾರದು.
7. 'ಕಾಮ'ವು ಉದಾತ್ತೀಕರಣಗೊಂಡು 'ಪ್ರೇಮ'ವಾಗಿ ರೂಪುಗೊಳ್ಳಬೇಕು.

(ಸಶೇಷ)

# ವಾರ್ತಾಪತ್ರ

## ಶ್ರೀ ಅರವಿಂದ ಸಂಕೀರ್ಣ

ಜೆ.ಪಿ.ನಗರ 1ನೇ ಹಂತ, ಬೆಂಗಳೂರು

ದಿನಾಂಕ 15/08/2024 ಗುರುವಾರ ಮೀರಾಂಬಿಕ ಸ್ಕೂಲ್ ಫಾರ್ ನ್ಯೂ ಏಜ್ ಶಿಕ್ಷಣ ಸಂಸ್ಥೆಯಲ್ಲಿ 78ನೇ ಸ್ವಾತಂತ್ರ್ಯ ದಿನಾಚರಣೆ ಮತ್ತು ಮಹರ್ಷಿ ಶ್ರೀ ಅರವಿಂದರ 152ನೇ ಜನ್ಮ ದಿನಾಚರಣೆಯನ್ನು ಆಚರಿಸಲಾಯಿತು. ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಸಂಸ್ಥೆಯ ಮಹಾಪ್ರಬಂಧಕರಾದ ಶ್ರೀಯುತ ರವಿಶಂಕರ್‌ರವರು ಆಗಮಿಸಿ ಧ್ವಜಾರೋಹಣ ಮಾಡಿ ಸ್ವಾತಂತ್ರ್ಯಕ್ಕಾಗಿ ಹೋರಾಡಿ ಮಡಿದ ಮಹನೀಯರ ಆದರ್ಶ ಗುಣಗಳನ್ನು ವಿದ್ಯಾರ್ಥಿಗಳು ತಮ್ಮ ಧೈರ್ಯವಾಗಿ ಸ್ವೀಕರಿಸಬೇಕು ಎಂದು ಹಿತವಚನ ನೀಡಿದರು. ವಿದ್ಯಾರ್ಥಿಗಳು ಭಾಷಣ, ನಾಟಕ, ನೃತ್ಯ, ದೇಶಭಕ್ತಿ ಗೀತೆಗಳನ್ನು ಹಾಡಿ ರಂಜಿಸಿದರು. ವಂದೇ ಮಾತರಂ ಗೀತೆಯೊಂದಿಗೆ ಕಾರ್ಯಕ್ರಮ ಸಮಾಪ್ತಿಯಾಯಿತು. ಕಾರ್ಯಕ್ರಮದಲ್ಲಿ ಶಾಲಾ ಪ್ರಾಂಶುಪಾಲರು ಶಿಕ್ಷಕ ವೃಂದದವರು ಭಾಗವಹಿಸಿದರು.

ದಿನಾಂಕ 15/08/2024 ಗುರುವಾರ ಶ್ರೀ ಅರವಿಂದರ 152ನೇ ಜನ್ಮ ದಿನಾಚರಣೆ ಕಾರ್ಯಕ್ರಮವನ್ನು ಶ್ರೀ ಅರವಿಂದ ಸಂಕೀರ್ಣದಲ್ಲಿ ಏರ್ಪಡಿಸಲಾಗಿತ್ತು. ಬೆಳಿಗ್ಗೆ 10.30 ರಿಂದ 10.50 ರವರೆಗೆ ಸಾಮೂಹಿಕ ಧ್ಯಾನ, ಪ್ರಸಾದ ವಿನಿಯೋಗ ಹಾಗೂ ಸಂದೇಶ ಪತ್ರವನ್ನು ವಿತರಿಸಲಾಯಿತು. ತತ್ಸಂಬಂಧ 11.00 ರಿಂದ 12.00 ರವರೆಗೆ ಪ್ರೊ. ಪಿ.ಕೆ. ನಂದೀಶ ಇವರು "ಶ್ರೀ ಅರವಿಂದರ ಪೂರ್ಣ ಯೋಗ ಪಥ" ಕುರಿತು ಕನ್ನಡದಲ್ಲಿ ಉಪನ್ಯಾಸ ನೀಡಿದರು. ಉಪನ್ಯಾಸ ಕಾರ್ಯಕ್ರಮದಲ್ಲಿ ಅನೇಕ ಗುರು–ಬಂಧುಗಳು ಮತ್ತು ಶ್ರೀಮಾತಾರವಿಂದರ ಭಕ್ತರು ಭಾಗವಹಿಸಿದ್ದರು. ಜೂಮ್ ಹಾಗೂ ಯೂಟ್ಯೂಬ್ ಮುಖಾಂತರ ಆಸಕ್ತರು ಭಾಗವಹಿಸಿದ್ದರು.

**"On Rebirth"** ವಿಷಯ ಕುರಿತು ದಿನಾಂಕ 10ನೇ ಜೂನ್ 2024 ರಿಂದ 11ನೇ ಆಗಸ್ಟ್ 2024 ವರೆಗೂ ಶ್ರೀ ಅರವಿಂದ ಸಂಕೀರ್ಣದ ಸಾಂಸ್ಕೃತಿಕ ಸಭಾ ಭವನದಲ್ಲಿ ಫೋಟೋ ಚಿತ್ರಪ್ರದರ್ಶನ ಆಯೋಜಿಸಲಾಗಿದೆ.



ಫೋಟೋ: ಇಮೇಜಿಂಗ್ ಸಾವಿತ್ರಿ

ಮಂತ್ರ–ಮಾಯಕದ ರಹಸ್ಯೋದ್ಘಾಟ ಶ್ರುತಿಬದ್ಧಗೊಂಡು ರೂಪ
ದೀರ್ಘಗೊಳ್ಳುತಿದೆ ಅದರ ಸಮ್ಮುಖವು ಪ್ರತಿಬೋಧದಲ್ಲಿ ದೀಪ

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 2 ರೇಣು 2 ಪುಟ 103)**

**RNI No. 22511/1971**
No. of Pages **64 + 4 (Cov. Page)**
KAR Reg No.: RNP/KA/BGS/368/2024-2026
Licensed to post without prepayment License No.PMG BG/WPP-409/2024-2026
Kannada Monthly Magazine
Date of Publication on 7th of Every Month
Permitted to Post 10th of Every Month. Reg. Valid till: 31-12-2026
Licensed to Post at BG PSO, Mysuru Road, Bengaluru - 560 026



ಸೂರ್ಯತೇಜದಲಿ ಪಡಿಮೂಡಿಕೊಂಡ ಸೌಂದರ್ಯ ಪಥಗಳನ್ನು
ಸತತ ಧ್ಯಾನದಲಿ ಆತ್ಮಭಾವದಲಿ ಶೋಧಕರು ಕಂಡರಿನ್ನು

**– ಪುಟ್ಟು ಕುಲಕರ್ಣಿ**
**(ಶ್ರೀ ಅರವಿಂದರ 'ಸಾವಿತ್ರಿ'; ದಳ 3 ರೇಣು 4 ಪುಟ 344)**

Ed. Sri Puttu Parashuram Kulkarni, Pub: Dr. Ajit Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase, Bengaluru - 560 078. Phone: 080 - 22449882.